ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 1 ಮಂಗಳವಾರ 2025

ಸಂಪುಟ: 46 | ಸಂಚಿಕೆ: 75 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಆರ್‌ಎಸ್ ಜಲಾಶಯದಲ್ಲಿ ತುಂಬಿ ತುಳುಕುತ್ತಿರುವ ಕಾವೇರಿಗೆ

ಸಿಎಂ ಸಿದ್ದರಾಮಯ್ಯ ಬಾಗಿನ ಅರ್ಪಣೆ

● ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರು, ಶಾಸಕರು, ಅಧಿಕಾರಿಗಳ ಸಾಥ್ ● 92 ವರ್ಷಗಳ ಬಳಿಕ ಈ ಬಾರಿ ಜೂನ್‌ನಲ್ಲೇ ಅಣೆಕಟ್ಟೆ ಭರ್ತಿ ● ಮದುವಣಗಿತ್ತಿಯಂತೆ ಕಂಗೊಳಿಸಿದ ಜಲಾಶಯ, ಗಮನ ಸೆಳೆದ ಸಾಂಸ್ಕೃತಿಕ ಕಲಾತಂಡಗಳು ● ನಾಲ್ವಡಿ, ಸರ್‌ಎಂವಿ, ಕಾವೇರಿ ಮಾತೆ ಸ್ಮರಿಸಿ ನಮಿಸಿದ ಗಣ್ಯರು; ಡಿಕೆಶಿ ವಿಶೇಷ ಪ್ರಾರ್ಥನೆ!

ಕೃಷ್ಣರಾಜಸಾಗರ, ಜೂ.30(ಮೋಹನ್ ರಾಜ್/ ವಿನಯ್)– ಕೃಷ್ಣರಾಜಸಾಗರ ಅಣೆಕಟ್ಟೆ ನಿರ್ಮಾಣವಾದ 92 ವರ್ಷಗಳ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಜೂನ್ ತಿಂಗಳಲ್ಲೇ ಭರ್ತಿಯಾಗಿದ್ದು, ಅದೇ ತಿಂಗಳು ಕಾವೇರಿಗೆ ಬಾಗಿನ ಅರ್ಪಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ಬರೆದರು.

ಜಲಸಂಪನ್ಮೂಲ ಇಲಾಖೆ, ಕಾವೇರಿ ನೀರಾವರಿ ನಿಗಮ, ಮಂಡ್ಯ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ಕೃಷ್ಣರಾಜಸಾಗರ ಅಣೆಕಟ್ಟೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟ ಸಹೋದ್ಯೋಗಿಗಳು ಹಾಗೂ ಶಾಸಕರೊಂದಿಗೆ ಆಗಮಿಸಿದ ಮುಖ್ಯಮಂತ್ರಿಗಳು ಸೋಮವಾರ ಮಧ್ಯಾಹ್ನ 1.36ರ ಶುಭವೇಳೆ ಬಾಗಿನ ಅರ್ಪಿಸಿದರು.

ಬಸ್‌ನಲ್ಲಿ ಬಂದ ಸಿಎಂ ಟೀಂ: ಬೆಂಗಳೂರಿನಿಂದ ಹೆಲಿಕ್ಯಾಪ್ಟರ್ ಮೂಲಕ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬಂದ ಸಿಎಂ, ಡಿಸಿಎಂ ಮತ್ತು ಅವರ ತಂಡ ಐರಾವತ ಕ್ಲಬ್ ಕ್ಲಾಸ್ ಬಸ್‌ನಲ್ಲಿ ಮಧ್ಯಾಹ್ನ 1.15ಕ್ಕೆ ಕೆಆರ್‌ಎಸ್ ಜಲಾಶಯಕ್ಕೆ ಆಗಮಿಸಿದರು. ಸಿಎಂ ಮತ್ತು ಡಿಸಿಎಂಗೆ ಮಂಡ್ಯ ಜಿಲ್ಲಾಡಳಿತದಿಂದ ಸ್ವಾಗತ ಕೋರಲಾಯಿತು. ಸಾಂಸ್ಕೃತಿಕ ಕಲಾತಂಡಗಳು ಅದ್ಧೂರಿ ಸ್ವಾಗತ ಕೋರಿದವು.


ರೈತ ಮುಖಂಡರು, ದಸಂಸ ಕಾರ್ಯಕರ್ತರು ಹಾಗೂ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಬಳಿಕ ಸಿಎಂ, ಡಿಸಿಎಂ ಮತ್ತು ಗಣ್ಯರು ವಿಶೇಷ ವಾಹನದಲ್ಲಿ ಡ್ಯಾಂನ ಹೆಬ್ಬಾಗಿಲಿನಿಂದ ಬಾಗಿನ ಅರ್ಪಿಸುವ ಸ್ಥಳಕ್ಕೆ ಆಗಮಿಸಿದರು. ಅಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ವೇದಬ್ರಹ್ಮ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ವೈದಿಕ ತಂಡ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಸಿಎಂ, ಡಿಸಿಎಂ ಆಗಮಿಸುತ್ತಿದ್ದಂತೆ ವಿಶೇಷ ಪೂಜೆಯಲ್ಲಿ ಭಾಗಿಯಾದರು. ಇದೇ ಸಂದರ್ಭದಲ್ಲಿ ಪರ್ಜನ್ಯದಿ ದೇವತೆಗಳ ಹೋಮ ಮತ್ತು ಪೂಜೆಯನ್ನು ನೆರವೇರಿಸಲಾಯಿತು.

ಬಳಿಕ ಬಾಗಿನ ಅರ್ಪಿಸುವ ಸ್ಥಳದಲ್ಲಿ ಮೊದಲು ಕಾವೇರಿ ಮಾತೆಗೆ ಪುಷ್ಪಾರ್ಚನೆ ಮಾಡಿ, ಪವಿತ್ರ ತೀರ್ಥದ ಪ್ರೋಕ್ಷಣೆ ಮಾಡಲಾಯಿತು. ನಂತರ ವಸ್ತ್ರ ಸಮರ್ಪಣೆ, ಅಕ್ಷತೆ, ಅರಿಶಿನ– ಕುಂಕುಮ, ಪೂಜಾ ಸಾಮಗ್ರಿಗಳನ್ನು ಕಾವೇರಿ ನದಿಗೆ ಅರ್ಪಿಸಲಾಯಿತು. ಬಳಿಕ 1.36ರ ಶುಭ ಲಗ್ನದಲ್ಲಿ ಸಿಎಂ ಮತ್ತು ಡಿಸಿಎಂ ಬಾಗಿನ ಅರ್ಪಣೆ ಮಾಡಿದರು.

ಕಾವೇರಿ ಮಾತೆಗೆ ಪೂಜೆ: ಬಾಗಿನ ಅರ್ಪಿಸಿದ ನಂತರ ಸಿಎಂ ಮತ್ತು ಡಿಸಿಎಂ ಡ್ಯಾಂನ ಕೆಳಭಾಗದಲ್ಲಿರುವ ಕಾವೇರಿ ಮಾತೆಗೆ ಪುಷ್ಪಾರ್ಚನೆ ನೆರವೇರಿಸಿ, ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ನಾಡಿಗೆ ಒಳಿತಾಗಲಿ ಎಂದು ಉಭಯ ನಾಯಕರು ಪ್ರಾರ್ಥಿಸಿದರು.

ತುಂಬು ಗರ್ಭಿಣಿಗೆ ಬಾಗಿನ ಕೊಟ್ಟಂತೆ ಕಾವೇರಿಗೂ ಬಾಗಿನ: ಬಾಗಿನದ ಮಹತ್ವ ವಿವರಿಸಿದ ಡಾ.ಭಾನುಪ್ರಕಾಶ್ ಶರ್ಮಾ, ತುಂಬು ಗರ್ಭಿಣಿಗೆ ಸೀಮಂತದ ಸಮಯದಲ್ಲಿ ಬಾಗಿನ ನೀಡುವಂತೆ ಅಷ್ಟೇ ಪವಿತ್ರವಾದ ಬಾಗಿನವನ್ನು ಕಾವೇರಿ ▶ 9ನೇ ಪುಟಕ್ಕೆ



ಸೋಮವಾರ ಕೆಆರ್‌ಎಸ್ ಜಲಾಶಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾವೇರಿಗೆ ಬಾಗೀನ ಅರ್ಪಿಸಿದರು. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಚೆಲುವರಾಯಸ್ವಾಮಿ, ಶಾಸಕ ತನ್ವೀರ್ ಸೇಠ್ ಇತರರು ಉಪಸ್ಥಿತರಿದ್ದಾರೆ.

ಈ ಸರ್ಕಾರ ಐದು ವರ್ಷ ಸುಭದ್ರ, 2028ಕ್ಕೂ ನಮಗೇ ಅಧಿಕಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ

ಎಲ್ಲಾ ಜಲಾಶಯಗಳೂ ತುಂಬಿವೆ, ನಾಲೆಗಳಿಗೆ ತಕ್ಷಣದಿಂದ ನೀರು ಹರಿಸಲು ಆದೇಶ

ಕೃಷ್ಣರಾಜಸಾಗರ, ಜೂ.30(ಮೋಹನ್ ರಾಜ್)– ನಮ್ಮ ಸರ್ಕಾರ ಬಿದ್ದೋಗುತ್ತೆ ಎಂದು ಸೋತ ಗಿರಾಕಿಗಳು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಐದು ವರ್ಷ ಬಂಡೆ ರೀತಿ ಇರಲಿದ್ದು, 2028ರಲ್ಲೂ ನಾವೇ ಗೆದ್ದು ಅಧಿಕಾರಕ್ಕೆ ಬರುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಕೆಆರ್‌ಎಸ್‌ಗೆ ಬಾಗಿನ ಅರ್ಪಣೆ ಕಾರ್ಯಕ್ರಮದ ಬಳಿಕ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನೀರಾವರಿಗೆ ಈ ಸರ್ಕಾರ 25 ಸಾವಿರ ಕೋಟಿ ಕೊಟ್ಟಿದೆ. ಬೇರೆ ಯಾವ ಸರ್ಕಾರವಾದರೂ ಈ ಮಟ್ಟದ ಅನುದಾನ ಕೊಟ್ಟಿತ್ತಾ ಎಂದು ಪ್ರಶ್ನಿಸಿದ ಅವರು, ಸೋತ ಗಿರಾಕಿಗಳು ಸರ್ಕಾರ ಬಿದ್ದೋಗುತ್ತದೆ ಎಂದು ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ನನಗೂ, ಡಿ.ಕೆ.ಶಿವಕುಮಾರ್ ಅವರಿಗೂ ಸರಿ ಇಲ್ಲ ಎಂದು ಬುರುಡೆ ಬಿಡುತ್ತಿದ್ದಾರೆ. ನಾನು ಮತ್ತು ಶಿವಕುಮಾರ್ ಇಬ್ಬರೂ ಒಟ್ಟಾಗಿ, ಗಟ್ಟಿಯಾಗಿದ್ದೀವಿ. ನಮ್ಮ ಸರ್ಕಾರವೂ ಐದು ವರ್ಷ ಗ್ಯಾರಂಟಿಯಾಗಿ ಗಟ್ಟಿಯಾಗಿ ಇರುತ್ತದೆ. 2028ರಲ್ಲೂ ಗೆದ್ದು ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂದು ಘೋಷಿಸಿದರು.

ಅಭಿವೃದ್ಧಿಗೆ ಹಣ ಇಲ್ಲ, ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ಬುರುಡೆ ಬಿಡುತ್ತಿರುವ ▶ 9ನೇ ಪುಟಕ್ಕೆ

ಮೇಕೆದಾಟು ಯೋಜನೆ ಜಾರಿಗೆ ನಾವು ಸನ್ನದ್ಧ; ಕನಕಪುರದಲ್ಲಿ ಈಗಾಗಲೇ ಕಚೇರಿ ತೆರೆಯಲಾಗಿದೆ

ಮೈಸೂರಿನಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ

ಮೈಸೂರು, ಜೂ.30(ಬಿಎಲ್‌ಯು)– ಕಾವೇರಿ ನದಿ ನೀರನ್ನು ಹಿಡಿದಿಟ್ಟುಕೊಂಡು ಕರ್ನಾಟಕದ ಸಾವಿರಾರು ಪ್ರದೇಶಗಳಿಗೆ ಕುಡಿಯುವ ನೀರೊದಗಿಸುವ ಹಾಗೂ ವಿದ್ಯುತ್ ಉತ್ಪಾದನೆ ಉದ್ದೇಶಿತ ಮೇಕೆದಾಟು ಯೋಜನೆಯನ್ನು ಜಾರಿಗೆ ತರಲು ನಾವು ಸನ್ನದ್ಧರಾಗಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ತಮಿಳುನಾಡಿಗೆ ಹೆಚ್ಚುವರಿಯಾಗಿ ಕಾವೇರಿ ನದಿ ನೀರು ಹರಿದು ಹೋಗುತ್ತಿದೆ ಇದರಿಂದ ಅವರ ಅಚ್ಚುಕಟ್ಟು ಪ್ರದೇಶ ಹೆಚ್ಚಾಗುತ್ತಿದೆ ಎಂದರು. ಹಾಗೆಯೇ ನಮ್ಮ ಅಚ್ಚುಕಟ್ಟು ಪ್ರದೇಶ ಶೇಕಡ 6 ರಷ್ಟು ಹೆಚ್ಚಾಗಿದೆ. ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ತರಲು ನಾವು ಸನ್ನದ್ಧರಾಗಿದ್ದು, ನ್ಯಾಯಾಲಯದಲ್ಲಿ ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಕನಕಪುರದಲ್ಲಿ ಈಗಾಗಲೇ ಮೇಕೆದಾಟು ಕಚೇರಿ ತೆರೆಯಲಾಗಿದೆ. ಯೋಜನೆ ಜಾರಿ ಮಾಡಿದರೆ ಮುಳುಗಡೆಯಾಗುವ ▶ 9ನೇ ಪುಟಕ್ಕೆ

ನಾವು ಒಗ್ಗಟ್ಟಾಗಿದ್ದೇವೆ; ನಮ್ಮ ಸರ್ಕಾರ ಬಂಡೆಯಂತೆ ಗಟ್ಟಿಯಾಗಿದೆ!

■ ಡಿ.ಕೆ.ಶಿವಕುಮಾರ್ ಕೈ ಹಿಡಿದು ಮೇಲೆತ್ತಿ ಒಗ್ಗಟ್ಟು ಪ್ರದರ್ಶಿಸಿದ ಸಿಎಂ ಸಿದ್ದರಾಮಯ್ಯ ■ ಸರ್ಕಾರ ಪತನದ ಭವಿಷ್ಯ ನುಡಿದಿದ್ದ ವಿರೋಧ ಪಕ್ಷಗಳಿಗೆ ತಿರುಗೇಟು ■ ಈ ಬಾರಿ ದಸರಾ ಜಂಬೂ ಸವಾರಿಯನ್ನು ನಾನೇ ಉದ್ಘಾಟಿಸುವೆ ■ 5 ವರ್ಷ ಸಮರ್ಥ ಆಡಳಿತ ನೀಡುತ್ತೇವೆ ■ ನಮ್ಮಲ್ಲಿ ಒಡಕು ಮೂಡಿಸುವ ಪ್ರಯತ್ನ ಫಲಿಸದು ■ ಸುರ್ಜೇವಾಲರಿಂದ ಶಾಸಕರ ಅಳಲು ಆಲಿಕೆಗೆ ಬೇರೆ ಅರ್ಥ ಬೇಡ

ಮೈಸೂರು, ಜೂ.30(ಬಿಎಲ್‌ಯು)– ನಾನು ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೂ ಒಗ್ಗಟ್ಟಾಗಿದ್ದೇವೆ. ಬಂಡೆಯಂತೆ ಇರುವ ಈ ಸರ್ಕಾರದಿಂದ ಐದು ವರ್ಷಗಳ ಕಾಲ ಸಮರ್ಥವಾಗಿ ಆಡಳಿತ ನಡೆಸಲಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಒಂದೆರಡು ತಿಂಗಳಲ್ಲಿ ಸರ್ಕಾರ ಪತನವಾಗಲಿದೆ ಎಂಬ ಬಿಜೆಪಿ ಹೇಳಿಕೆಗೆ ತಿರುಗೇಟು ನೀಡಿದ ಸಿದ್ದರಾಮಯ್ಯ, ಸ್ವತಃ ಡಿ.ಕೆ.ಶಿವಕುಮಾರ್ ಅವರ ಕೈ ಹಿಡಿದು ಮೇಲೆತ್ತಿ ಒಗ್ಗಟ್ಟು ಪ್ರದರ್ಶನ ಮಾಡುವ ಮೂಲಕ ಈ ಸರ್ಕಾರ ಬಂಡೆಯಂತೆ ಗಟ್ಟಿಯಾಗಿದ್ದು, ಐದು ವರ್ಷಗಳ ಕಾಲ ಸುಭದ್ರ ಆಡಳಿತ ನೀಡಲಿದೆ ಎಂದು ಭರವಸೆ ನೀಡಿದರು. ಸಿದ್ದರಾಮಯ್ಯ ಅವರು ತಮ್ಮ ಕೈ ಹಿಡಿದು ಮೇಲೆತ್ತಿ ಒಗ್ಗಟ್ಟು ಪ್ರದರ್ಶನ ಮಾಡುವ ವೇಳೆ ಡಿ.ಕೆ.ಶಿವಕುಮಾರ್ ಹಸನ್ಮುಖಿಯಾಗಿ ▶ 9ನೇ ಪುಟಕ್ಕೆ



ಮೈಸೂರು ವಿಮಾನ ನಿಲ್ದಾಣದಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸ್ವತಃ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕೈ ಮೇಲೆತ್ತಿ ಹಿಡಿದು ಮಾಧ್ಯಮಗಳ ಮುಂದೆ ಒಗ್ಗಟ್ಟು ಪ್ರದರ್ಶಿಸಿದರು.

ಹಾಸನದ ಹೃದಯಾಘಾತ ಸರಣಿ ಸಾವಿನ ಬಗ್ಗೆ ತಜ್ಞರಿಂದ ವರದಿ ಪಡೆಯುವೆ

ಮೈಸೂರು, ಜೂ.30– ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ ಸರಣಿ ಸಾವಾಗುತ್ತಿರುವ ಬಗ್ಗೆ ಅಧ್ಯಯನ ನಡೆಸಿ, ತಜ್ಞರಿಂದ ವರದಿ ಪಡೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹೃದಯಾಘಾತ ಹೆಚ್ಚಾಗಲು ಕಾರಣವೇನು ಎಂಬುದಕ್ಕೆ ತಜ್ಞರಿಂದ ಮಾಹಿತಿ ಪಡೆಯಲಾಗುವುದು. ತರುವಾಯ ಇದನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಹಾರಾಷ್ಟ್ರದಂತೆ ಕರ್ನಾಟಕದಲ್ಲೂ ದ್ವಿಭಾಷಾ ಸೂತ್ರ ಶಿಕ್ಷಣ ಪಾಲಿಸಲಾಗುವುದು. ಮೊದಲಿನಿಂದಲೂ ನಾವು ದ್ವಿಭಾಷಾ ಸೂತ್ರದ ಶಿಕ್ಷಣದ ಪರವಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು.


ಕಾವೇರಿ ನ್ಯಾಯ ಮಂಡಳಿ ರಾಜ್ಯಕ್ಕೆ ಹಂಚಿಕೆ ಮಾಡಿರುವ ನೀರನ್ನು ನಾವು ಸಂಪೂರ್ಣ ಬಳಕೆ ಮಾಡಿಕೊಳ್ಳುತ್ತಿದ್ದು, ಅದು ನಮಗೆ ▶ 9ನೇ ಪುಟಕ್ಕೆ

ಅಕ್ಟೋಬರ್ - ನವೆಂಬರ್‌ಗೆ ರಾಷ್ಟ್ರ ರಾಜಕಾರಣಕ್ಕೆ ಬನ್ನಿ...

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಎಐಸಿಸಿ ಅಧ್ಯಕ್ಷ ಖರ್ಗೆ ಆಹ್ವಾನ; ಸಿಎಂ ಆಪ್ತರಿಗೆ ಶಾಕ್

ಬೆಂಗಳೂರು, ಜೂ.30(ಕೆಎಂಶಿ)– ಅಕ್ಟೋಬರ್–ನವೆಂಬರ್ ವೇಳೆಗೆ ರಾಷ್ಟ್ರ ರಾಜಕಾರಣಕ್ಕೆ ಬನ್ನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ ಆಹ್ವಾನ, ಮುಖ್ಯಮಂತ್ರಿ ಅವರ ಆಪ್ತ ಕೂಟದಲ್ಲಿ ತಲ್ಲಣ ಉಂಟುಮಾಡಿದೆ.

ಕಳೆದ ನಾಲ್ಕೈದು ದಶಕಗಳಿಂದ ರಾಜ್ಯದಲ್ಲಿ ಎಲ್ಲಾ ಹಂತದ ಅಧಿಕಾರ ಸವಿದಿದ್ದೀರಿ, ಪಕ್ಷ ಸಂಘಟನೆ ಹಾಗೂ ರಾಷ್ಟ್ರಮಟ್ಟದಲ್ಲಿ ಪಕ್ಷಕ್ಕೆ ನಿಮ್ಮ ಸೇವೆಯ ಅಗತ್ಯವಿದೆ ಬಂದುಬಿಡಿ ಎಂದು ಸೌಮ್ಯವಾಗಿ ಒಂದೇ ಮಾತಿನಲ್ಲಿ ರಾಹುಲ್ ಗಾಂಧಿ ಅವರ ಸಂದೇಶವನ್ನು ಸಿದ್ದರಾಮಯ್ಯ ಅವರಿಗೆ ಖರ್ಗೆ ತಲುಪಿಸಿದ್ದಾರೆ ಎಂಬ ಬಲ್ಲ ಮೂಲಗಳು ತಿಳಿಸಿವೆ. ಆಪ್ತ ಸಚಿವರ ಜೊತೆಗೂಡಿ ಕಳೆದ ವಾರ ದೆಹಲಿಗೆ ತೆರಳಿದ ಸಂದರ್ಭದಲ್ಲಿ ಖರ್ಗೆ ಅವರನ್ನು ಭೇಟಿ ಮಾಡಿ ರಾಜ್ಯ ರಾಜಕಾರಣಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿದ ವೇಳೆ, ಎರಡೇ ಸಾಲಿನಲ್ಲಿ ಪರೋಕ್ಷವಾಗಿ ಅಧಿಕಾರ ಬಿಟ್ಟು ರಾಷ್ಟ್ರ ರಾಜಕಾರಣಕ್ಕೆ ಬನ್ನಿ ಎಂದಿದ್ದಾರೆ. ಈ ಎರಡು ಸಾಲಿನ ಸಂದೇಶದ ▶ 9ನೇ ಪುಟಕ್ಕೆ



ಮಲ್ಲಿಕಾರ್ಜುನ ಖರ್ಗೆ

ಮುಖ್ಯಮಂತ್ರಿ ಬದಲಾವಣೆ ವಿಚಾರ ವರಿಷ್ಠರ ಕೈಯಲ್ಲಿದೆ!

● ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ಪ್ರತಿಕ್ರಿಯೆ ● ಪ್ರಧಾನ ಕಾರ್ಯದರ್ಶಿ ಸುರ್ಜೇವಾಲ ಶಾಸಕರ ಅಭಿಪ್ರಾಯ ಪಡೆಯುತ್ತಿದ್ದಾರೆ; ಅವರ ವರದಿ ಆಧರಿಸಿ ವರಿಷ್ಠರು ತೀರ್ಮಾನಿಸುತ್ತಾರೆ!

ಬೆಂಗಳೂರು, ಜೂ.30(ಕೆಎಂಶಿ)–ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಪಕ್ಷದ ವರಿಷ್ಠರ ಕೈಯ್ಯಲ್ಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ.

ನಾಯಕತ್ವ ಬದಲಾವಣೆ ಕುರಿತಂತೆ ವರಿಷ್ಠರ ಮಟ್ಟದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಹೇಳಲಾಗದು. ಒಂದಂತೂ ನಿಜ, ಮುಂದಿನ ಕ್ರಮ ಕೈಗೊಳ್ಳುವ ಹಕ್ಕು ಹೈಕಮಾಂಡ್‌ಗಿದೆ. ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ನಗರದಲ್ಲಿದ್ದಾರೆ. ಶಾಸಕರ ▶ 9ನೇ ಪುಟಕ್ಕೆ

ಪತ್ನಿ ಜೀವಂತವಿದ್ದರೂ ಆಕೆಯ ಕೊಂದ ಆರೋಪದಲ್ಲಿ ಪತಿ ಬಂಧನ ಪ್ರಕರಣ

ಇನ್‌ಸ್ಪೆಕ್ಟರ್ ಬಿ.ಜಿ. ಪ್ರಕಾಶ್ ಸೇರಿ ಮೂವರು ಅಧಿಕಾರಿಗಳ ಅಮಾನತು

ನಿರ್ಲಕ್ಷ್ಯ, ಕರ್ತವ್ಯ ಲೋಪ, ದಾಖಲೆಗಳ ಸೃಷ್ಟಿ, ಸುಳ್ಳು ಆರೋಪ ಪಟ್ಟಿ ಸಲ್ಲಿಕೆ

ಮೈಸೂರು, ಜೂ. 30(ಆರ್‌ಕೆ)– ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದ್ದ ಪತ್ನಿ ಜೀವಂತವಿದ್ದರೂ ಆಕೆಯ ಕೊಂದ ಆರೋಪದಲ್ಲಿ ಪತಿಗೆ ಜೈಲು ಶಿಕ್ಷೆಯಾದ ಪ್ರಕರಣದಲ್ಲಿ ಕುಶಾಲನಗರ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಜಿ. ಪ್ರಕಾಶ್ (ಹಿಂದಿನ ಪಿರಿಯಾಪಟ್ಟಣ ಸರ್ಕಲ್ ಇನ್‌ಸ್ಪೆಕ್ಟರ್), ಇಲವಾಲ ಠಾಣೆ ಸಬ್ ಇನ್‌ಸ್ಪೆಕ್ಟರ್ ಮಹೇಶ್‌ಕುಮಾರ್ (ಹಿಂದಿನ ಬೆಟ್ಟದಪುರ ಠಾಣೆಯ ಎಸ್‌ಐ) ಮತ್ತು ಜಯಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಪ್ರಕಾಶ್ ಎತ್ತಿನಮನಿ (ಹಿಂದಿನ ಬೆಟ್ಟದಪುರ ಠಾಣೆಯ ಎಸ್‌ಐ) ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಕರ್ತವ್ಯ ಲೋಪ, ಸಾಕ್ಷ್ಯಗಳ ಸೃಷ್ಟಿ, ನ್ಯಾಯಾಲಯಕ್ಕೆ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಕೆ, ಅಸಮರ್ಪಕ ತನಿಖೆ ಪರಿಣಾಮ ಅಮಾಯಕ, ಆಕೆಯ ಪತಿ ಸುರೇಶ ಜೈಲು ವಾಸ ಅನುಭವಿಸುವಂತೆ ಆಗಿರುವುದರಿಂದ ದಕ್ಷಿಣ ವಲಯ ಡಿಐಜಿಪಿ ಡಾ. ಎಂ.ಬಿ. ಬೋರಲಿಂಗಯ್ಯ ಅವರು ಈ ಮೂವರು ಪೊಲೀಸ್ ಅಧಿಕಾರಿಗಳನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಶನಿವಾರ ಅಮಾನತು ಆದೇಶ ಹೊರಡಿಸಿದ್ದಾರೆ.

ಪತ್ನಿಯನ್ನು ಕೊಲೆ ಮಾಡಿದ ಆರೋಪ ಹೊತ್ತಿದ್ದ ಪತಿ ಸುರೇಶ ಅವರನ್ನು ಇತ್ತೀಚೆಗೆ ಖುಲಾಸೆಗೊಳಿಸಿದ್ದ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು, ಆ ಸಮಯದಲ್ಲಿ ತನಿಖಾಧಿಕಾರಿಯಾಗಿದ್ದ ಬಿ.ಜಿ. ಪ್ರಕಾಶ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗೆ ನಿರ್ದೇಶನ ನೀಡಿದ್ದರು.



ಸುರೇಶ | ಬಿ.ಜಿ. ಪ್ರಕಾಶ್ | ಮಹೇಶ್‌ಕುಮಾರ್ | ಪ್ರಕಾಶ್ ಎತ್ತಿನಮನಿ

ಇನ್‌ಸ್ಪೆಕ್ಟರ್ ಪ್ರಕಾಶ್ ಪರ ಅರುಣ್‌ಕುಮಾರ್ ವಕಾಲತ್ತು

ಮೈಸೂರು, ಜೂ.30– ಅಮಾನತುಗೊಂಡಿರುವ ಮೂವರು ಪೊಲೀಸ್ ಅಧಿಕಾರಿಗಳಲ್ಲಿ ಕೊಡಗು ಜಿಲ್ಲೆಯ ಕುಶಾಲನಗರ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಜಿ.ಪ್ರಕಾಶ್ ಪರವಾಗಿ ಮೈಸೂರಿನ ಹಿರಿಯ ವಕೀಲರೂ ಆದ ಪ್ರಾಭಿ ಲಾ ಅಸೋಸಿಯೇಟ್ಸ್‌ನ ಎಸ್.ಅರುಣ್‌ಕುಮಾರ್, ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಕಾಲತ್ತು ಸಲ್ಲಿಸಿದ್ದಾರೆ.

ಐದು ಹುಲಿ ಸಾವಿನ ಪ್ರಕರಣ: ಡಿಸಿಎಫ್, ಎಸಿಎಫ್, ಡಿಆರ್‌ಎಫ್‌ಓಗೆ ಕಡ್ಡಾಯ ರಜೆ

▶ ತನಿಖೆಯ ಬಳಿಕ ಶಿಸ್ತು ಕ್ರಮಕ್ಕೆ ನಿರ್ಧಾರ
▶ ನಿರ್ಲಕ್ಷ್ಯ, ಕರ್ತವ್ಯ ಲೋಪ ಒಪ್ಪಿಕೊಂಡ ಇಲಾಖೆ

ಮೈಸೂರು, ಜೂ.30(ಎಂಟಿವೈ)– ಮಲೆ ಮಹದೇಶ್ವರ ವನ್ಯಧಾಮದ ಹೂಗ್ಯಂ ವಲಯದ ಮೀಣ್ಯಂ ಶಾಖೆಯಲ್ಲಿ ವಿಷ ಪ್ರಾಶನದಿಂದ ಐದು ಹುಲಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ಹಾಗೂ ಕರ್ತವ್ಯ ಲೋಪವನ್ನು ಒಪ್ಪಿಕೊಂಡಿರುವ ಅರಣ್ಯ ಇಲಾಖೆ, ಪ್ರಕರಣದ ಸಮಗ್ರ ತನಿಖೆ ನಡೆಸಲು ನಿರ್ಧರಿಸಿ, ಡಿಸಿಎಫ್, ಎಸಿಎಫ್ ಹಾಗೂ ಡಿಆರ್‌ಎಫ್‌ಓ ಕಡ್ಡಾಯ ರಜೆ ಮೇಲೆ ತೆರಳಲು ಸೂಚನೆ ನೀಡಲಾಗಿದೆ.



ಮಲೆ ಮಹದೇಶ್ವರ ವನ್ಯಧಾಮದ ಗಾಜನೂರು ಗಸ್ತುವಲಯದ ಮಹದೇಶ್ವರ ಬೈಲು ಎಂಬಲ್ಲಿ ಜೂ.26ರಂದು 8 ವರ್ಷದ ತಾಯಿ ಹುಲಿ, 10 ತಿಂಗಳ ಮೂರು ಹೆಣ್ಣು, ಒಂದು ಗಂಡು ಮರಿ ವಿಷ ಪ್ರಾಶನದಿಂದ ಮೃತಪಟ್ಟಿದ್ದವು. ಮುಖ್ಯ ರಸ್ತೆಯಿಂದ 100 ಮೀಟರ್, ಕಳ್ಳಬೇಟೆ ತಡೆ ಶಿಬಿರದಿಂದ 800 ಮೀಟರ್ ಅಂತರದಲ್ಲಿ ಐದು ಹುಲಿಗಳು ಮೃತಪಟ್ಟು ಎರಡು ದಿನವಾದರೂ ಅರಣ್ಯ ಸಿಬ್ಬಂದಿ ಗಮನಕ್ಕೆ ಬಂದಿರಲಿಲ್ಲ. ಅಲ್ಲದೆ, ವಾಚರ್ ಸೇರಿದಂತೆ ಹೊರಗುತ್ತಿಗೆ ಸಿಬ್ಬಂದಿಗೆ ಮೂರು ತಿಂಗಳಿಂದ ವೇತನ ಮಂಜೂರು ಮಾಡದೇ ಇರುವ ಪ್ರಮಾದವನ್ನು ಅರಣ್ಯ ಇಲಾಖೆ ಒಪ್ಪಿಕೊಂಡಿವೆ.

ಅರಣ್ಯಾಧಿಕಾರಿಗಳ ಲೋಪ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಹುಲಿಗಳ ಸಾವಿನ ಪ್ರಕರಣದ ಸಮಗ್ರ ತನಿಖೆ ನಡೆಸಲು ಮಲೆ ಮಹದೇಶ್ವರ ವನ್ಯಧಾಮದ ಡಿಸಿಎಫ್ ವೈ.ಚಕ್ರಪಾಣಿ, ಹನೂರು ಉಪವಿಭಾಗದ ಎಸಿಎಫ್ ಗಜಾನನ ಹೆಗಡೆ, ಹೂಗ್ಯಂ ವನ್ಯಜೀವಿ ವಲಯದ ಪ್ರಭಾರ ಆರ್‌ಎಫ್‌ಓ ಆಗಿದ್ದ ಡಿಆರ್‌ಎಫ್‌ಓ ಮಾದೇಶ ಅವರನ್ನು ಮುಂದಿನ ಸೂಚನೆವರೆಗೂ ರಜೆ ಮೇಲೆ ತೆರಳುವಂತೆ ಆದೇಶಿಸಲಾಗಿದೆ.

ಈಗ ಈ ಹಿಂದೆ ಮಲೆ ಮಹದೇಶ್ವರ ವನ್ಯಧಾಮದ ಡಿಸಿಎಫ್ ಆಗಿ ಸೇವೆ ಸಲ್ಲಿಸಿ ಪ್ರಸ್ತುತ ಬೆಂಗಳೂರಲ್ಲಿ ಕೇಂದ್ರಸ್ಥಾನದಲ್ಲಿ ಡಿಸಿಎಫ್ ಆಗಿರುವ ಜಿ.ಸಂತೋಷ್‌ಕುಮಾರ್ ಅವರಿಗೆ ಹೆಚ್ಚುವರಿಯಾಗಿ ಡಿಸಿಎಫ್ ಜವಾಬ್ದಾರಿ, ಮಹದೇಶ್ವರ ಬೆಟ್ಟ ವನ್ಯಜೀವಿ ಉಪವಿಭಾಗದ ಎಸಿಎಫ್ ಸ್ವಪ್ನಿಲ್ ಮನೋಹರ್ ಅಹಿರೆ ಅವರಿಗೆ ಹನೂರು ಉಪವಿಭಾಗದ ಎಸಿಎಫ್ ಪ್ರಭಾರ ಹೊಣೆ ನೀಡಲಾಗಿದೆ. ಹನೂರು ಬಫರ್ ಜೋನ್‌ನಲ್ಲಿರುವ ಪ್ರೊಬೇಷನರಿ ಎಸಿಎಫ್ ಕೆ.ಉಮಾಪತಿ ಅವರಿಗೆ ಹೂಗ್ಯಂ ಆರ್‌ಎಫ್‌ಓ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ. ತನಿಖೆಯ ನಂತರ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಚಾಮರಾಜನಗರ ವೃತ್ತದ ಸಿಸಿಎಫ್‌ಗೆ ಸೂಚನೆ ನೀಡಲಾಗಿದೆ.

ಇಂದು, ನಾಳೆ ಹೈ ಲೈಫ್ ಬ್ರೈಡ್ಸ್ ಶಾಪಿಂಗ್ ಉತ್ಸವ





ಮೈಸೂರು,ಜೂ.30(ಜಿಎ)–ಹೈ ಲೈಫ್ ಸಂಸ್ಥೆ ವತಿಯಿಂದ ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಜು.1 ಮತ್ತು 2ರಂದು ಅತ್ಯುತ್ತಮ ವಧುವಿನ ಉಡುಪು, ಆಭರಣಗಳು ಮತ್ತು ಪರಿಕರಗಳ ಶಾಪಿಂಗ್ ಉತ್ಸವ ಆಯೋಜಿಸಲಾಗಿದೆ ಎಂದು ಹೈಲೈಫ್ ಬ್ರೈಡ್ಸ್ ಸಹ ಸಂಘಟಕರಾದ ಶೋಮಿಕಾ ಎಸ್.ರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ದಿನಗಳ ಈ ಶಾಪಿಂಗ್ ಉತ್ಸವದಲ್ಲಿ ಅತ್ಯುತ್ತಮ ವಧುವಿನ ಉಡುಪು, ಆಭರಣಗಳು, ಪರಿಕರಗಳು ಲಭ್ಯವಿದ್ದು, ಭಾರತೀಯ ಫ್ಯಾಷನ್‌ನ ಅತ್ಯುತ್ತಮತೆಯ ಪ್ರದರ್ಶನವಿದೆ. ಹೈ ಲೈಫ್ ಎಕ್ಸ್‌ಪೋ ಅತ್ಯುತ್ತಮ ಫ್ಯಾಷನ್ ಉಡುಪುಗಳನ್ನು ಪ್ರದರ್ಶಿಸುವ ವೇದಿಕೆಯಾಗಿದೆ. ಅಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಸಂಧಿಸುತ್ತದೆ. ಮೈಸೂರು ವಧುಗಳ ಸಾರವನ್ನು ಪ್ರತಿಬಿಂಬಿಸುವ ವಿಶಿಷ್ಟ ಸಂಗ್ರಹವನ್ನು ಒಟ್ಟುಗೂಡಿಸಲು ನಾವು ಶ್ರಮಿಸಿದ್ದೇವೆ ಎಂದರು.

ಪ್ರದರ್ಶನವು ಲೆಹೆಂಗಾಗಳು, ಸೀರೆಗಳು, ಆಧುನಿಕ ನಿಲುವಂಗಿಗಳು ಮತ್ತು ವಿವಿಧ ರೀತಿಯ ಅತ್ಯುತ್ತಮ ಆಭರಣಗಳ ವಿಶೇಷ ಸಂಗ್ರಹಗಳನ್ನು ಒಳಗೊಂಡಿದೆ. ವಧುಗಳಿಗೆ ಬೇಕಾದ ಪ್ರತಿಯೊಂದು ಶೈಲಿ ಮತ್ತು ಆದ್ಯತೆಗೆ ಅನುಗುಣವಾಗಿ ವಿವಿಧ ರೀತಿಯ ಉನ್ನತಮಟ್ಟದ ವಿನ್ಯಾಸಕ ಉಡುಪುಗಳು ಮತ್ತು ಪರಿಕರಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತಿದೆ. ಅಂದು ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಪ್ರದರ್ಶನ ಮತ್ತು ಮಾರಾಟವಿರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೈ ಲೈಫ್ ಎಕ್ಸಿಬಿಷನ್ಸ್‌ನ ಈವೆಂಟ್ ಸಂಯೋಜಕ ಶ್ರೀಕಾಂತ್ ಉಪಸ್ಥಿತರಿದ್ದರು.

ಕೆಪಿಸಿಸಿ ಸಾಮಾಜಿಕ ಮಾಧ್ಯಮ ವಿಭಾಗಕ್ಕೆ ಐಶ್ವರ್ಯಾ ಮಹದೇವ್ ಮುಖ್ಯಸ್ಥೆ



ಬೆಂಗಳೂರು: ಕಾಂಗ್ರೆಸ್‌ನ ರಾಷ್ಟ್ರೀಯ ಮಾಧ್ಯಮ ಸಮಿತಿ ಸದಸ್ಯೆ ಐಶ್ವರ್ಯಾ ಮಹಾದೇವ್ ಅವರನ್ನು ಕೆಪಿಸಿಸಿಯ ಸಾಮಾಜಿಕ ಮಾಧ್ಯಮ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಾಮಾಜಿಕ ಮಾಧ್ಯಮ ವಿಭಾಗದ ಅಧ್ಯಕ್ಷೆಯಾಗಿ ಶ್ರೀಮತಿ ಐಶ್ವರ್ಯಾ ಮಹಾದೇವ್ ಅವರನ್ನು ನೇಮಕ ಮಾಡಲಾಗಿದೆ.

ದಕ್ಷಯಜ್ಞ ಪೌರಾಣಿಕ ನಾಟಕಕ್ಕೆ ಚಾಲನೆ...



ಮೈಸೂರಿನ ಪುರಭವನದಲ್ಲಿ ಆಷಾಢ ಮಾಸದ ಪ್ರಯುಕ್ತ ಬೆಂಗಳೂರು ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್ ಹಾಗೂ ಶ್ರೀ ನಾಗಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ ಏರ್ಪಡಿಸಿದ್ದ ದಕ್ಷಯಜ್ಞ ಅಥವಾ ಬೃಗುಮುನಿಯ ಗರ್ವಭಂಗ ಎಂಬ ಪೌರಾಣಿಕ ನಾಟಕಕ್ಕೆ ಬಿಜೆಪಿ ಮುಖಂಡ ಕವೀಶ್‌ಗೌಡ ಚಾಲನೆ ನೀಡಿದರು. ಈ ವೇಳೆ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ, ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ, ಸಾಮಾಜಿಕ ಹೋರಾಟಗಾರ ಬೀರಿಹುಂಡಿ ಶಿವು, ಬಾಲಾಜಿ, ಡ್ರಾಮಾ ಮಾಸ್ಟರ್ ಗೋವಿಂದರಾಜು, ಶಿವಸ್ವಾಮಿ, ರಾಜೇಶ್ ಕೂರ್ಗಳ್ಳಿ, ಬೋರೇಗೌಡ, ಲೋಹಿತ್, ಸ್ವಪ್ನ, ನಾಗರಾಜ್, ಲೋಕೇಶ್ ಸೋಮಣ್ಣ ಇತರರು ಉಪಸ್ಥಿತರಿದ್ದರು.

ನಿಧನ

ಎ.ಎಂ. ಮಹದೇವ



ಮೈಸೂರು, ಜೂ. 30– ಮೈಸೂರಿನ ಎನ್.ಆರ್. ಮೊಹಲ್ಲಾ ನಿವಾಸಿ, ಮೈಸೂರು ಜಿಲ್ಲಾ ಪಂಚಾಯತ್ ನಿವೃತ್ತ ಅಕೌಂಟ್ಸ್ ಸೂಪರಿಂಟೆಂಡೆಂಟ್ ಎ.ಎಂ.ಮಹದೇವ (86) ಸೋಮವಾರ ನಿಧನರಾದರು. ಮೃತರು ಪತ್ನಿ ಎಂ.ಡಿ.ಪಾರ್ವತಮ್ಮ, ಪುತ್ರ ಎ.ಎಂ.ಮಹೇಶ್, ಪುತ್ರಿ ಎ.ಎಂ.ಮಂಜುಳಾ ಜಗದೀಶ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಲಲಿತಾದ್ರಿಪುರ ರಸ್ತೆಯಲ್ಲಿರುವ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ವಿ.ಶೀಲಾ



ಮೈಸೂರಿನ ಸಿದ್ಧಾರ್ಥ ಬಡಾವಣೆ ಬಳಿಯಿರುವ ಜೆಎಸ್‌ಎಸ್ ಬಡಾವಣೆ ನಿವಾಸಿ ಹಾಗೂ ಕೆ.ಆರ್.ನಗರದ ಆರ್.ಟಿ.ಶಶಿಕುಮಾರ್ ಗುರುಕಾರ್ ಅವರ ಪತ್ನಿ ಕೆ.ವಿ.ಶೀಲಾ (64) ಸೋಮವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆಯು ಲಲಿತಾದ್ರಿಪುರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ 12ಕ್ಕೆ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಸಾವಿತ್ರಮ್ಮ



ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಕಟ್ಟೇರಿ ಗ್ರಾಮದ ಶಂಕರ ನಾರಾಯಣ ಅವರ ಪತ್ನಿ ಸಾವಿತ್ರಮ್ಮ (82) ಅವರು ಭಾನುವಾರ ರಾತ್ರಿ ನಿಧನರಾದರು. ಮೃತರು ಪತಿ ಶಂಕರ ನಾರಾಯಣ, ಪುತ್ರ ಚಂದ್ರಶೇಖರ್, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಇಂದು ಬೆಳಗ್ಗೆ ಸ್ವಗ್ರಾಮ ಕಟ್ಟೇರಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವು



ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಮಹದೇವು(75) ಸೋಮವಾರ ನಿಧನರಾದರು. ಮೃತರು ಪತ್ನಿ ಲಕ್ಷ್ಮಮ್ಮ, ಪುತ್ರ ವಿನಯ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಜು.1)ರಂದು ಮಧ್ಯಾಹ್ನ 12 ಗಂಟೆಗೆ ಜಯನಗರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯುತ್ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯ ರದ್ದು ಮಾಡದಿದ್ದರೆ ಉಗ್ರ ಹೋರಾಟ

ಮೈಸೂರು, ಜೂ.30(ಬಿಎಲ್‌ಯು)– ವಿದ್ಯುತ್ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯ ಆದೇಶವನ್ನು ರದ್ದು ಮಾಡಬೇಕೆಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಸಂಘದ ಅಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಅವರು, ರಾಜ್ಯದಲ್ಲಿ ವಿದ್ಯುತ್ ಖಾಸಗೀಕರಣ ಮಾಡಲು ಸರ್ಕಾರ ಮುಂದಾಗಿದ್ದು, ಮೊದಲ ಹಂತದಲ್ಲಿ ಸ್ಮಾರ್ಟ್ ಮೀಟರ್ ಅನ್ನು ಕಡ್ಡಾಯಗೊಳಿಸಿದೆ ಎಂದು ಮನವಿ ಪತ್ರದಲ್ಲಿ ಆರೋಪಿಸಿದ್ದಾರೆ.

ಬಲವಂತವಾಗಿ ಸ್ಮಾರ್ಟ್ ಮೀಟರ್ ಅಳವಡಿಸಬಾರದು. ಒಂದು ವೇಳೆ ಸರ್ಕಾರ ಈ ವಿಚಾರವಾಗಿ ಹಠಮಾರಿ ಧೋರಣೆ ತಳೆದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಇದರ ಮುಂದಿನ ಭಾಗವಾಗಿ ಕೃಷಿ ವಲಯವನ್ನು ಕೂಡ ಸರ್ಕಾರ, ಬಂಡವಾಳಶಾಹಿಗಳ ಕೈಗಿಡುವ ಹುನ್ನಾರ ನಡೆಸುತ್ತಿದೆ ಎಂದು ಹಳ್ಳಿಕೆರೆಹುಂಡಿ ಭಾಗ್ಯರಾಜ್ ಆರೋಪಿಸಿದ್ದಾರೆ.

ಕೆಆರ್‌ಎಸ್ ಜೊತೆಗೆ ಕಬಿನಿ ಜಲಾಶಯಕ್ಕೂ ಬಾಗಿನ ಅರ್ಪಿಸುವುದು ಪ್ರತಿ ವರ್ಷದ ಸಂಪ್ರದಾಯವಾಗಿದೆ. ಆದರೆ ಈ ಬಾರಿ ಕಾವೇರಿಗೆ ಮಾತ್ರ ಬಾಗಿನ ಅರ್ಪಿಸಿ, ಕಬಿನಿಯನ್ನು ನಿರ್ಲಕ್ಷಿಸಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ 950 ಕೋಟಿ ಬಾಕಿ ನೀಡಬೇಕಿದ್ದು, ಸರ್ಕಾರ ಮಧ್ಯಸ್ಥಿಕೆ ವಹಿಸಿ ಈ ಹಣ ಬಿಡುಗಡೆ ಮಾಡಿಸಬೇಕು. ಟನ್ ಕಬ್ಬಿಗೆ 4 ಸಾವಿರ ರೂಪಾಯಿ ನಿಗದಿ ಮಾಡಬೇಕು, ಕಬ್ಬಿನ ತೂಕದಲ್ಲಿ ಆಗುವ ಮೋಸ ತಡೆಗಟ್ಟಲು ಕಾರ್ಖಾನೆ ಮುಂದೆಯೇ ತೂಕದ ಯಂತ್ರಗಳನ್ನಿಟ್ಟು ಪಾರದರ್ಶಕತೆ ಕಾಪಾಡಬೇಕು, ಕೈಗಾರಿಕೆ ಹಾಗೂ ಬಡಾವಣೆ ಅಭಿವೃದ್ಧಿಗೆ ರೈತರಿಂದ ಬಲವಂತವಾಗಿ ಭೂಮಿ ಕಸಿದುಕೊಳ್ಳಬಾರದು ಎಂದ ಭಾಗ್ಯರಾಜ್, ಸಿದ್ದರಾಮಯ್ಯ ಅವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ.



ಮೈಸೂರು ವಿಮಾನ ನಿಲ್ದಾಣದಲ್ಲಿ ಸೋಮವಾರ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿತು.

ಸರ್ಕಾರಕ್ಕೆ ಕಬ್ಬು ಬೆಳೆಗಾರರ ಸಂಘದ ಎಚ್ಚರಿಕೆ

ಸಂಘದ ರಾಜ್ಯ ಖಜಾಂಚಿ ಕೆರೆಹುಂಡಿ ರಾಜಣ್ಣ, ಮೈಸೂರು ಜಿಲ್ಲಾಧ್ಯಕ್ಷ ವಳಗೆರೆ ಗಣೇಶ್, ಗೌರವಾಧ್ಯಕ್ಷ ಶಿವರುದ್ರಪ್ಪ, ಮುದ್ದಳ್ಳಿ ಮಧು, ಶಿವಣ್ಣ, ನಾಗಣ್ಣ, ಗುರುಸಿದ್ದಪ್ಪ, ದೇವಿರಮ್ಮನಹಳ್ಳಿ ಸಿದ್ದಪ್ಪ, ಬಸವರಾಜು, ಪ್ರಭುಸ್ವಾಮಿ, ಪುಟ್ಟಸ್ವಾಮಿ, ಮನು, ಶ್ರೀಕಂಠ ಸ್ವಾಮಿ, ಸುರೇಶ್, ಬಸಪ್ಪ, ನಾಗರಾಜ್, ಸಿದ್ದರಾಜು, ಜಗದೀಶ್, ದೇವಣ್ಣ, ವಳಗೆರೆ ಮಹದೇವಸ್ವಾಮಿ ಹಾಗೂ ಇತರರು ಈ ವೇಳೆ ಹಾಜರಿದ್ದರು.

ಹುಬ್ಬಳ್ಳಿ–ಧಾರವಾಡ ಪಾಲಿಕೆಯ ಮೇಯರ್, ಉಪಮೇಯರ್ ಸ್ಥಾನ ಮತ್ತೆ ಬಿಜೆಪಿ ತೆಕ್ಕೆಗೆ!

ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ಆಗಿ 19ನೇ ವಾರ್ಡ್ ಸದಸ್ಯೆ ಜ್ಯೋತಿ ಪಾಟೀಲ್ ಆಯ್ಕೆಯಾಗಿದ್ದರೆ, 49ನೇ ವಾರ್ಡ್ ಸದಸ್ಯ ಸಂತೋಷ ಚವ್ಹಾಣ್ ಉಪಮೇಯರ್ ಆಗಿ ಆಯ್ಕೆಯಾಗಿದ್ದಾರೆ. ಪಾಲಿಕೆ ಸದಸ್ಯರು, ಲೋಕಸಭಾ ಸದಸ್ಯರು, ಶಾಸಕರು ಮತ್ತು ವಿಧಾನ ಪರಿಷತ್ತು ಸದಸ್ಯರು ಸೇರಿ ಒಟ್ಟು 90 ಜನ ಮತದಾರರು ಇದ್ದು, ಇಂದಿನ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಯಲ್ಲಿ 87 ಜನರು ಪಾಲ್ಗೊಂಡಿದ್ದರು. ಈ ಪೈಕಿ ಕಾಂಗ್ರೆಸ್‌ನ ಸುವರ್ಣಾ ಕಲಕುಂಟ್ಲಾ ವಿರುದ್ಧ ಬಿಜೆಪಿಯ ಜ್ಯೋತಿ ಪಾಟೀಲ್ ಅವರು 47 ಮತಗಳನ್ನು ಪಡೆದಿದ್ದರೆ ಸಂತೋಷ ಚವ್ಹಾಣ್ ಅವರು ಸಹ 47 ಮತಗಳನ್ನು ಪಡೆದು ಉಪ ಮೇಯರ್ ಆಗಿ ಆಯ್ಕೆಯಾಗಿದ್ದು ಈ ಮೂಲಕ ಬಿಜೆಪಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಮತ್ತೊಮ್ಮೆ ಗದ್ದುಗೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ನಾಡಪ್ರಭು ಕೆಂಪೇಗೌಡರ ಜಯಂತಿ



ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುಷ್ಪ ನಮನ ಸಲ್ಲಿಸಿದರು. ಮೈಸೂರು ವಾಣಿಜ್ಯ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ನಾಗರಾಜ ವಿ.ಭೈರಿ, ಎನ್.ಬೆಟ್ಟೇಗೌಡ, ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಮನೋವೈದ್ಯ ಡಾ.ರವೀಶ್, ದಂತವೈದ್ಯ ಡಾ.ಎಂ.ಆರ್.ಲೋಕೇಶ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ವಿಕ್ರಮ್ ಅಯ್ಯಂಗಾರ್, ಚಾಮರಾಜ ಕ್ಷೇತ್ರದ ಆಶ್ರಯ ಸಮಿತಿ ಸದಸ್ಯ ಅನಂತನಾರಾಯಣ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರಕ್ಕೆ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು, ಜೂ. 30– ಮೈಸೂರಿನ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಕಾಳಿಕಾಂಬ ಕಮಠೇಶ್ವರಸ್ವಾಮಿಯವರ ದೇವಾಲಯದ 40ನೇ ವರ್ಷದ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಯುಕ್ತ 12ನೇ ವರ್ಷದ ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

ಈ ಸಂಬಂಧ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 531 ಅಂಕ ಮತ್ತು ದ್ವಿತೀಯ ಪಿಯುಸಿಯಲ್ಲಿ 540ಕ್ಕಿಂತ ಮೇಲ್ಪಟ್ಟು ಅಂಕ ಗಳಿಸಿರುವ ಮೈಸೂರು ಜಿಲ್ಲೆಯ ವಿಶ್ವಕರ್ಮ ಜನಾಂಗದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಅಂಕಪಟ್ಟಿ ಜೆರಾಕ್ಸ್ ಪ್ರತಿ ಹಾಗೂ ಜಾತಿ ದೃಢೀಕರಣ ಪತ್ರದೊಂದಿಗೆ ಅರ್ಜಿಯನ್ನು ದೇವಸ್ಥಾನದ ಕಚೇರಿಗೆ ಜು.7 ರೊಳಗೆ ಸಲ್ಲಿಸಲು ಕೋರಲಾಗಿದೆ.

ಜು.14ರಂದು ಸಂಜೆ 5.30 ಗಂಟೆಗೆ ಮಂಡಿ ಮೊಹಲ್ಲಾ, ಕೆ.ಟಿ. ಸ್ಟ್ರೀಟ್‌ನಲ್ಲಿರುವ ಶ್ರೀ ಕಾಳಿಕಾಂಬ ಕಮಠೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಎಂ.ಆರ್. ರಘುರಾಂ ಅವರ ಸ್ಮರಣಾರ್ಥ ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರ ಮತ್ತು ಪ್ರೋತ್ಸಾಹ ಧನವನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 8970834353, 9845773258 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಮೈಸೂರು,ಜೂ.30–ಕರ್ನಾಟಕ ಸಾಹಿತ್ಯ ಅಕಾಡೆಮಿಯು ವಿಶೇಷ ಘಟಕ ಯೋಜನೆಯಡಿ 'ದಲಿತ ಸಾಹಿತ್ಯ ಅರ್ಧಶತಮಾನ' ಎಂಬ ಹೆಸರಿನಲ್ಲಿ 3 ದಿನಗಳ ಅಧ್ಯಯನ ಶಿಬಿರವನ್ನು ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿಯಿರುವ 20 ರಿಂದ 50 ವರ್ಷ ವಯಸ್ಸುಳ್ಳ ಪರಿಶಿಷ್ಟ ಜಾತಿಗೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು, ಅರ್ಜಿ ಸಲ್ಲಿಸಲು ಜು.20 ಕೊನೆಯ ದಿನ. ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://sahithyaacademy.karnataka.gov.in ಮೂಲಕ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದು.

ಅನರ್ಹ ರೈತರಿಗೆ ಭೂ ಪರಿಹಾರ ನೀಡಿ 18 ಕೋಟಿ ಭ್ರಷ್ಟಾಚಾರ

ರೈತ ಸಂಘ ಆರೋಪ


ಮೈಸೂರು, ಜೂ.30(ಜಿಎ)– ರೈತರಿಂದ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಚಿಕ್ಕಯ್ಯನಛತ್ರ ಹೋಬಳಿ ಇಮ್ಮಾವು, ಅಡಕನಹಳ್ಳಿಹುಂಡಿ, ತಾಂಡವಪುರಗಳಲ್ಲಿ ರೈತರಿಂದ ವಶಪಡಿಸಿಕೊಂಡ ಭೂಮಿಗೆ ನೀಡಬೇಕಾದ ಎಕ್ಸ್‌ಗ್ರೇಷಿಯಾ ಹಣ ಪಾವತಿ ವೇಳೆ ಅಕ್ರಮ ನಡೆದಿದ್ದು, ಅರ್ಹರಲ್ಲದವರಿಗೆ ಹಣ ನೀಡಿ, ನೈಜ ರೈತರನ್ನು ವಂಚಿಸಲಾಗಿದೆ. ಹೀಗಾಗಿ ಸ್ಥಳೀಯ ತಹಸಿಲ್ದಾರರನ್ನು ಅಮಾನತುಗೊಳಿಸಿ, ತನಿಖೆ ನಡೆಸಿ ನಿಜವಾದ ರೈತರಿಗೆ ಹಣ ದೊರಕುವಂತೆ ಮಾಡಬೇಕು ಎಂದು ರಾಜ್ಯ ರೈತ ಸಂಘ ಸಿಎಂ ಹಾಗೂ ಸಂಬಂಧಿತ ಇಲಾಖೆ ಹಿರಿಯ ಅಧಿಕಾರಿಗಳನ್ನು ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿಭಾಗೀಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮಾತನಾಡಿ, ಹಣ ಪಾವತಿಯಲ್ಲಿ ಸುಮಾರು 18 ಕೋಟಿ ರೂ.ಗಳ ಭ್ರಷ್ಟಾಚಾರವಾಗಿದ್ದು, ಅನರ್ಹರಿಗೆ ಬಿಡುಗಡೆ ಮಾಡಿರುವ ಹಣದಲ್ಲಿ ಮಧ್ಯವರ್ತಿಗಳು, ರಾಜಕೀಯ ಹಿಂಬಾಲಕರು, ಅಧಿಕಾರಿಗಳು ಪಾಲು ಪಡೆದಿದ್ದಾರೆ. ಹೀಗಾಗಿ ವಾರದೊಳಗೆ ಅಕ್ರಮ ಎಸಗಿರುವವರ ವಿರುದ್ಧ ಕ್ರಮ ಕೈಗೊಂಡು, ನಿಜವಾದ ರೈತರಿಗೆ ಹಣ ಬಿಡುಗಡೆಗೊಳಿಸದಿದ್ದಲ್ಲಿ ತೀವ್ರವಾದ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇಮ್ಮಾವು ಗ್ರಾಮದ ಸರ್ವೆ ನಂ.390ರಿಂದ 430 ರವರೆಗಿನ ಜಮೀನುಗಳು, ಅಡಕನಹಳ್ಳಿ, ತಾಂಡವಪುರ ಗ್ರಾಮಗಳ ಸರ್ವೆ ನಂಬರ್ ಸೇರಿದಂತೆ ಒಟ್ಟಾರೆ 1,123 ಎಕರೆ ಜಮೀನು ಕೆಐಎಡಿಬಿ ಸ್ವಾಧೀನ ಪಡೆದಿದೆ. ಇಲ್ಲಿ ನೂರಾರು ರೈತರು ಸುಮಾರು 70–80 ವರ್ಷಗಳಿಂದಲೂ ಸ್ವಾಧೀನ ಹೊಂದಿ ಬೇಸಾಯ ಮಾಡುತ್ತ, ಗೇಣಿಗೆ ಅರ್ಜಿ ಸಲ್ಲಿಸಿದ್ದರು. ಆದರೆ ಈ ರೈತರಿಗೆ ಪರಿಹಾರ ದೊರೆಯದ ಹಿನ್ನೆಲೆಯಲ್ಲಿ ರೈತ ಸಂಘ ನಡೆಸಿದ ಹೋರಾಟದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಮೂಲಕ ರೈತರಿಗೆ ತಲಾ 4 ಲಕ್ಷ ನೀಡುವಂತೆ ನಿರ್ಧರಿಸಲಾಗಿತ್ತು ಎಂದರು.

ಈಗ ತಹಸಿಲ್ದಾರ್ ಕಚೇರಿಯಿಂದ ನೀಡಿರುವ ಎಕ್ಸ್‌ಗ್ರೇಷಿಯಾ ಹಣದ ಸಿಂಹಪಾಲು ಮಧ್ಯವರ್ತಿಗಳ ಮೂಲಕ ಅನರ್ಹರಿಗೆ ದೊರೆತಿದೆ. ಹೀಗಾಗಿ ನಿಜವಾದ ರೈತರು ಪರಿತಪಿಸುವಂತಾಗಿದೆ. ಆದ್ದರಿಂದ ಈ ಅಕ್ರಮದಲ್ಲಿ ಭಾಗಿಯಾಗಿರುವ ತಹಸಿಲ್ದಾರರನ್ನು ಅಮಾನತುಗೊಳಿಸಿ, ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು. ನಿಜವಾದರ ರೈತರಿಗೆ ಹಣ ದೊರಕುವಂತೆ ನೋಡಿಕೊಳ್ಳಬೇಕು. ಇದಕ್ಕೆ ರೈತ ಸಂಘ ಒಂದು ವಾರ ಗಡುವು ನೀಡಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಹೆಜ್ಜಿಗೆ ರಾಕೇಶ್, ಶಿರಮಳ್ಳಿ ಸಿದ್ದಪ್ಪ, ಪ್ರೇಮ್‌ರಾಜ್, ರಾಜಣ್ಣ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.07.2025 ಮಂಗಳವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025ರಿಂದ 05.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ವೈದ್ಯರ ದಿನಾಚರಣೆ ಪ್ರಯುಕ್ತ ವೈದ್ಯ ದಂಪತಿಗೆ ಪುರಸ್ಕಾರ, ವೈದ್ಯ ನಮನ ರಾಜ್ಯ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮ, ಉದ್ಘಾಟನೆ : ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಸನ್ಮಾನಿಸುವವರು : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ: ಮಹಾಕವಯತ್ರಿ ಡಾ. ಲತಾ ರಾಜಶೇಖರ್, ಮುಖ್ಯ ಅತಿಥಿಗಳು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಡಾ. ಪುಷ್ಪಾ ಅಯ್ಯಂಗಾರ್, ಸಾಹಿತಿ ಶ್ರೀಮತಿ ಸುಮತಿ ಸುಬ್ರಹ್ಮಣ್ಯ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ
- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ–2025, ಬೆಳಗ್ಗೆ 9 ಗಂಟೆಯಿಂದ ಸುಬ್ರಹ್ಮಣ್ಯ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.
- **ಶ್ರೀ ರೇಣುಕಾ ಎಲ್ಲಮ್ಮ ಮತ್ತು ಶ್ರೀ ಕಬ್ಬಾಳಮ್ಮನವರ ದೇವಸ್ಥಾನ:** ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಬ್ಬಾಳಮ್ಮನವರ 33ನೇ ವರ್ಷದ ಜಾತ್ರಾ ಮಹೋತ್ಸವ–2025, ಸಂಜೆ 7ಕ್ಕೆ ಅಮ್ಮನವರಿಗೆ ಉಯ್ಯಾಲೆ ಸೇವೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರೇಣುಕಾ ಎಲ್ಲಮ್ಮ ಮತ್ತು ಶ್ರೀ ಕಬ್ಬಾಳಮ್ಮನವರ ದೇವಸ್ಥಾನದ ಪ್ರಾಂಗಣ, ಕೊತ್ವಾಲ್ ರಾಮಯ್ಯ ರಸ್ತೆ.
- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಸಂಜೆ 5.30ಕ್ಕೆ ಮಹಾವಾರಾಹಿ ಆವರಣ ಪೂಜಾ, ಬಲಿಹರಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್, ಜಯಲಕ್ಷ್ಮಿಪುರಂ.
- **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** 11ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಮೂರ್ತಿ ಮೆರವಣಿಗೆ, ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ವೇದಿಕೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಯರಾಮ್‌ರಾವ್ ಲಾಳಿಗೆ, ಶಾಸಕ ಟಿ.ಎಸ್. ಶ್ರೀವತ್ಸ, ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿರಾವ್ ರಂಪೂರೆ, ಸಮಿತಿ ಅಧ್ಯಕ್ಷ ಬಿ.ಟಿ. ಮಂಜುನಾಥ್ ಬಕರೆ, ಸ್ಥಳ: ಸಮಿತಿ ಆವರಣ, ಕುವೆಂಪುನಗರ.
- **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಪ್ರತಿಭಾ ಪುರಸ್ಕಾರ–ಶಿಕ್ಷಕ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ: ಶ್ರೀಮತಿ ಪುಟ್ಟತಾಯಮ್ಮ ಸ್ಮಾರಕ ಪ್ರೌಢಶಾಲೆ ಅಧ್ಯಕ್ಷ ಕೆ.ಸಿ. ಪುಟ್ಟಸಿದ್ದಶೆಟ್ಟಿ, ಪ್ರಶಸ್ತಿ ಪ್ರದಾನ : ಹಿರಿಯ ಶಿಕ್ಷಕಿ ಶ್ರೀಮತಿ ಎಂ.ವಿ. ಕಮಲಾಕ್ಷಿ, ಸ್ಥಳ: ಶ್ರೀಮತಿ ಪುಟ್ಟತಾಯಮ್ಮ ಸ್ಮಾರಕ ಪ್ರೌಢಶಾಲೆ, ಶ್ರೀರಾಂಪುರ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಅಂಗರಚನಾಶಾಸ್ತ್ರ ವಿಭಾಗ :** ಹೈಟೆಕ್ ವರ್ಚ್ಯುಯಲ್ ಡಿಸೆಕ್ಷನ್ ಟೇಬಲ್ (ಅನಾಟೋಮೇಜ್) ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು : ಇಂಡಿಯಾ ಸೈಟ್ ಆಪರೇಷನ್ಸ್ ಹಿರಿಯ ಉಪಾಧ್ಯಕ್ಷ ಡಾ. ಗಿರೀಶ್ ಕಪೂರ್, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ನಾ ಕಸ್ತೂರಿ ನೆನಪುಗಳು ಬಿ. ಎಸ್. ರಾಜಾರಾಮ್ ಅವರೊಂದಿಗೆ ಸಂವಾದ, ಇವರೊಂದಿಗೆ ಭಾಗವಹಿಸುತ್ತಾರೆ–ಉಮೇಶ್ ಎಸ್.ಎಸ್., 9.00 ಪ್ರಾಯೋಜಿತ ಕಾರ್ಯಕ್ರಮ–ಆರೋಗ್ಯ ಧಾರೆ, 9.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಸಂಪತ್ ಕುಮಾರ್ ಆರ್.ಎನ್.– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ–ಇತಿಹಾಸ ಪ್ರಜ್ಞೆ ಕುರಿತು ಮಾತನಾಡುತ್ತಾರೆ ಡಾ. ವಿ.ರಂಗನಾಥ್, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಸಿ. ವಿಶ್ವನಾಥ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ರಾಜ್‌ಕುಮಾರ್ ಭಾರತಿ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ, 5.00 ಜುಲೈ 5 ಮತ್ತು 6 ರಂದು ಶನಿವಾರ ಮತ್ತು ಭಾನುವಾರ ನಡೆಯಲಿರುವ ಮೈಸೂರು ಸಾಹಿತ್ಯ ಸಂಭ್ರಮ 2025 9ನೇ ಆವೃತ್ತಿಯ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರು ಬುಕ್ ಕ್ಲಬ್ 2015 ರ ಸಂಸ್ಥಾಪಕರಾದ ಶುಭಾ ಸಂಜಯ್ ಅರಸ್, ಸಂಚಾಲಕರಾದ ಮೀನಾಕ್ಷಿ ಎನ್. ಮತ್ತು ನಾಗರತ್ನ ಪಾಳ್ಯಂ ನಡೆಸಿಕೊಡುತ್ತಾರೆ ಡಾ. ಮೈಸೂರು ಉಮೇಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ– ಮೀನು ಕೃಷಿಗೆ ಪೂರ್ವ ಸಿದ್ಧತೆ ಮತ್ತು ವೈಜ್ಞಾನಿಕ ಕ್ರಮಗಳು ಈ ಕುರಿತು ಗುಂಡಾಲ್ ಮೀನುಮರಿ ಉತ್ಪಾದನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಟಿ.ಎಲ್. ನಂದೀಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು – ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಬಿ.ದಿಗ್ವಿಜಯ್, 8.00 ನಾಟಕ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ –ಲಲಿತಾ ಹರಿಪ್ರಿಯಾ ಹೈದರಾಬಾದ್ ಸಹೋದರಿಯರಿಂದ ದ್ವಂದ್ವ ಗಾಯನ, 10.00 ಚೈತ್ರವನ– ಲಕ್ಷೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಶಾಸಕ ಕೆ. ಹರೀಶ್‌ಗೌಡರ ಹುಟ್ಟುಹಬ್ಬ ಹಿನ್ನಲೆ

ಉದ್ಯೋಗ ಮೇಳ, ಉಚಿತ ಆರೋಗ್ಯ ತಪಾಸಣಾ ಶಿಬಿರ


ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಶಾಸಕ ಕೆ.ಹರೀಶ್‌ಗೌಡ ಅಭಿಮಾನಿಗಳ ಸಭೆಯಲ್ಲಿ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಮಾತನಾಡಿದರು.

ಮೈಸೂರು, ಜೂ.30(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಜು.24 ರಂದು ಬೃಹತ್ ಉದ್ಯೋಗ ಮೇಳ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲು ನಿರ್ಧರಿಸಲಾಯಿತು.

ನಗರದ ಪಡುವಾರಹಳ್ಳಿಯ ಲೀಲಾ ಚೆನ್ನಯ್ಯ ಸಮುದಾಯ ಭವನದಲ್ಲಿ ಸೋಮವಾರ ಸಭೆ ನಡೆಸಿದ ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಶಾಸಕ ಕೆ.ಹರೀಶ್‌ಗೌಡ ಅಭಿಮಾನಿಗಳು, ಶಾಸಕರ ಹುಟ್ಟು ಹಬ್ಬದ ಅಂಗವಾಗಿ ಬೃಹತ್ ಉದ್ಯೋಗ ಮೇಳ, ಆರೋಗ್ಯ ತಪಾಸಣಾ ಶಿಬಿರ ಹಾಗೂ ಉಚಿತ ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಿದರು.

ಈ ವೇಳೆ ಚಾಮರಾಜ ವಿಧಾನಸಭಾ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಮಾತನಾಡಿ, ನಗರದ ಜೆ.ಕೆ.ಮೈದಾನದಲ್ಲಿ ಜು.24 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ನಡೆಯುವ ಬೃಹತ್ ಉದ್ಯೋಗ ಮೇಳದಲ್ಲಿ 30ಕ್ಕೂ ಹೆಚ್ಚು ಪ್ರತಿಷ್ಠಿತ ಐಟಿ–ಬಿಟಿ ಕಂಪನಿಗಳು ಭಾಗವಹಿಸಲಿದ್ದು, ಕ್ಷೇತ್ರ ಹಾಗೂ ಜಿಲ್ಲೆಯ ಯುವಕ–ಯುವತಿಯರು ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಹಾಗೆಯೇ 10ಕ್ಕೂ ಹೆಚ್ಚು ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವೂ ನಡೆಯಲಿದ್ದು, ಹೃದಯ, ಮೂತ್ರಕೋಶ, ಡಯಾಬಿಟಿಸ್ ಸೇರಿದಂತೆ ಇನ್ನಿತರೆ ಆರೋಗ್ಯ ಸಮಸ್ಯೆಗಳಿಗೆ ನುರಿತ ವೈದ್ಯರಿಂದ ಸಲಹೆಗಳನ್ನು ನೀಡಲಾಗುವುದು. ಜೊತೆಗೆ ಚಾಮರಾಜ ವಿಧಾನಸಭಾ ಕ್ಷೇತ್ರದ 500ಕ್ಕೂ ಹೆಚ್ಚು ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಹಿಳಾ ಘಟಕದ ನಗರಾಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ದೇವರಾಜ ಬ್ಲಾಕ್ ಅಧ್ಯಕ್ಷ ರಮೇಶ್ ರಾಯಪ್ಪ, ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ನಗರಪಾಲಿಕೆ ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ಮಾಜಿ ಉಪಮೇಯರ್ ಮಹದೇವಪ್ಪ, ಮಾಜಿ ಸದಸ್ಯರಾದ ಮುಖಂಡರಾದ ಮಾಜಿ ನಗರ ಪಾಲಿಕೆ ಸದಸ್ಯ ನಾಗಭೂಷಣ್, ಹಿಂದುಳಿದ ವರ್ಗಗಳ ವಿಭಾಗದ ನಗರಾಧ್ಯಕ್ಷ ಎನ್.ಆರ್.ನಾಗೇಶ್, ರಮೇಶ್, ನಾಗರಾಜ್, ಜಿಲ್ಲಾ ಒಕ್ಕಲಿಗರ ಸಂಘದ ಮರೀಸ್ವಾಮಿ, ಕಾಂಗ್ರೆಸ್ ಸೇವಾದಳದ ಅಶೋಕ್, ಮುಖಂಡರಾದ ಬಾಲು, ಯೋಗೇಶ್, ತನುಜಾ ಮಹೇಶ್, ಗಾಯತ್ರಿ ನಾರಾಯಣಗೌಡ, ಆಶ್ರಯ ಸಮಿತಿ ಸದಸ್ಯರಾದ ಮಂಜುನಾಥ್, ಇಬ್ರಾಹಿಂ ಇಬು, ಅನಂತ ನಾರಾಯಣ, ಯುವ ಕಾಂಗ್ರೆಸ್‌ನ ವಿನಯ್, ಮೈವಿವಿ ಸಿಂಡಿಕೇಟ್ ಸದಸ್ಯ ಮಾದೇಶ್, ಗುರು ಒಂಟಿಕೊಪ್ಪಲು ಮತ್ತಿತರರಿದ್ದರು.

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಅವರಿಗೆ ಬೀಳ್ಕೊಡುಗೆ ಸಮಾರಂಭ


ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ದಂಪತಿಯನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ.30(ಎಂಕೆ)– ಕ್ರೀಡಾಪಟುಗಳ ಆಯ್ಕೆ ವಿಚಾರ ಬಂದಾಗ ಸಮಸ್ಯೆಗಳು ಸಹಜ. ಆದರೂ ಉತ್ತಮ ತಂಡ ಕಟ್ಟುವ ಜವಾಬ್ದಾರಿ ವಿಭಾಗದ ನಿರ್ದೇಶಕರು ಮತ್ತು ತರಬೇತುದಾರರದ್ದಾಗಿರುತ್ತದೆ. ಈ ವಿಚಾರದಲ್ಲಿ ಮೈಸೂರು ವಿವಿಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿಯಾಗುತ್ತಿರುವ ಡಾ.ಪಿ.ಕೃಷ್ಣಯ್ಯ ಮಾದರಿಯಾಗಿದ್ದಾರೆ ಎಂದು ಮೈಸೂರು ವಿವಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಂ.ಚಂದ್ರಕುಮಾರ್ ಶ್ಲಾಘಿಸಿದರು.

ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನ ಯೋಗ ಮಂದಿರದಲ್ಲಿ ವಿವಿಯ ದೈಹಿಕ ಶಿಕ್ಷಣ ವಿಭಾಗ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕ್ರೀಡಾಭಿಮಾನಿಗಳ ಬಳಗದ ವತಿಯಿಂದ ಆಯೋಜಿಸಿದ್ದ ನಿವೃತ್ತಿ ಹೊಂದುತ್ತಿರುವ ಡಾ.ಪಿ.ಕೃಷ್ಣಯ್ಯ ಅವರ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವನದುದ್ದಕ್ಕೂ ಕಷ್ಟಗಳನ್ನೇ ಕಂಡಿರುವವರ ಭುಜದ ಮೇಲೆ ಸದಾ ತಲೆ ಅಲುಗಾಡದೆ ನಿಂತಿರುತ್ತೆ ಎಂಬುದಕ್ಕೆ ಕೃಷ್ಣಯ್ಯ ಪ್ರತ್ಯಕ್ಷ ಉದಾಹರಣೆಯಾಗಿದ್ದಾರೆ. ಸದಾ ಎಲ್ಲರನ್ನೂ ಜೊತೆ ಜೊತೆಗೆ ಕರೆದೊಯ್ಯುವ ಮನಸ್ಥಿಯುಳ್ಳ ಅವರು ಕಷ್ಟಜೀವಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೈಹಿಕ ಶಿಕ್ಷಣ ವಿಭಾಗದಲ್ಲಿ ಸವಾಲಿನ ಕೆಲಸವೆಂದರೆ ಪಂದ್ಯಾವಳಿಗೆ ತಂಡ ಕಟ್ಟುವುದು. ಈ ವೇಳೆ ಕ್ರೀಡಾಪಟುಗಳ ಆಯ್ಕೆ ಮಾಡುವುದು ಅತ್ಯಂತ ಕಷ್ಟದ ಕೆಲಸವಾಗಿರುತ್ತದೆ. ಈ ವಿಚಾರದಲ್ಲಿಯೂ ಡಾ.ಕೃಷ್ಣಯ್ಯ ಪ್ರಾಮಾಣಿಕ ಪ್ರಯತ್ನ ಮಾಡಿ ಮೈಸೂರು ವಿವಿ ಹೆಸರು ತರುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ ಎಂದರು.

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಮಾತನಾಡಿ, ಅತ್ಯಂತ ಕಡು ಬಡತನದ ಹಿನ್ನೆಲೆಯಲ್ಲಿ ಬಂದು ಜೀವನದಲ್ಲಿ ಹಲವಾರು ತಿರುವು, ಹೋರಾಟಗಳ ಮೂಲಕ ಬೆಳೆದ ಡಾ.ಪಿ.ಕೃಷ್ಣಯ್ಯ ಅವರು ಸಂಘಜೀವಿ ಎಂದರು.

ಸೋಮಾನಿ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಎನ್.ಎಸ್.ಸುಬ್ರಹ್ಮಣ್ಯ ಅಭಿನಂದನಾ ನುಡಿಗಳನ್ನಾಡಿದರು. ಟಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ವಿ.ಉದಯಶಂಕರ್, ಅಭಿಮಾನಿಗಳ ಬಳಗದ ಭಾಸ್ಕರ್, ಕೃಷ್ಣಪ್ಪ, ಹಿರಿಯ ಯೋಗ ತರಬೇತುದಾರ ಪಳನಿ, ಮೈಸೂರು ವಿವಿ ದೈಹಿಕ ಶಿಕ್ಷಣ ತರಬೇತುದಾರರಾದ ತುಳಸಿದಾಸ್, ರವಿ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ ಮತ್ತು ಹೆಂಡತಿ ಸಂತೆಯಿಂದ ಹೊರಬರುತ್ತಿದ್ದಾಗ
ಒಬ್ಬ ಕುರುಡ ಕೂಗಿದ
ಏ ಸುಂದರಿ, ಈ ಕುರುಡನಿಗೆ 5 ರೂಪಾಯಿ ನೀಡಮ್ಮ!
ಗಂಡ ತನ್ನ ಹೆಂಡತಿಯನ್ನು ನೋಡಿ ನಗುತ್ತಾ ಹೇಳಿದ.
ಕೊಡು... ನಿಜವಾಗ್ಲೂ ಕುರುಡನಂತೆ ಕಾಣುತ್ತಿದ್ದಾನೆ!

ಮೈಸೂರು ಮಿತ್ರ
ಮಂಗಳವಾರ, 1 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮನುಷ್ಯನ ಸ್ವಭಾವವೇ ಹಾಗೆ ತಪ್ಪು ತಮ್ಮದಾದರೆ ವಕೀಲರಾಗುತ್ತಾರೆ.
ತಪ್ಪು ಬೇರೆಯವರದಾದರೆ ನ್ಯಾಯಾಧೀಶರಾಗುತ್ತಾರೆ.

ವೇದ ಸುಳ್ಳಾದರೂ { ತಾಯಿಯಂತೆ ಮಗಳು
ಗಾದೆ ಸುಳ್ಳಾಗದು { ನೂಲಿನಂತೆ ಸೀರೆ

ನಿಮ್ಮ ಪತ್ರಗಳು

■ ವರ್ಷಗಳಿಂದ ಕೆಟ್ಟುನಿಂತ ಚಿಕ್ಕ ಗಡಿಯಾರ



ಮಾನ್ಯರೆ,

ದೇವರಾಜ ಮಾರುಕಟ್ಟೆ ಮಹಾದ್ವಾರದ ಮುಂದಿನ ಚಿಕ್ಕಗಡಿಯಾರದ ಸಮಯ ಪರಿಪಾಲನೆ ನಿಂತು ಹೋಗಿ ವರುಷಗಳೇ ಕಳೆದಿವೆ. ಯಾಕೆ ಇದನ್ನು ಸಂಬಂಧಪಟ್ಟವರು ಸರಿಪಡಿಸಲು ಉದಾಸೀನ ಮಾಡುತ್ತಿದ್ದಾರೋ ತಿಳಿದಿಲ್ಲ. ದೇವರಾಜ ಮಾರುಕಟ್ಟೆಯ ಮುಂದಿರುವ ಚಿಕ್ಕ ಗಡಿಯಾರಕ್ಕೆ 138 ವರ್ಷಗಳ ಇತಿಹಾಸವಿದೆ. ಮೈಸೂರಿನ ಸೌಂದರ್ಯವನ್ನು ಹೆಚ್ಚಿಸಿದೆ. ನಿತ್ಯ ಪ್ರವಾಸಿಗರು, ಮೈಸೂರಿನ ನಿವಾಸಿಗಳು ತಮ್ಮ ಅನೇಕ ಅವಶ್ಯಕತೆಗಳಿಗೆ ಇಲ್ಲಿಗೆ ಬಂದು ಹೋಗುವುದು ಸಹಜ.

ಸಂಬಂಧಪಟ್ಟ ಮಹಾನಗರ ಪಾಲಿಕೆ ಅಧಿಕಾರಿಗಳು ಕೆಟ್ಟು ಹೋಗಿರುವ ಚಿಕ್ಕ ಗಡಿಯಾರವನ್ನು ದುರಸ್ತಿ ಮಾಡಿ ಎಂದಿನಂತೆ ಸಾರ್ವಜನಿಕರಿಗೆ ಸಮಯ ನೋಡುವ ಅವಕಾಶ ಮಾಡಿಕೊಟ್ಟು, ಮೈಸೂರು ಸಾಂಸ್ಕೃತಿಕ ನಗರದ ಹಿರಿಮೆ–ಗರಿಮೆ ಉಳಿಸಿಕೊಳ್ಳಬೇಕೆಂದು ಮನವಿ.

– ವಿದ್ಯಾ ವೈ. ರಜೋಲಿ, ದೇವರಾಜ ಮೊಹಲ್ಲಾ, ಮೈಸೂರು.

■ ವಿಜೃಂಭಣೆಯ ದಸರಾ ಆಚರಣೆ ಶ್ಲಾಘನೀಯ

ಮಾನ್ಯರೆ,

ರಾಜ್ಯದಲ್ಲಿ ಉತ್ತಮ ಮಳೆಯಾಗಿ ರೈತರು ಹಾಗೂ ಜನತೆ ಸಂತೃಪ್ತರಾಗಿರುವ ಹಿನ್ನೆಲೆಯಲ್ಲಿ ಈ ಬಾರಿಯ ವಿಶ್ವವಿಖ್ಯಾತ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸರ್ಕಾರ ಎಷ್ಟು ಬೇಕಾದರೂ ಹಣವನ್ನು ನೀಡುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು ಶ್ಲಾಘನೀಯ. ಮೈಸೂರು ದಸರಾ ಮಹತ್ವ ಎತ್ತಿ ಹಿಡಿಯುವ ದೃಷ್ಟಿಯಿಂದ ಚಾಮರಾಜನಗರದಲ್ಲಿ ಈ ಬಾರಿಯ ದಸರಾ ಉತ್ಸವ ನಡೆಸುವುದಿಲ್ಲ. ಚಾಮರಾಜನಗರಕ್ಕೆ ಅವಕಾಶ ನೀಡಿದರೆ ಮುಂದಿನ ದಿನಗಳಲ್ಲಿ ಕೊಡಗಿನವರು ಮತ್ತು ಮಂಗಳೂರಿನವರು ಸಹ ದಸರಾ ಆಚರಣೆ ನಡೆಸಲು ಬೇಡಿಕೆ ಇಡುತ್ತಾರೆ ಎಂದು ಹೇಳಿರುವುದು ಸ್ವಾಗತಾರ್ಹ. ಮೈಸೂರಿನ ದಸರಾ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸುವುದರ ಜೊತೆಗೆ ಎಲ್ಲೂ ಹಣದ ದುರುಪಯೋಗ ಆಗದ ರೀತಿಯಲ್ಲಿ ಪ್ರತಿಯೊಂದು ರೂಪಾಯಿಯು ಸದ್ವಿನಿಯೋಗವಾಗುವತ್ತ ಗಮನಹರಿಸಬೇಕು ಎಂದು ಮುಖ್ಯಮಂತ್ರಿಗಳು ಅಧಿಕಾರಿ ವರ್ಗದವರಿಗೆ ಎಚ್ಚರಿಕೆಯನ್ನು ನೀಡುವುದು ಒಳ್ಳೆಯದು. ಕೊನೆಗಳಿಗೆಯಲ್ಲಿ ರಸ್ತೆ ಮತ್ತು ಗುಂಡಿಗಳನ್ನು ಮುಚ್ಚುವ ಬದಲು ಈಗಿನಿಂದಲೇ ಸಜ್ಜಾಗುವಂತೆ ಮುಖ್ಯಮಂತ್ರಿಗಳು ಆದೇಶ ನೀಡುವುದು ಅಗತ್ಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್, ಅನುವಾದಕಿ ದೀಪಾ ಬಾಸ್ತಿ ಅವರಿಂದ ದಸರಾ ಉದ್ಘಾಟನೆ ಸ್ವಾಗತಾರ್ಹ

ಮಾನ್ಯರೆ,

ಈ ವರ್ಷದ ವಿಶ್ವ ವಿಖ್ಯಾತ ನಾಡಹಬ್ಬ ದಸರಾವನ್ನು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್, ಬರಹಗಾರ್ತಿ ಮತ್ತು ಅನುವಾದಕಿ ದೀಪಾ ಭಾಸ್ತಿ ಅವರಿಂದ ಉದ್ಘಾಟನೆ ಮಾಡಲು ನಿನ್ನೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಬಾರಿಯ ದಸರಾ ಉತ್ಸವ ಆಚರಣೆಯ ಉನ್ನತ ಮಟ್ಟದ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಬೂಕರ್ ಪ್ರಶಸ್ತಿಯ ಯಶಸ್ಸು, ಲೇಖಕಿ ಬಾನು ಮುಷ್ತಾಕ್ ಮತ್ತು ಅನುವಾದಕಿ ದೀಪಾ ಭಾಸ್ತಿ ಇಬ್ಬರಿಗೂ ಸಮಾನವಾಗಿ ಸಿಕ್ಕಿದೆ. ಈ ಪ್ರಶಸ್ತಿಯ ಹಣವೂ ಸಹ ಸಮಾನವಾಗಿ ಹಂಚಿಕೆಯಾಗಿದೆ. ಪ್ರಶಸ್ತಿ ವಿಜೇತೆಯರನ್ನು ಕರ್ನಾಟಕ ಸರ್ಕಾರವೂ ಸಹ ಒಟ್ಟಾಗಿ ಸನ್ಮಾನಿಸಿದೆ. ಈ ಪ್ರಶಸ್ತಿ ಬರಲು ಲೇಖಕಿಯಷ್ಟೇ, ಅನುವಾದಕಿಯ ಪರಿಶ್ರಮವಿದೆ. ಆದ್ದರಿಂದ ದಸರಾ ಉದ್ಘಾಟನೆಯನ್ನು ಇವರಿಬ್ಬರ ಮೂಲಕವೇ ಮಾಡಿಸಲಿ. ಇದೊಂದು ರೀತಿಯಲ್ಲಿ ಸಾವಿರಾರು ವರ್ಷಗಳ ಇತಿಹಾಸವಿರುವ ದಸರಾಕ್ಕೆ ವಿಶಿಷ್ಟ ಎನಿಸಬಹುದು. ಈಗಾಗಲೇ ಇಷ್ಟು ವರ್ಷ 9 ಅಥವಾ 10 ದಿನಗಳ ಕಾಲ ಮಾತ್ರ ನಡೆಯುತ್ತಿದ್ದ ದಸರಾ ಈ ವರ್ಷ 11 ದಿನಗಳ ಕಾಲ ನಡೆಯುತ್ತಿರುವುದು ಸಹ ವಿಶೇಷ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಅಭಿವೃದ್ಧಿಯೆಂದರೆ ರೈತರನ್ನು ಒಕ್ಕಲೆಬ್ಬಿಸುವುದೇ?

ಮಾನ್ಯರೆ,

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ಫಲವತ್ತಾದ 1777 ಎಕರೆ ಭೂಮಿಯನ್ನು ಸ್ಥಳೀಯ ರೈತಾಪಿ ಕುಟುಂಬಗಳೇ ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಳ್ಳಲು ಬಿಡುವುದಿಲ್ಲ ಎಂದು ಪ್ರತಿಭಟನೆ ನಡೆಸುತ್ತಾ ಬಂದಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಸ್ವಾಧೀನ ಕ್ರಮದ ವಿರುದ್ಧ ರೈತರು ಹೋರಾಟ ಮಾಡುವಾಗ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯನವರು ರೈತರೊಂದಿಗೆ ಮಾತುಕತೆ ನಡೆಸಿ ಅವರ ಬೇಡಿಕೆಗಳಿಗೆ ಸ್ಪಂದಿಸುವ ಭರವಸೆ ನೀಡಿರುವ ವಿಚಾರ ಮಾಧ್ಯಮಗಳಲ್ಲಿ ನೋಡಿದ್ದೇವೆ. ಈಗ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರವೇ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವುದು ದ್ವಂದ್ವ ನೀತಿಯನ್ನು ತೋರಿಸುತ್ತದೆ.

ನಾನಾ ಕಾರಣಕ್ಕೆ ಭೂಮಿಯನ್ನು ಕಳೆದುಕೊಂಡ ರೈತರ ಬದುಕು ಬೀದಿಗೆ ಬಿದ್ದಿದೆ. ನಗರ ಪ್ರದೇಶಗಳಲ್ಲಿ ವಾಚ್‌ಮ್ಯಾನ್‌ಗಳಾಗಿ, ಕೆಲವರು ಕೆಲಸ ಮಾಡಿದರೆ ಮತ್ತೆ ಕೆಲವರು ನಿರ್ಮಾಣ ಕಾರ್ಮಿಕರಾಗಿ ದುಡಿಯುವ ದುಸ್ಥಿತಿಗಿಳಿದಿದ್ದರೆ, ಇನ್ನು ಹಲವರು ನಾನಾ ಬಡಾವಣೆಯಲ್ಲಿ ಕಟ್ಟುವ ಮನೆಗಳ ಕಾವಲು ಕಾಯಲು ಕುಟುಂಬ ಸಮೇತವಾಗಿ ಟೆಂಟ್‌ಗಳಲ್ಲಿ ವಾಸಿಸುವ ಸ್ಥಿತಿ ನಿರ್ಮಾಣವಾಗಿದೆ. ಮನುಕುಲಕ್ಕೆ ಅನ್ನ ನೀಡುವ ರೈತನ ಬದುಕಿನ ದುಸ್ಥಿತಿ ಹೇಳತೀರದಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಒಕ್ಕಲೆಬ್ಬಿಸಿ ಅವರ ಜಮೀನು ಸ್ವಾಧೀನಪಡಿಸಿಕೊಳ್ಳುವುದು ಎಷ್ಟು ಸರಿ?

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಕಂಡೋರ್ ದುಡ್ಡು ನಮಗಲ್ಲ ಕೂಸೆ...!

ದುಡ್ಡು, ಸೌಂದರ್ಯ, ಒಡವೆ–ಬಂಗಾರ, ಅಂತಸ್ತು, ಐಶ್ವರ್ಯ, ಬ್ಯಾಂಕ್ ಬ್ಯಾಲೆನ್ಸು ಇವುಗಳನ್ನು ಕೊಟ್ಟು ಬೆಳೆಸಿದರೇನೇ, ಮಕ್ಕಳು ಬೆಳೀತಾವ? ಹಾಗಂತ ಒಮ್ಮೆ ಯೋಚಿಸಿ ನೋಡಿ, ಮಕ್ಕಳ ಮುಖ ನೋಡದೆ ದುಡಿದು ದುಡಿದೂ ಹೈರಾಣಾದ ಅಪ್ಪ, ಕಾಸಿಗೆ ಕಾಸು ಕೂಡಿಸಿ ಮಕ್ಕಳಿಗೆ ರವಾನಿಸುವಷ್ಟರ ಹೊತ್ತಿಗೆ ಮಕ್ಕಳು ಡಾಲರ್ ಲೆಕ್ಕದಲ್ಲಿ ದುಡಿಯೋದಕ್ಕೆ ಶುರು ಮಾಡಿರ್ತಾರೆ! ಆಗ ಅದು ಮಕ್ಕಳಿಗೆ ತವರುಮನೆ ಉಡುಗೊರೆ! ಅದೊಂದು ಭಾವನಾತ್ಮಕ ವಸ್ತು ಅಷ್ಟೆ. ಅದೇ ಎಂದೂ ಕರಗದ ಆಸ್ತಿಯೆಂದರೆ ಬಾಲ್ಯದಿಂದ ಬೆಳೆದು ದೊಡ್ಡವರಾಗುವವರೆಗೆ ನಾವು ಕಲಿಸುವ ಸಂಸ್ಕಾರ; ಮನೆಯಲ್ಲಿ ಕಲಿತ ನೀತಿಪಾಠ, ಸೌಜನ್ಯದ ಜೀವನ ಸಾರ, ಮನುಷ್ಯತ್ವ, ಮಾನವ ಸಂಬಂಧ, ಇವುಗಳೇ ಅವರನ್ನ ಆಸ್ತಿವಂತರನ್ನಾಗಿ ರೂಪಿಸಿಬಿಡುತ್ತವೆ.

ಇವತ್ತು ನೋಡಿ! ನಾವು ದೃಶ್ಯ ಮಾಧ್ಯಮದಿಂದ ಹಿಡಿದು ಅಕ್ಷರಲೋಕದ ಪತ್ರಿಕೆಗಳವರೆಗೆ ಬಿತ್ತರವಾಗುವ ಸುದ್ದಿಗಳನ್ನೊಮ್ಮೆ ಗಮನಿಸಿದರೆ, ನಾವು ಎಲ್ಲಿದ್ದೇವೆ ಎಂಬ ಆತಂಕ, ಭಯ ನಮ್ಮನ್ನು ಕಾಡುತ್ತದೆ. ರಕ್ತ, ಹಿಂಸೆ, ಕೊಲೆ, ಸುಲಿಗೆ, ದರೋಡೆ ಮನುಷ್ಯತ್ವವನ್ನೇ ಮರೆತ ಹತ್ಯಾಕಾಂಡದ ಯುಗದಲ್ಲಿ ನಾವಿದ್ದೇವೆ ಎಂದರೆ ತಪ್ಪೇ ಇಲ್ಲ!

ಹೀಗೆ ಮೊನ್ನೆ ಪತ್ರಿಕೆಯ ಸುದ್ದಿಯೊಂದರಲ್ಲಿ 30–35ರ ಆಸುಪಾಸಿನ ಮಹಿಳೆಯೊಬ್ಬಳನ್ನ ಅತ್ಯಾಚಾರ ಮಾಡಿ, ಕೊಲೆಮಾಡಿ ಮೂಟೆಕಟ್ಟಿ ಕಸದ ಲಾರಿಗೆ ತಂದು ಬಿಸಾಡಿದ ಸುದ್ದಿನೋಡಿ ತುಂಬಾ ಆಘಾತವಾಯಿತು. ಅಂದರೆ ಹೆಣ್ಣೊಬ್ಬಳನ್ನ ಭೋಗಿಸಿ ಕೊಂದು ಕಸದ ಲಾರಿಗೆ ಎಸೆಯುವ ಮಟ್ಟಕ್ಕೆ ಕಿರಾತಕರು ಬಂದುಬಿಟ್ಟರು. ಅಂದ ಮೇಲೆ ಇದನ್ನೆಲ್ಲಾ ಮಾಡುತ್ತಿರುವವರು ಮನುಷ್ಯರಾ? ಮೃಗಗಳಾ? ಮೃಗಗಳಿಗೆ ವಿಷಹಾಕಿ ಕೊಲ್ಲುವ ವಿಕೃತಿಗಳು ಮನುಷ್ಯತ್ವವನ್ನೇ ಮರೆತ ಇಂತಹ ಮಹಾ ಮಾನವರ ಕಾಲದಲ್ಲಿ ನಾವಿದ್ದೇವಲ್ಲ! ಹೇಳಿ ಎಲ್ಲಿದೆ ನೈತಿಕತೆ?

ಹಾಗಾದರೆ ಇವರೆಲ್ಲಾ ಮನುಷ್ಯರೇ ಅಲ್ಲವೇ? ಒಂದು ವೇಳೆ ಮನುಷ್ಯರೇ ಆಗಿದ್ದರೆ ಮಾನವೀಯತೆ ಎನ್ನುವ ಕನಿಷ್ಠ ಪ್ರಜ್ಞೆ ಅವರ ನರನಾಡಿಗಳಲ್ಲಿ ಏಕಿಲ್ಲ? ನಮ್ಮ ನಡುವಿನ ಜನರೇ ಈ ಎಲ್ಲಾ ಕುಕೃತ್ಯಗಳಲ್ಲಿ ಭಾಗಿಯಾಗುವ ನರಹಂತಕರು. ಆದರೆ ನಮಗೆ ಅದು ಗೊತ್ತೇ ಆಗಿರುವುದಿಲ್ಲ. ಯಾಕೆ ಗೊತ್ತ? ಸಮಾಜ ಮನುಷ್ಯನನ್ನ ಗಮನಿಸುವುದು ಮೇಲೆ ಹೇಳಿದ ಹಾಗೆ ಅವನ ಭೌತಿಕ ವಸ್ತು, ವಿಷಯಗಳ ಆಧಾರದ ಮೇಲೆ, ಒಳಗೆ ಅವನ ಸಂಸ್ಕಾರ, ಸಂಸ್ಕೃತಿಗಳ ಪರಿವೆಯೇ ನಮಗೆ ಮಾನದಂಡವಾಗುವುದಿಲ್ಲ. ಅದೇ ನಮ್ಮ ದೊಡ್ಡ ದೌರ್ಬಲ್ಯ.

ಕಳೆದ ವಾರ ಮಳವಳ್ಳಿ ತಾಲೂಕಿನ ಕಿರುಗಾವಲಿನಲ್ಲಿ ಒಬ್ಬ ಮಗ ತನ್ನ ತಾಯಿಯನ್ನ ಕರೆತಂದು ಇಲ್ಲೇ ಕೂತಿರು ನಾನು ಬರುತ್ತೇನೆಂದು ಹೇಳಿ ಹೋದವನು ಬರಲೇ ಇಲ್ಲ ಅಂತ ಪತ್ರಿಕೆಯಲ್ಲಿ ಸುದ್ದಿಯೊಂದನ್ನ ಓದಿದೆ. ಆಕೆಗೆ 75ರಿಂದ 80ರ ವಯಸ್ಸು. ತಾಯಿಗೆ ತನ್ನ ಊರಿನ ಹೆಸರು ಗೊತ್ತೇ ಹೊರತು ಬೇರೇನೂ ಗೊತ್ತಿಲ್ಲ. ಮಳೆ, ಗಾಳಿ, ಚಳಿಯಲ್ಲಿ ಒಬ್ಬಳೇ ವನವಾಸ ಮಾಡಿದ್ದಾಳೆ. ಅಕ್ಕಪಕ್ಕದವರು ಅನ್ನ–ನೀರು, ನೀಡಿ ಮಳೆ ಬಂದಾಗ ಆಶ್ರಯ ನೀಡಿ, ಆಕೆಯನ್ನ ವಿಚಾರಿಸಿದಾಗಲೂ ನನ್ನ ಮಗ ಬರ್ತಾನೆ... ಬರ್ತಾನೆ, ಬಂದು ಕರ್ಕೊಂಡು ಹೋಗ್ತಾನೆ... ಎನ್ನುತ್ತಿದ್ದಳಂತೆ ಆ ತಾಯಿ. ಅಂದರೆ ಆ ತಲೆಮಾರಿನ ಹಳ್ಳಿ ಹೆಂಗಸರಿಗೆ ಮಕ್ಕಳು ಏನೇ ಮಾಡಿದರು ಅವರ ಮೇಲೆ ನಂಬಿಕೆ, ಪ್ರೀತಿ, ನಿರೀಕ್ಷೆ, ಸದಾ ತಾಯಿ ಯಾವತ್ತಿಗೂ ಮಕ್ಕಳ ಪರಾನೆ. ಈಗ ಕಾಲ ಬದಲಾಗಿದೆ ಬಿಡಿ!

ಸೋಷಿಯಲ್ ಮೀಡಿಯಾದಲ್ಲಿ ಮಕ್ಕಳನ್ನ ನಂಬಬೇಡಿ; ನಿಮ್ಮ ಆಸ್ತಿ, ನಿಮ್ಮ ದುಡ್ಡು, ನಿಮ್ಮ ಬಂಗಾರ, ನಿಮ್ಮ ಪೆನ್ಷನ್ನು, ನಿಮ್ಮ ಕೈಕಾಲು ನಡೆಯುವವರೆಗೂ ನಿಮ್ಮ ಬಳಿಯೇ ಇಟ್ಟುಕೊಂಡಿರಿ. ಯಾರಿಗೂ ಕೊಡಬೇಡಿ, ಕೊಟ್ಟರೆ ಕೆಟ್ಟಿರಿ! ಎಂಬರ್ಥದ ಹತ್ತಾರು ನೀತಿ ಪಾಠಗಳು ಚಾಲ್ತಿಯಲ್ಲಿವೆ. ಇಲ್ಲಿಗೆ ಬಂದು ಮುಟ್ಟಿದೆ. ನಮ್ಮ ಮನುಷ್ಯ ಸಂಬಂಧಗಳು.

ಇಂದಿನ ಅಂಕಣವನ್ನ ಹಾಗೆ ಸುಮ್ಮನೆ ವರ್ತಮಾನದ ಭೀಭತ್ಸ ಸುದ್ದಿಗಳ ಬಗ್ಗೆ ಲೋಕಾಭಿರಾಮವಾಗಿ ಬರೆಯಬೇಕೆನ್ನಿಸಿ ಬರೆದಿದ್ದೇನೆ. ಯಾಕೆ ಗೊತ್ತಾ! ಆ ಕಿರುಗಾವಲಿನ ತಾಯಿಯ ವಯಸ್ಸಿನ ಹೆಣ್ಣುಮಗಳೊಬ್ಬಳು ತನ್ನ ಅಸಹಾಯಕತೆಯ ದಿನಗಳಲ್ಲೂ ದುಡ್ಡು, ದುಗ್ಗಾಣಿ, ಒಡವೆ, ಬಂಗಾರ ಕೊಡದೆ ಬರಿಯ ಸಂಸ್ಕಾರ–ಸಂಸ್ಕೃತಿ ಕಲಿಸಿದ ಮೊರದ ನಂಜಮ್ಮ ಎಂಬ ಸುಸಂಸ್ಕೃತ ಶ್ರೀಮಂತ ಹೆಣ್ಣು ಮಗಳೊಬ್ಬಳು ನೆನಪಾದಳು.

ಆಕೆಗೆ ನನ್ನ ತಾಯಿಯ ವಯಸ್ಸು, ಅವರಿಗೆ ಒಬ್ಬನೇ ಮಗ. ಹುಡುಗ 3ನೇ ತರಗತಿಯಲ್ಲಿದ್ದಾಗಲೇ ಗಂಡನನ್ನ ಕಳೆದುಕೊಂಡು, ಮಗನನ್ನ ಸಾಕುವ ಜವಾಬ್ದಾರಿ ಹೊತ್ತುಕೊಂಡವಳು. ಆಕೆಗೆ ಆಸ್ತಿಯಿಲ್ಲ–ಪಾಸ್ತಿಯಿಲ್ಲ. ತನ್ನ ಮಗನನ್ನೇ ಆಸ್ತಿಯನ್ನಾಗಿ ಬೆಳೆಸಿದವಳು. ಅಂದರೆ ದೊಡ್ಡ ಇಂಗ್ಲೀಷ್ ಕಾನ್ವೆಂಟಿನಲ್ಲಿ ಸೀಟು ಕೊಡಿಸಿ ಎಂಜಿನಿಯರ್ ಮಾಡಿ ಕೈತೊಳೆದುಕೊಂಡವಳಲ್ಲ?. ದುಡ್ಡು, ಸೌಂದರ್ಯ, ಒಡವೆ–ಬಂಗಾರ, ಕೊಡಲಿಕ್ಕಾಗದ ಜೀವ, ಸತ್ಯ, ನಿಷ್ಠೆ, ಪ್ರಾಮಾಣಿಕತೆಯೆಂಬ ಸಂಸ್ಕಾರ ಕಲಿಸಿ ಹೋದ ಹಿರಿಯ ಜೀವ! ಅದು, ಕಡು ಕಷ್ಟದ ದಿನಗಳಲ್ಲೂ ಸತ್ಯ, ಕಾಯಕ ನಿಷ್ಠೆ ಹೇಳಿಕೊಟ್ಟ ದೇಸಿ ಪ್ರಭೆ.

ಆಕೆಯ ಒಬ್ಬನೇ ಮಗ ಸರ್ಕಾರಿ ಕೆಲಸದಲ್ಲಿ ಬಹುದೊಡ್ಡ ಹುದ್ದೆಯೊಂದರಲ್ಲಿದ್ದು ನಿವೃತ್ತಿಯಾದವರು. ನನಗೆ ತುಂಬಾ ಪರಿಚಿತರು. ಒಮ್ಮೆ ಅವರನ್ನು ಭೇಟಿಯಾಗಲು ಬೆಂಗಳೂರಿನ ಅವರ ಆಫೀಸಿಗೆ ಹೋಗಿದ್ದೆ. ಕಚೇರಿಯಲ್ಲಿ ಅವರಿರಲಿಲ್ಲ, ಅವರ ಸಹಾಯಕನನ್ನ ಕೇಳಿದೆ. ಇಲ್ಲೇ ಕೆ.ಸಿ.ಜನರಲ್ ಆಸ್ಪತ್ರೆಗೆ ಹೋಗಿ ಬರ್ತೀನಂತ ಹೋಗಿದ್ದಾರೆ ಸರ್, ಬನ್ನಿ, ಕುಳಿತುಕೊಳ್ಳಿ, ಬರ್ತಾರೆ ಎಂದ.

ಆದರೆ ಅವರಿಗೆ Surprise ಆಗಿ ಅಲ್ಲೇ ಸಿಗೋಣ ಅಂತ ಆಸ್ಪತ್ರೆಗೆ ಹೊರಟೆ. ಜನರಲ್ ವಾರ್ಡ್‌ನಲ್ಲಿ ಸಕ್ಕರೆ ಖಾಯಿಲೆಯಿಂದ ಕಾಲು ತೆಗೆಸಿಕೊಂಡು ಆಗ ತಾನೇ ಬ್ಯಾಂಡೇಜು ಮಾಡಿಸಿಕೊಂಡು ಕಾಲಿನಿಂದ ರಕ್ತ ಒಸರುತ್ತಿದ್ದ ಮಹಿಳೆಯೊಬ್ಬರ ಬಳಿ ಅವರು ಮಾತಾಡುತ್ತಾ ಕುಳಿತಿದ್ದರು. ನಾನು ಅಲ್ಲಿಯೇ ಹೋಗಿ ಅವರನ್ನ ಆಲಂಗಿಸಿ ಮಾತಾಡಿ ಹೊರಗೆ ಕಾಯುತ್ತೇನೆಂದು ಹೇಳಿ ಹೊರಬಂದೆ. ಆಶ್ಚರ್ಯವೆಂದರೆ ಕೂಡಲೇ ಅವರೂ ಹೊರಗಡೆ ಬಂದು ಬಿಟ್ಟರು. ಸುಮ್ಮನಿರದ ನಾನು ಪಾಪ ನಿಮ್ಮ ಸಂಬಂಧಿಕರ ಬಳಿ ಮಾತಾಡುವುದಕ್ಕೂ ಬಿಡಲಿಲ್ಲ, ನಾನು ಅಲ್ಲವೇ ಎಂದೆ? ಅದಕ್ಕವರು ಇಲ್ಲ ಗುಬ್ಬಿ ಅವರು ನನ್ನ ಸಂಬಂಧಿಕರಲ್ಲ. ಅವರು ನನ್ನ ಪರಿಚಿತರೂ ಅಲ್ಲ, ಹಾಗೆ ಸುಮ್ಮನೆ ಬಂದೆ ಎಂದರು. ಅಲ್ಲೇ ಕಲ್ಲು ಬೆಂಚಿನ ಮೇಲೆ ಕುಳಿತು ಲೋಕಾಭಿರಾಮ ಮಾತಾಡುತ್ತಾ ಹಾಗಿದ್ದ ಮೇಲೆ ಯಾರವರು ಎಂದೆ? ಯಾರೋ ಗೊತ್ತಿಲ್ಲ ಎಂದರು.

ಗೊತ್ತಿಲ್ಲದಿದ್ದ ಮೇಲೆ lunch hourನಲ್ಲಿ ನೀವ್ಯಾಕೆ ಅಲ್ಲಿಗೆ ಹೋದಿರಿ ಎಂದೆ. ಆಗ ಬಂತು ನೋಡಿ ನಿಜವಾದ ಕಥೆ. ಗುಬ್ಬಿ ನಿಮಗೆ ಗೊತ್ತು ನಾನು ಇದುವರೆಗೂ ಒಂದು ರೂಪಾಯಿ ಲಂಚದ ರೂಪದಲ್ಲೋ, ಉಡುಗೊರೆಯ ರೂಪದಲ್ಲೋ ಯಾರಿಂದಲೂ ಏನನ್ನೂ ಪಡೆದವನಲ್ಲ. ಆದರೂ ನಿನ್ನೆ ದಿನ ನನ್ನ ಸಹಾಯಕ ಬಂದು ನಾನು ನಿಯಮಾನುಸಾರ ಕಾನೂನಾತ್ಮಕವಾಗಿ ಮಾಡಿಕೊಟ್ಟ ಒಂದು ಕೆಲಸಕ್ಕೆ ಆ ಕೆಲಸ ಮಾಡಿಸಿಕೊಂಡವರು ಉಡುಗೊರೆಯ ರೂಪದಲ್ಲಿ ಒಂದಷ್ಟು ದುಡ್ಡು ತಂದು ಕೊಟ್ಟಿದ್ದಾರೆ ಎಂದು ಹೇಳಿ ನನಗೆ ನೀಡಲು ಬಂದ. ನಾನದನ್ನು ನಿರಾಕರಿಸಿದೆ. ಆದರೂ ಆತ ಕೇಳಲಿಲ್ಲ ಒತ್ತಾಯ ಮಾಡಿ ಟೇಬಲ್ಲಿನ ಮೇಲೆ ಇಟ್ಟುಹೋದ. ಅನಿವಾರ್ಯವಾಗಿ ನಾನದನ್ನು ತೆಗೆದುಕೊಳ್ಳಬೇಕಾಯಿತು. ತೆಗೆದುಕೊಂಡ ಕೂಡಲೇ ನನ್ನ ಸ್ಮೃತಿಪಟಲದ ಮೇಲೆ ನನ್ನವ್ವ ನೆನಪಾದಳು.

ನಾನಾಗ ಮೂರನೇ ಕ್ಲಾಸು, ಶಾಲೆಯಿಂದ ಮನೆಗೆ ಬಂದಿದ್ದೆ. ಅವ್ವ ಪ್ರತಿದಿನ ಕೂಲಿಗೆ ಹೋಗುತ್ತಿದ್ದಳು. ಮೊರದ ನಂಜಮ್ಮ ಅಂದರೆ ತುಂಬಾ ಒಳ್ಳೇ ಕೆಲಸಗಾರ್ತಿ ಅನ್ನೋರು. ಮೊರದ ಅಕ್ಕಿ ಕೇರಿ ಭತ್ತ ಆಯ್ದು ಕ್ಲೀನ್ ಮಾಡುವ ಕೆಲಸ ನನ್ನ ಅವ್ವ ಚೆನ್ನಾಗಿ ನಿಭಾಯಿಸುತ್ತಿದ್ದಳು. ಅಂದೂ ಕೂಡ ಹಾಗೇ ಕೆಲಸ ಮುಗಿಸಿ ಮನೆಗೆ ಬರುವಾಗ ದಾರಿಯಲ್ಲಿ ನಮ್ಮವ್ವನಿಗೆ 5 ರೂಪಾಯಿಯ ನೋಟೊಂದು ಸಿಕ್ಕಿತ್ತು. ಯಾರೋ ದಾರಿಯಲ್ಲಿ ಬೀಳಿಸಿಕೊಂಡು ಹೋಗಿದ್ದರು. ಅವ್ವ ಅದನ್ನು ತಂದು ದೇವರ ಮುಂದೆ ಇಟ್ಟಿದ್ದಳು. ರಾತ್ರಿ ಊಟಕ್ಕೆ ಅಕ್ಕಿ ಸೋಸುತ್ತಿದ್ದಳು. ಶಾಲೆಯಿಂದ ಮನೆಗೆ ಬಂದವನೆ ದೇವರ ಫೋಟೊ ಮುಂದೆ ಐದು ರೂಪಾಯಿ ನೋಟು ನೋಡಿದ ನಾನು ಅವ್ವ ಐದು ರೂಪಾಯಿ – ಅಂತ ಸಂಭ್ರಮದಿಂದ ಕೂಗಿದೆ.

ಅವ್ವನಿಗೆ ಅದು ಗೊತ್ತಿರಲಿಕ್ಕಿಲ್ಲ ಹೇಗೋ ಅದು ಅಲ್ಲಿಗೆ ಬಂದುಬಿಟ್ಟಿದೆ ಅಂತ ನಾನು ಭಾವಿಸಿದ್ದೆ. ಆದರೆ ಅವ್ವ ನಿರುಮ್ಮಳನಾಗಿ ಕಂದ ಅದನ್ನ ಅಲ್ಲೆ ಮಡಗು ಅದು ದೇವರ ದುಡ್ಡು, ನಾನೇ ಅಲ್ಲಿಟ್ಟಿವ್ನಿ. ದಾರೀಲಿ ಯಾರೋ ಬೀಳಿಸ್ಕೊಂಡೊಗಿದ್ರು, ನನಗೆ ಸಿಕ್ತು. ಕಂಡೋರ್ ದುಡ್ಡು ನಮಗ್ಯಾಕ, ನಾಳೆ ದೇವಸ್ಥಾನಕ್ಕೆ ಹೋದಾಗ ಹುಂಡಿಗಾಕಾನ, ನಿನ್ನ ಕೈಯಲ್ಲೇ ಹಾಕಿಸ್ತೀನಿ. ಬೇರೆಯವರ ದುಡ್ಡು, ಬಂಗಾರ, ಆಸ್ತಿ, ಪಾಸ್ತಿ, ಯಾವತ್ತಿಗೂ ನಮ್ಮದಲ್ಲ ಕೂಸೆ ಅಂದುಬಿಟ್ಟಳು. ಮಾರನೆಯ ದಿನ ಅವ್ವ ಹೇಳಿದ ಹಾಗೆಯೇ ಮಾಡಿದಳು. ಅಂದಿನಿಂದ ಇಂದಿನ ತನಕ ನಾನು ಸರ್ಕಾರಿ ಸೇವೆಯಲ್ಲಿ ಆಯಕಟ್ಟಿನ ಜಾಗಗಳಲ್ಲಿ ಕೆಲಸ ಮಾಡಿದೆ. ಗುಬ್ಬಿ ಒಂದು ರೂಪಾಯಿ ನಾನು ಮುಟ್ಟಲಿಲ್ಲ ಕಾರಣ ಅವ್ವ ಹೇಳಿದ್ಲು–ಕಂಡೋರ್ ದುಡ್ಡು ನಮಗಲ್ಲ ಕೂಸೆ ಅಂತ.

ಅವ್ವ ಕೂಲಿ ಮಾಡಿ ನನ್ನನ್ನು ಸಾಕುವಾಗ ಅವಳ ದಿನಗೂಲಿ ದಿನಕ್ಕೆ ಐವತ್ತು ಪೈಸೆ ಗುಬ್ಬಿ. ರಾತ್ರಿ ನಮಗೆ ಹಾಸಲು, ಹೊದೆಯಲೂ, ಇರುತ್ತಿಲಿಲ್ಲ. ರಾತ್ರಿ ಹೊತ್ತು ನಮ್ಮ ಮನೆಯಲ್ಲಿದ್ದ ಗೋಣಿ ಚೀಲದ ಒಳಗೆ ಮುದುರಿಕೊಂಡು, ಅದನ್ನೇ ಹಾಸಿಗೆ, ಹೊದಿಕೆ ಮಾಡಿಕೊಂಡು ಮಲಗುತ್ತಿದ್ದೆ. ಅಂಬಲಿ ಕುಡಿದು ಅಪರೂಪಕ್ಕೆ ಅನ್ನ ಉಂಡರೂ ಅವ್ವ ಸತ್ಯ, ನಿಷ್ಠೆಯಿಂದ ಬದುಕೋದನ್ನ ಹೇಳಿಕೊಟ್ಟಿದ್ದಳು. ಐವತ್ತು ಪೈಸೆ ಕೂಲಿಯ ಕಾಲದಲ್ಲಿ ಐದು ರೂಪಾಯಿ ನಮ್ಮವ್ವನನ್ನು ಅಲ್ಲಾಡಿಸಲಿಲ್ಲ, ಪ್ರಚೋದಿಸಲಿಲ್ಲ. ಇವತ್ತು ನನಗೆ ಲಕ್ಷಾಂತರ ರೂಪಾಯಿ ಸಂಬಳ ಬರುತ್ತಿದೆ. ನನ್ನ ಹೆಂಡತಿ ದೊಡ್ಡ ಹುದ್ದೆಯಲ್ಲಿದ್ದಾಳೆ. ನನ್ನ ಇಬ್ಬರು ಮಕ್ಕಳು ವೈದ್ಯರು.

ನನ್ನ ಸಂಬಳದಲ್ಲೇ ನಾನು ಅನುಕೂಲವಾಗಿದ್ದೇನೆ. ನಮ್ಮವ್ವ ಹೇಳಿದ ಕಂಡೋರ್ ದುಡ್ಡು ನಮಗ್ಯಾಕ ಕೂಸೆ – ಮಾತು ನನ್ನ ಜೀವನವನ್ನು ರೂಪಿಸಿದೆ. ಆದರೆ ಇಂದು ಆಕಸ್ಮಿಕವಾಗಿ ಒತ್ತಾಯಪೂರ್ವಕವಾಗಿ ನಾನು ಒಲ್ಲೆ ಎಂದರೂ ನನ್ನ ಕೈ ಸೇರಿದ ಆ ದುಡ್ಡು ಎಷ್ಟಿದೆ ಅಂತಲೂ ನೋಡಲಿಲ್ಲ. ಕವರಿನ ಒಳಗಿದ್ದ ಅಷ್ಟೋ ಹಣವನ್ನು ತೆಗೆದುಕೊಂಡು ಈ ಕೆ.ಸಿ.ಜನರಲ್ ಆಸ್ಪತ್ರೆಗೆ ಬಂದೆ. ನಿರ್ಗತಿಕ ಬಡರೋಗಿ ಯಾರಾದರೂ ಇದ್ದಾರ ಅಂತ ಅಲ್ಲಿನ ದಾದಿಯರನ್ನ ವಿಚಾರಿಸಿದೆ. ಅವರು ನೀವು ಬಂದಾಗ ನಾನು ಮಾತಾಡುತ್ತಿದ್ದ ಮಹಿಳೆಯನ್ನ ತೋರಿಸಿ ನೋಡಿ ಆಕೆಗೆ ಗಂಡ, ಮಕ್ಕಳು ಯಾರೂ ಇಲ್ಲ ತುಂಬಾ ಬಡವಿ. ನಿನ್ನೆ ತಾನೆ ಕಾಲಿಗೆ ಶಸ್ತ್ರಚಿಕಿತ್ಸೆ ಆಗಿದೆ ಎಂದರು.

ಹಣವಿದ್ದ ಆ ಕವರನ್ನು ಆಕೆಗೆ ಕೊಟ್ಟು ಆಕೆಯ ಆರೋಗ್ಯ ಸುಧಾರಿಸಿಕೊ ಅಮ್ಮ ಎಂದು ಹೇಳುತ್ತಿದ್ದೆ. ಯಾವ ತಾಯಿ ಹೆತ್ತ ಮಗನೋ ಅಪ್ಪ ನೀನು, ಸಂಬಂಧವೇ ಇಲ್ಲದ ನನಗೆ ಸಹಾಯ ಮಾಡಲು ಬಂದಿದ್ದೀಯಾ. ದೇವರು ನಿನಗೆ ಒಳ್ಳೇದು ಮಾಡಲಿ ಅಂತ ಆಕೆ ಹರಸುತ್ತಿದ್ದಳು. ಕಿವಿಯಲ್ಲಿ ಕಂಡೋರ್ ದುಡ್ಡು ನಮಗಲ್ಲ ಕೂಸೆ–ಅಂತ ಅವ್ವ ಕಿವಿಯಲ್ಲಿ ಸಾವಿರಸಲ ಹೇಳಿದ ಹಾಗೆ ಭಾಸವಾಗುತ್ತಿತ್ತು. ಅಷ್ಟರಲ್ಲಿ ನೀವು ಬಂದಿರಿ ಅಷ್ಟೆ ಎಂದರು. ಅದಕ್ಕೇ ನಾನು ಆರಂಭದಲ್ಲಿ ಹೇಳಿದ್ದು, ಒಂದು ತಲೆಮಾರಿತ್ತು. ಅದು ನಮ್ಮ ಹಿರಿಯ ತಲೆಮಾರು ನುಗ್ಗೇನ ಮುರಿದು ಸಾಕು, ಮಕ್ಕಳನ್ನು ಬಡಿದು ಸಾಕು–ಎನ್ನುವ ಗಾದೆ ಮಾತಿನಂತೆ ಮಕ್ಕಳನ್ನು ಸಾಕಿದರು. ಹಾಗೆಯೇ ತಾಯಂದಿರು ಒಂದು ತಲೆಮಾರನ್ನು ರೂಪಿಸಿದರು.

ನನ್ನ ಗೆಳೆಯ ಮಾತು ಮುಂದುವರಿಸಿದರು, ಗುಬ್ಬಿ ಚಿಕ್ಕಂದಿನಲ್ಲಿ ಒಮ್ಮೆ ಗೆಳೆಯರ ಸಹವಾಸ ಮಾಡಿ ಕಾಸಿನ ಆಸೆಗೆ ಬಿದ್ದು ಶಾಲೆಗೆ ಹೋಗದೆ ಕೂಲಿಗೆ ಹೋಗಿದ್ದೆ. ಎಂಟಾಣೆ ತಂದು ಅವ್ವನ ಕೈಯಲ್ಲಿಟ್ಟೆ. ಒಳಗೆ ಸೌದೆ ತೆಗೆದುಕೊಂಡು ಬಡಿದು, ಬೈದು, ಅತ್ತು ಕರೆದು ಸುಸ್ತಾದಳು. ನಾನು ಕೂಲಿ ಮಾಡಿ ನಿನ್ನ ಓದುಸ್ತೀನಿ ನೀನು ಚೆನ್ನಾಗಿ ಓದಬೇಕು ಇನ್ನು ಮೇಲೆ ನೀನು ಕೂಲಿಗೀಲಿ ಅಂತ ಹೋದ್ರೆ ನನ್ನಾಣೆ ಅಂತ ಹೇಳಿ ಶಾಲೆಗೆ ಕಳಿಸಿದ ತಾಯಿ ನನಗೆ ವಿದ್ಯೆ–ಬುದ್ಧಿ–ನಡವಳಿಕೆ ಕಲಿಸಿದ ಮೊದಲ ಗುರು.

ನಮ್ಮ ಊರಿನಲ್ಲಿ ನಿನ್ನ ಮಗ ಓದಿ ದೊಡ್ಡ ಆಫೀಸರ್ ಆಗ್ತಾನ ಅಂತ ಅವ್ವನನ್ನು ಲೇವಡಿ ಮಾಡಿದರು ಗುಬ್ಬಿ. ಆ ಲೇವಡಿಯ ಮಾತುಗಳು ನನ್ನಲ್ಲಿ ಹಠ ಹುಟ್ಟಿಸಿದವು. ವಿದ್ಯೆ ನನ್ನ ಮೊದಲ ಪ್ರಯಾರಿಟಿಯಾಯಿತು. ಲೇವಡಿ ಮಾಡಿದವರ ಮುಂದೆ ಮೊದಲ ಬಾರಿಗೆ ನಾನು ಕೇಂದ್ರ ಸರ್ಕಾರದಲ್ಲಿ ಆಫೀಸರ್ ಆಗಿಯೇ ನನ್ನ ಸೇವೆ ಶುರು ಮಾಡಿದೆ. ಹೆತ್ತವರ ಹರಕೆ, ಅವರು ಕಲಿಸಿದ ಜೀವನ ಮೌಲ್ಯಗಳಿಗೆ ಅವರು ವಿದ್ಯಾವಂತರೇ ಆಗಬೇಕಿಲ್ಲ. ಪುಣ್ಯಕೋಟಿಯಂಥಾ ತಾಯಂದಿರು ಈ ನಾಡಿನ ತುಂಬಾ ಬಂಗಾರ, ವಸ್ತು, ಒಡವೆ, ಕೊಡದೇಹೋದರೂ, ಸತ್ಯ, ನ್ಯಾಯ, ನೀತಿ, ಕಲಿಸಿದ ಅದೆಷ್ಟೋ ಮಕ್ಕಳು ಬಾಳಿ ಬೆಳಗಿದ್ದಾರೆ.

ಕಿರುಗಾವಲಿನ ಆ ಅಜ್ಜಿಯೂ ಮಗ ಬರ್ತಾನೆ ಅಂತ ಒಬ್ಬಂಟಿಯಾಗಿ ಕಾದು ಕುಳಿತ ಪತ್ರಿಕೆಯ ಸುದ್ದಿಯೊಂದು ನಾನು ಲೋಕಾಭಿರಾಮವಾಗಿ ನಿಮ್ಮೊಂದಿಗೆ ಸಂದ ಅಜ್ಞಾತನೊಬ್ಬನ ಆತ್ಮಚರಿತ್ರೆಯನ್ನು ಹಂಚಿಕೊಳ್ಳುವಂತೆ ಮಾಡಿತು.

ನಾವು ಸಾಧಿಸಿದವರ, ಸೆಲೆಬ್ರಿಟಿಗಳ, ದೊಡ್ಡವರ, ಬದುಕಿನ ಘಟನೆಗಳನ್ನ, ಬಯಾಗ್ರಫಿಗಳನ್ನ ಓದುತ್ತೇವೆ. ಸಾಮಾನ್ಯನೊಬ್ಬನ ಚಿಕ್ಕ ವಿಷಯ ಕೂಡ ಎಲ್ಲೋ ಒಂದುಕಡೆ ಕೆಲವೊಮ್ಮೆ ಮನಸ್ಸೆಂಬ ಕತ್ತಲಿಗೆ ಕಂದೀಲು ಹಚ್ಚಿ ಬೆಳಕಾಗಿಸುತ್ತದೆ.

ಅಲ್ಲಿ ಮನುಷ್ಯತ್ವ ಹುಟ್ಟುತ್ತದೆ. ಆದರೆ ಅಂಕಗಣಿತದ ಇಂದಿನ ಯುಗದಲ್ಲಿ ರಕ್ತ ಸಂಬಂಧಗಳ ಜೊತೆ ಜೊತೆಗೆ ಮನುಷ್ಯ ಸಂಬಂಧಗಳೂ ಕೂಡ ದೊಡ್ಡದು ಅಂತ ಹೇಳಿಕೊಡುವ ಬರಹಗಳು, ಘಟನೆಗಳು ಜೀವನ ಚಿತ್ರಗಳು. ಮನಮುಟ್ಟುವಂತೆ ಮಕ್ಕಳಿಗೆ ತಲುಪಿಸಿ ಅವರನ್ನು ರೂಪಿಸಬೇಕು. ಶಾಲೆಗಳಲ್ಲಿ ಪಠ್ಯಕೇಂದ್ರಿತ ವಿದ್ಯಾಭ್ಯಾಸಗಳಿರುವಾಗ ನಮ್ಮ ಹಿಂದಿನ ತಲೆಮಾರಿನ ತಾಯಂದಿರು ರೂಪಿಸಿದ ಮಕ್ಕಳಂತೆ ನಾವು ನಮ್ಮ ತಲೆಮಾರನ್ನ ರೂಪಿಸಿದರೆ, ಅಪರಾಧಿಗಳು ಹೃದಯವಿದ್ರಾವಕವಾಗಿ ನಡೆದುಕೊಳ್ಳುತ್ತಿರುವ ಇಂದಿನ ತಲೆಮಾರಿಗೆ, ಮನುಷ್ಯ ಸಂಬಂಧದ ಆಪ್ಯಾಯತೆಯ ಪರಿಚಯ ಮಾಡಿದಂತಾಗುತ್ತದೆ.

ಬಸವಣ್ಣನವರು ಲೋಕವನ್ನು ತಿದ್ದಲು ಹೊರಟ ಸುಧಾರಕರನ್ನು ಕುರಿತು ಹೇಳಿದ ಮಾತೊಂದಿದೆ.

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮನಿಮ್ಮ ಮನವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲಸಂಗಮದೇವ?!


ಎಂದು ಹೇಳಿದ ಮಾತು ಜನಜನಿತ. ಜಗತ್ತನ್ನು ತಿದ್ದುವುದು ಸಾಧ್ಯವಿಲ್ಲ; ವ್ಯಕ್ತಿ ತನ್ನನ್ನು ತಾನು ತಿದ್ದಿಕೊಳ್ಳುವುದೇ ವಿವೇಕ, ಅದೇ ಮರ್ತ್ಯಲೋಕ.

ಬದುಕೆಂದರೆ ಪದವಿ ಪ್ರಮಾಣ ಪತ್ರದೊಂದಿಗಿನ ಸಂಪಾದನೆಯ ಮಾರ್ಗ ಒಂದೇ ಅಲ್ಲ, ಬದುಕೆಂದರೆ ನೌಕರಿ ಸಿಕ್ಕಿದ ಕೂಡಲೆ ತಂದೆ ತಾಯಿಗಳಿಂದ ದೂರಾಗಿ ಹೆಂಡತಿ ಮಕ್ಕಳೊಂದಿಗೆ ಸುಖವಾಗಿರುವುದೊಂದೇ ಅಲ್ಲ; ಬದುಕೆಂದರೆ ಪ್ರೀತಿಮಾಡಿ ಮನೆ ಬಿಟ್ಟು ಓಡಿಹೋಗುವುದಲ್ಲ; ಬದುಕೆಂದರೆ ಮಕ್ಕಳ ವಿನಯವಂತಿಕೆ; ಹೆತ್ತವರ ಸಂಸ್ಕಾರ ಶ್ರೀಮಂತಿಕೆ, ಒಡವೆ, ವಸ್ತು, ಬಂಗಾರ, ಸೌಂದರ್ಯಗಳು ಇದ್ದವರಿಗೆ ಇರಲಿ! ಅವು ಅವರಿಗೆ ಸುಖ ತರಲಿ; ಅದಿಲ್ಲದವರು ಆತ್ಮಾಭಿಮಾನದಿಂದ ಸತ್ಯ ನಿಷ್ಠೆ, ಪಾರದರ್ಶಕತೆಯ ಬದುಕಿನೆಡೆಗೆ ಹೆಜ್ಜೆ ಹಾಕಲಿ ಅದಕ್ಕಾಗಿ ಈ ಅಜ್ಞಾತನೊಬ್ಬನ ಆತ್ಮ ಚರಿತ್ರೆಯನ್ನ ಲೋಕಾಭಿರಾಮವಾಗಿ ದೀಪಸಾಲಿನಲಿ ನಿಮ್ಮ ಮುಂದೆ ಬೆಳಗಿಸಿದೆ ಏನಂತೀರಿ?



> “ ಸೋಷಿಯಲ್ ಮೀಡಿಯಾದಲ್ಲಿ ಮಕ್ಕಳನ್ನ ನಂಬಬೇಡಿ; ನಿಮ್ಮ ಆಸ್ತಿ, ನಿಮ್ಮ ದುಡ್ಡು, ನಿಮ್ಮ ಬಂಗಾರ, ನಿಮ್ಮ ಪೆನ್ಷನ್ನು, ನಿಮ್ಮ ಕೈಕಾಲು ನಡೆಯುವವರೆಗೂ ನಿಮ್ಮ ಬಳಿಯೇ ಇಟ್ಟುಕೊಂಡಿರಿ. ಯಾರಿಗೂ ಕೊಡಬೇಡಿ, ಕೊಟ್ಟರೆ ಕೆಟ್ಟಿರಿ! ಎಂಬರ್ಥದ ಹತ್ತಾರು ನೀತಿ ಪಾಠಗಳು ಚಾಲ್ತಿಯಲ್ಲಿವೆ. ಇಲ್ಲಿಗೆ ಬಂದು ಮುಟ್ಟಿದೆ. ನಮ್ಮ ಮನುಷ್ಯ ಸಂಬಂಧಗಳು.

ಶಾಸಕ ಜಿ.ಡಿ.ಹರೀಶ್‌ಗೌಡ ಅವರಿಗೆ ಅಭಿನಂದನೆ...



ಎಂಸಿಡಿಸಿಸಿ ಬ್ಯಾಂಕ್‌ನ ನಿರ್ದೇಶಕರಾಗಿ ಆಯ್ಕೆಯಾದ ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಎಪಿಎಂಸಿ ಮಾಜಿ ಸದಸ್ಯ ಕೋಟೆಹುಂಡಿ ಮಹದೇವು, ನಿಂಗರಾಜು, ಕೃಷ್ಣಮೂರ್ತಿ, ಪಾಪಣ್ಣ, ಕೆ.ಬಸಪ್ಪ, ಸುರೇಶ್, ಶಿವಕುಮಾರ್, ಮಹದೇವು, ಚಿಕ್ಕಣ್ಣ ನಾಯ್ಕ, ಭಾಸ್ಕರ್, ಪ್ರಭಾಕರ್ ಆತ್ಮೀಯವಾಗಿ ಅಭಿನಂದಿಸಿದರು.

ಭಾರತದ ಟಾಪ್ ಫುಡ್ ಬ್ರ್ಯಾಂಡ್ ಪಟ್ಟಿಯಲ್ಲಿ ನಂದಿನಿಗೆ 4ನೇ ಸ್ಥಾನ



ಬೆಂಗಳೂರು: ಭಾರತದಲ್ಲಿ ಆಹಾರ ಉತ್ಪನ್ನಗಳ ಪೈಕಿ ಸಾವಿರಾರು ಬ್ರ್ಯಾಂಡ್‌ಗಳಿವೆ. ವಿದೇಶಿ ಉತ್ಪನ್ನಗಳ ನಡುವೆಯೂ ಭಾರತೀಯ ಬ್ರ್ಯಾಂಡ್ ಜನಪ್ರಿಯತೆ, ಗುಣಮಟ್ಟದಲ್ಲೂ ಟಾಪ್ ಕ್ಲಾಸ್ ಎನಿಸಿಕೊಂಡಿದೆ. ಇದೀಗ ಯುಕೆ ಮೂಲದ ಬ್ರ್ಯಾಂಡ್ ಫಿನಾನ್ಸ್ ಕನ್ಸಲ್ಟೆನ್ಸಿ ಭಾರತದ ಟಾಪ್ ಫುಡ್ ಬ್ರ್ಯಾಂಡ್ ಯಾವುದು ಎಂದು ಸಮೀಕ್ಷೆ ನಡೆಸಿದೆ. ಕರ್ನಾಟಕದ ಹೆಮ್ಮೆಯ ಹಾಲು, ಹಾಲಿನ ಉತ್ಪನ್ನದ ಬ್ರ್ಯಾಂಡ್ ನಂದಿನಿ 4ನೇ ಸ್ಥಾನ ಪಡೆದುಕೊಂಡಿದೆ.

ಬ್ರ್ಯಾಂಡ್ ಫಿನಾನ್ಸ್ ನಡೆಸಿದ ಸರ್ವೆಯಲ್ಲಿ ಭಾರತದ ಟಾಪ್ ಫುಡ್ ಬ್ರ್ಯಾಂಡ್ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಅಮೂಲ್ ಡೈರಿ ಪಡೆದುಕೊಂಡಿದೆ. ಬರೋಬ್ಬರಿ 4.1 ಬಿಲಿಯನ್ ಅಮೆರಿಕನ್ ಡಾಲರ್ ಬ್ರ್ಯಾಂಡ್ ವ್ಯಾಲ್ಯೂನೊಂದಿಗೆ ಅಮೂಲ್ ಮೊದಲ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ 3ನೇ ಸ್ಥಾನದಲ್ಲಿದ್ದ ದೆಹಲಿ ಮೂಲದ ಮದರ್ ಡೈರಿ 1.15 ಬಿಲಿಯನ್ ಅಮೆರಿಕನ್ ಡಾಲರ್ ಮಾರುಕಟ್ಟೆ ಮೌಲ್ಯದೊಂದಿಗೆ 2ನೇ ಸ್ಥಾನಕ್ಕೆ ಬಡ್ತಿ ಪಡೆದಿದೆ. ವಾಡಿಯಾ ಗ್ರೂಪ್ ಒಡೆತನದಲ್ಲಿರುವ ಬ್ರಿಟಾನಿಯಾ 3ನೇ ಸ್ಥಾನದಲ್ಲಿದ್ದರೆ, ಕರ್ನಾಟಕದ ನಂದಿನಿ ನಾಲ್ಕು ಹಾಗೂ ಬರ್ಮನ್ ಕುಟುಂಬದ ಡಾಬುರ್ ಉತ್ಪನ್ನ ಭಾರತದ ಟಾಪ್ 5 ಫುಡ್ ಬ್ರ್ಯಾಂಡ್ ಆಗಿ ಗುರುತಿಸಿಕೊಂಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಲೋಕಾಯುಕ್ತ ಎಸ್ಪಿ ಉದೇಶ್ ಬದಲಾವಣೆಗೆ ಮನವಿ

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ ಸ್ನೇಹಮಯಿ ಕೃಷ್ಣ



ಸ್ನೇಹಮಯಿ ಕೃಷ್ಣ

ಬೆಂಗಳೂರು, ಜೂ.30(ಬಿಎಲ್‌ಯು) –ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಂಬಂಧ ತನಿಖೆ ನಡೆಸುತ್ತಿರುವ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ಅವರನ್ನು ಬದಲಾವಣೆ ಮಾಡುವಂತೆ ದೂರುದಾರ ಸ್ನೇಹಮಯಿ ಕೃಷ್ಣ, ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್ ಅವರು ಇಂದು ಪ್ರಕರಣದ ವಿಚಾರಣೆ ನಡೆಸಿದರು.

ಈ ವೇಳೆ ವಿಚಾರಣೆ ಆರಂಭದಲ್ಲೇ ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿದ ಸ್ನೇಹಮಯಿ ಕೃಷ್ಣ ಅವರು, ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ನಿಷ್ಪಕ್ಷಪಾತವಾಗಿ ತನಿಖೆ ನಡೆಸುತ್ತಿಲ್ಲ. ಆದ ಕಾರಣ ಉದೇಶ್ ಅವರನ್ನು ತನಿಖಾಧಿಕಾರಿ ಸ್ಥಾನದಿಂದ ಬದಲಾವಣೆ ಮಾಡಬೇಕೆಂದು ಕೋರಿದರು.

ಈಗಾಗಲೇ ಸಲ್ಲಿಸಿರುವ ವರದಿಯಲ್ಲಿ ಬಹಳಷ್ಟು ಸುಳ್ಳುಗಳು ದಾಖಲಾಗಿವೆ. ಕಾನೂನು ಪ್ರಕಾರ ಮುಂದುವರೆದ ತನಿಖೆಗೆ ಅವಕಾಶವಿಲ್ಲ. ಆದರೆ ಮುಂದುವರೆದ ತನಿಖೆಯ ನೆಪದಲ್ಲಿ ನ್ಯಾಯಾಲಯದ ವಿಚಾರಣೆಯನ್ನು ಲೋಕಾಯುಕ್ತರು ವಿಳಂಬ ಮಾಡುತ್ತಿದ್ದಾರೆ. ಆದ ಕಾರಣ ಲೋಕಾಯುಕ್ತರು ಈಗಾಗಲೇ ಸಲ್ಲಿಸಿರುವ ವರದಿ ರದ್ದು ಮಾಡಿ, ಆರೋಪಿಗಳ ವಿರುದ್ಧದ ಆರೋಪ ಸಾಬೀತು ಮಾಡಲು ನನಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು.

ಇಡೀ ಪ್ರಕರಣದಲ್ಲಿ ಹಲವು ರೀತಿಯ ಅಪರಾಧ ಕೃತ್ಯಗಳನ್ನು ಎಸಗಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಎಫ್‌ಐಆರ್ ದಾಖಲಿಸಬೇಕು ಎಂದು ಸ್ನೇಹಮಯಿ ಕೃಷ್ಣ ನ್ಯಾಯಾಧೀಶರನ್ನು ಕೋರಿದರು. ಈ ವೇಳೆ ನ್ಯಾಯಾಲಯದಲ್ಲಿ ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ಕೂಡ ಉಪಸ್ಥಿತರಿದ್ದರು.

ಸ್ನೇಹಮಯಿ ಕೃಷ್ಣ ಮಾಡಿರುವ ತಕರಾರಿಗೆ ಸಂಬಂಧಿಸಿದಂತೆ ನಿಮ್ಮ ಅಭಿಪ್ರಾಯ ತಿಳಿಸಿ ಎಂದು ಲೋಕಾಯುಕ್ತ ಪರ ವಕೀಲ ವೆಂಕಟೇಶ್ ಅರಭಟ್ಟಿ ಅವರಿಗೆ ಸೂಚಿಸಿದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು, ಮುಂದಿನ ವಿಚಾರಣೆಯನ್ನು ಜು.15ಕ್ಕೆ ಮುಂದೂಡಿದರು.

ರೋಗಿಗಳಿಗೆ ಗುಣಮಟ್ಟದ ಪರಿಣಾಮಕಾರಿ ಚಿಕಿತ್ಸೆ ನೀಡಿ

ಇಎಸ್‌ಐ ಆಸ್ಪತ್ರೆ ವೈದ್ಯರು, ಸಿಬ್ಬಂದಿಗೆ ಸಂಸದ ಯದುವೀರ್ ಒಡೆಯರ್ ಸೂಚನೆ



ಮೈಸೂರಿನ ಕೆಆರ್‌ಎಸ್ ರಸ್ತೆಯ ಇಎಸ್‌ಐ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ್ದ ಸಂಸದ ಯದುವೀರ್ ಅವರು ರೋಗಿಗಳಿಂದ ಸಮಸ್ಯೆ ಆಲಿಸಿದರು.

ಮೈಸೂರು, ಜೂ.30(ಬಿಎಲ್‌ಯು)– ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಬೇಕು ಎಂದು ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸೋಮವಾರ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಇಎಸ್‌ಐ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗೆ ಸೂಚನೆ ನೀಡಿದರು.

ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸಾ ಕೊಠಡಿ ಹಾಗೂ ವಾರ್ಡ್‌ಗಳನ್ನು ಪರಿಶೀಲನೆ ನಡೆಸಿ ಮಾತನಾಡಿದ ಅವರು, ವೈದ್ಯರು ಹಾಗೂ ಸಿಬ್ಬಂದಿ ರೋಗಿಗಳ ಜೊತೆ ತಾಳ್ಮೆಯಿಂದ ವರ್ತಿಸಬೇಕು ಎಂದು ಸಲಹೆ ನೀಡಿದರು. ಆಸ್ಪತ್ರೆಯಲ್ಲಿ ಎಲ್ಲಾ ಸಮಯದಲ್ಲೂ ಸ್ವಚ್ಛತೆ ಹಾಗೂ ನೈರ್ಮಲ್ಯವನ್ನು ಕಾಪಾಡಬೇಕು ಎಂದು ಹೇಳಿದ ಯದುವೀರ್ ಅವರು, ವೈದ್ಯಕೀಯ ಯಂತ್ರೋಪಕರಣಗಳು ಹಾಗೂ ತಜ್ಞ ವೈದ್ಯರ ಕೊರತೆ ನೀಗಿಸಲಾಗುವುದು. ಜೊತೆಗೆ ಖಾಲಿ ಇರುವ ವೈದ್ಯರು ಹಾಗೂ ಇತರೆ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಇದೇ ವೇಳೆ ಯದುವೀರ್ ಅವರು ರೋಗಿಗಳನ್ನು ಭೇಟಿ ಮಾಡಿ ಸಮಸ್ಯೆ ಆಲಿಸಿದರು.

ಇಂದು ಪಿರಿಯಾಪಟ್ಟಣ, ಕೊಳ್ಳೇಗಾಲ, ಮೈಸೂರಲ್ಲಿ ಯದುವೀರ್ ಪ್ರವಾಸ

ಮೈಸೂರು, ಜೂ.30(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನಾಳೆ (ಜುಲೈ 1) ಪಿರಿಯಾಪಟ್ಟಣ, ಚಾಮರಾಜನಗರ ಮತ್ತು ಮೈಸೂರಿನಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ನಾಳೆ ಬೆಳಿಗ್ಗೆ ಪಿರಿಯಾಪಟ್ಟಣ ತಾಲೂಕು ಹಿಟ್ನೆ ಬಾಗಿಲು ಗ್ರಾಮದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಗುದ್ದಲಿ ಪೂಜೆದಲ್ಲಿ ಭಾಗವಹಿಸುವರು. 10 ಗಂಟೆಗೆ ಪಿರಿಯಾಪಟ್ಟಣ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. 10.30 ಗಂಟೆಗೆ ದೇವರಾಜ ಅರಸ್ ಭವನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141 ಜಯಂತೋತ್ಸವದಲ್ಲಿ ಭಾಗಿಯಾಗುವರು. ಮಧ್ಯಾಹ್ನ 2.30 ಗಂಟೆಗೆ ಕೊಳ್ಳೇಗಾಲದಲ್ಲಿ ಆಯೋಜಿಸಿರುವ ತುರ್ತು ಪರಿಸ್ಥಿತಿ ಕರಾಳ ದಿನಾಚರಣೆಯಲ್ಲಿ ಪಾಲ್ಗೊಳ್ಳುವರು. ಅಲ್ಲಿನ ಬಂಗಾರಶೆಟ್ಟಿ ದೇವಸ್ಥಾನಕ್ಕೆ ಭೇಟಿ ನೀಡಿದ ನಂತರ, ಮೈಸೂರಿನ ಕುವೆಂಪುನಗರದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವದಲ್ಲಿ ಯದುವೀರ್ ಭಾಗವಹಿಸುವರು.

ಶುಲ್ಕ ವಿನಾಯಿತಿ ಅವಧಿ ವಿಸ್ತರಣೆ

ಮೈಸೂರು,ಜೂ.30–ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, 2024–25ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಶುಲ್ಕ ವಿನಾಯಿತಿ ಕಾರ್ಯಕ್ರಮದ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

30.06.2025ಕ್ಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವಂತೆ ಕೋರಿ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು ಮನವಿ ಮಾಡಿಕೊಂಡಿರುತ್ತಾರೆ ಹಾಗೂ ಮಾನ್ಯ ಹೈಕೋರ್ಟ್ ಮಧ್ಯಂತರ ಆದೇಶದಂತೆ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕೋರ್ಸುಗಳಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕೆ ಮಾತ್ರ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜುಲೈ 10 ರವರೆಗೆ ವಿಸ್ತರಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ https://ssp.postmatric.karnataka.gov.in ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ಇಲಾಖಾ ಸಹಾಯವಾಣಿ ಸಂಖ್ಯೆ: ಇ–ಮೇಲ್ 8050770005 ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ: bcwdhelpline@gmail.com ದೂ.ಸಂಖ್ಯೆ 1902 postmatrichelp@karnataka.gov.in ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

‘ಕರ್ನಾಟಕ ಚಿತ್ಪಾವನ ವೃತ್ತಾಂತ’ ಕೃತಿ ಬಿಡುಗಡೆ



ಮೈಸೂರಲ್ಲಿ ನಡೆದ ಕಾರ್ಯಕ್ರಮದಲ್ಲಿ ‘ಕರ್ನಾಟಕ ಚಿತ್ಪಾವನ ವೃತ್ತಾಂತ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಗ್ರಂಥದ ಸಂಪಾದಕ ದಿವಾಕರ ಡೋಂಗ್ರೆ ಮಾತನಾಡಿದರು.

ಮೈಸೂರು: ದೂರದ ಗೋವಾ, ಮಹಾರಾಷ್ಟ್ರದ ರತ್ನಗಿರಿ ಮತ್ತು ಗುಜರಾತಿನಿಂದ ಕರ್ನಾಟಕಕ್ಕೆ ವಲಸೆ ಬಂದು ಮರಾಠಿ ಮಾತನಾಡುವ ಚಿತ್ಪಾವನ ಬ್ರಾಹ್ಮಣರು ಕರ್ನಾಟಕದ ಜನರೊಡನೆ ಬೆರೆತು ಒಂದಾಗಿದ್ದಾರೆ ಎಂದು ಗ್ರಂಥದ ಸಂಪಾದಕ ದಿವಾಕರ ಡೋಂಗ್ರೆ ತಿಳಿಸಿದರು.

ನಗರದ ವಿದ್ಯೋದಯ ಶಿಕ್ಷಣ ಸಂಸ್ಥೆಯ ಕೃಷ್ಣಮೂರ್ತಿ ಪುರಂನ ವಿಶಾಲ ಸಭಾಗೃಹದಲ್ಲಿ ಏರ್ಪಡಿಸಿದ್ದ ‘ಕರ್ನಾಟಕ ಚಿತ್ಪಾವನ ವೃತ್ತಾಂತ’ ಗ್ರಂಥದ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಾರಂಭದಲ್ಲಿ ವೇದಬ್ರಹ್ಮ ಹರೀಶ್ ದೀಕ್ಷಿತ್ ಶುಭಾಶಂಸನೆಯನ್ನು ಕೋರಿದರು. ಗ್ರಂಥದ ಸಹ ಸಂಪಾದಕ ರಘುಪತಿ ತಾಮ್ಹನ್ ಕರ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಆನಂದ ಕೇಳ್ಕರ್ ಕಾರ್ಯಕ್ರಮ ಸಂಘಟಿಸಿದರು. ಮೈಸೂರು ಚಿತ್ಪಾವನ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಕಿರಣ್ ಮರಾಠೆ ವಂದಿಸಿದರು. ವೇದಿಕೆ ಮೇಲೆ ಪಾಕತಜ್ಞೆ ಲತಾ ಚಿಪ್ಳೂಣ್‌ಕರ್, ಶಿಶು ತಜ್ಞ ಡಾ.ವಾಮನ್ ರಾವ್ ಬಾಪಟ್, ಕನ್ನಡದಲ್ಲಿ ಗೀತಾಂಜಲಿ ಖ್ಯಾತಿಯ ಡಾ.ರಾಮನಾಥ್ ಭಟ್ ಗೋರೆ, ಭಾರ್ಗವ ವಾಣಿ ಸಂಪಾದಕ ಗೋಪಿನಾಥ್ ಬಾಪಟ್ ಮತ್ತು ನಿತ್ಯಾನಂದ್ ಭಿಡೆ ಇದ್ದರು.

ಮೈಸೂರಿನ ಸಂಘಟನೆಯ ಅಧ್ಯಕ್ಷ ದಿನೇಶ್ ಚಿಪ್ಳೂಣ್ಕರ್, ಅಖಿಲ ಕರ್ನಾಟಕ ಚಿತ್ಪಾವನ ಸಂಘದ ಮಾಜಿ ಅಧ್ಯಕ್ಷ ಬಾಲಚಂದ್ರ ಡೋಂಗ್ರೆ, ಸುಮಾ ದಾಮ್ಲೆ, ಸುಹಾಸ್ ಕರ್ವೆ ಹಾಜರಿದ್ದರು.

ಮಾದಿಗ ದಾಸರಿ ಸಮುದಾಯ ಕುರಿತಂತೆ ನಾಗಮೋಹನ್‌ದಾಸ್ ಹೇಳಿಕೆ ಗೊಂದಲ

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್ ಆಕ್ಷೇಪ



ಮೈಸೂರು, ಜೂ.30(ಬಿಎಲ್‌ಯು)– ರಾಯಚೂರಿನ ಮಾದಿಗ ದಾಸರಿ ಮತ್ತು ಇತರೆ ಕೆಲವು ಜಾತಿಗಳು ಎಕೆ, ಎಡಿ ಮತ್ತು ಎಎ ಗಳಲ್ಲಿ ಮುಂದುವರೆಯಲಿದೆ ಎಂದು ಪರಿಶಿಷ್ಟ ಜಾತಿ ಒಳ ಮೀಸಲಾತಿ ಏಕ ಸದಸ್ಯ ಆಯೋಗದ ಡಾ.ನಾಗಮೋಹನ ದಾಸ್ ನೀಡಿರುವ ಹೇಳಿಕೆ ಗೊಂದಲ ಮೂಡಿಸಿದೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ತಿಳಿಸಿದ್ದಾರೆ.

ಆಯೋಗದ ಸಮೀಕ್ಷೆಯ ಕೈಪಿಡಿ 2025ರ ಪರಿಶಿಷ್ಟ ಜಾತಿಯ 101 ಜಾತಿಗಳ ಪಟ್ಟಿಯಲ್ಲಿ ಮಾದಿಗ ದಾಸರಿ ಹೆಸರು ಇಲ್ಲ. ಈ ಜಾತಿಯನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಲು 2021–22ರಲ್ಲಿ 8.46 ಲಕ್ಷ ವೆಚ್ಚ ಮಾಡಿ ಪ್ರಾಧ್ಯಾಪಕ ಡಾ.ಎಲ್.ಶ್ರೀನಿವಾಸ್ ಅವರಿಂದ ಅಧ್ಯಯನ ನಡೆಸಲಾಗಿತ್ತು ಎಂದಿದ್ದಾರೆ. ಅಧ್ಯಯನದ ವರದಿ ನೀಡಲು ಜನವರಿ 14, 2022ರಂದು ಸರ್ಕಾರದಿಂದ ಆದೇಶವಾಗಿದೆ. ಇಂತಹ ಸಂದರ್ಭದಲ್ಲಿ ನಾಗಮೋಹನ್ ದಾಸ್ ನೀಡಿರುವ ಹೇಳಿಕೆ ಗೊಂದಲ ಮೂಡಿಸುತ್ತಿದೆ ಎಂದು ಭಾಸ್ಕರ್ ಹೇಳಿದ್ದಾರೆ. ಈ ವಿಚಾರದ ಬಗ್ಗೆ ಭಾಸ್ಕರ್ ಅವರು ನಾಗಮೋಹನ್ ದಾಸ್ ಅವರಿಗೆ ಪತ್ರ ಬರೆದು, ಆಕ್ಷೇಪ ಸಲ್ಲಿಸಿದ್ದಾರೆ.

ಬೀಳ್ಕೊಡುಗೆ




ಮೈಸೂರು ತಾಲೂಕಿನ ಹಳೆ ಕೆಸರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸತತ 14 ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸೋಮಶೇಖರ್ ಅವರನ್ನು ಅಭಿನಂದಿಸಿ, ಬೀಳ್ಕೊಡಲಾಯಿತು. ಈ ವೇಳೆ ಗ್ರಾಪಂ ಸದಸ್ಯೆ ಜ್ಯೋತಿ, ದೊಡ್ಡ ಯಜಮಾನ ನಾಗರಾಜು, ಮೈಮುಲ್ ವಿಸ್ತಾರಣಾಧಿಕಾರಿ ಡಾ.ಪರಮೇಶ್, ಮುಖಂಡರಾದ ಲೋಕೇಶ್, ಪ್ರದೀಪ್ ಇದ್ದರು.

ಇಂದು ಜೆಎಸ್‌ಎಸ್ ಫಾರ್ಮಸಿ ಕಾಲೇಜಲ್ಲಿ ಪದವೀಧರರ ದಿನಾಚರಣೆ

ಮೈಸೂರು, ಜೂ.30(ಜಿಎ)–ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪದವೀಧರರ ದಿನಾಚರಣೆ ಸಂವತ್ಸರ– 3.0 ಸಮಾರಂಭವನ್ನು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ಜು.1ರಂದು ಮಧ್ಯಾಹ್ನ 3ಕ್ಕೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಟಿ.ಎಂ.ಪ್ರಮೋದ್‌ಕುಮಾರ್ ಈ ವಿಷಯ ತಿಳಿಸಿ, ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸುವರು. ಇಂಡಿಯಾ ಸೈಟ್ ಆಪರೇಷನ್ಸ್ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಡಾ.ಗಿರೀಶ್ ಕಪೂರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಂಸ್ಥೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್ ಮಠ ಅಧ್ಯಕ್ಷತೆ ವಹಿಸಲಿದ್ದಾರೆ. ಉಪ ಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ 13 ಚಿನ್ನದ ಪದಕ ಪ್ರತಿಭಾವಂತರು ಸೇರಿ ಸುಮಾರು 300 ಮಂದಿ ವಿವಿಧ ಕೋರ್ಸ್‌ಗಳ ಪದವಿ ಪಡೆಯುತ್ತಿದ್ದಾರೆ. ಒಟ್ಟಾರೆ ವಿದ್ಯಾರ್ಥಿಗಳು, ಪೋಷಕರು ಸೇರಿದಂತೆ ಸುಮಾರು 430 ಮಂದಿ ಪಾಲ್ಗೊಳಲಿದ್ದಾರೆ.

ರಘುವೀರ್ ಪುರಾಣಿಕ್‌ರಿಗೆ ಶ್ರದ್ಧಾಂಜಲಿ...



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ನಿಧನರಾದ ರಘುವೀರ್ ಪುರಾಣಿಕ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಎಂ.ಆನಂದಶೆಟ್ಟಿ, ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಎಂ.ತಂತ್ರಿ, ಪುರಾಣಿಕ್ ಅವರ ಸಹೋದರ ಕೃಷ್ಣದಾಸ್ ಪುರಾಣಿಕ್, ಹೋಟೆಲು ಉದ್ಯಮಿಗಳಾದ ಪ್ರಕಾಶ್ ಶೆಟ್ಟಿ, ಮಹೇಶ್ ಪ್ರಸಾದ್, ಚಂದ್ರಶೇಖರ್ ಶೆಟ್ಟಿ, ಸುಮಿತ್ರಾ ತಂತ್ರಿ, ಹೇಮಂತ್‌ಕುಮಾರ್, ವಿಶ್ವಾನಂದ ಭಟ್, ಅರುಣ್, ರತೀಶ್, ಎ.ಸಿ.ರವಿ, ಚಂದ್ರು, ಓ.ಪ್ರತಾಪ್‌ಕುಮಾರ್, ಕೃಷ್ಣಮೂರ್ತಿ, ಸತೀಶ್ ಪಾಂಡುರಂಗ, ಮೈತ್ರಿ, ಭಾಸ್ಕರ್‌ಶೆಟ್ಟಿ, ರಾಮಮೋಹನ್, ರವೀಂದ್ರ ಘೋರೆ ಇನ್ನಿತರರಿದ್ದರು.

ಜು.12ರಂದು ಶಿಕ್ಷಕರಿಗೆ ಕ್ವಿಜ್ ಸ್ಪರ್ಧೆ

ಮೈಸೂರು, ಜೂ.30(ಜಿಎ)–ರೋಟರಿ ಮೈಸೂರು ವತಿಯಿಂದ ಜು.12ರಂದು ಮಧ್ಯಾಹ್ನ 2ಕ್ಕೆ ಎಂಡಿಎ ಎದುರಿನ ರೋಟರಿ ಸಭಾಂಗಣದಲ್ಲಿ ನಗರ ಮತ್ತು ಗ್ರಾಮಾಂತರ ಶಿಕ್ಷಕರಿಗಾಗಿ ಕ್ವಿಜ್ ಸ್ಪರ್ಧೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೋಟರಿ ಸದಸ್ಯ ಮುಬೀನ್ ಈ ವಿಷಯ ತಿಳಿಸಿ, ಜು.5 ನೋಂದಣಿ ಮಾಡಿಕೊಳ್ಳಲು ಕೊನೆ ದಿನವಾಗಿದೆ. ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಬೋಧಿಸುವವರು ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ನೋಂದಣಿ ಶುಲ್ಕ 500 ರೂ.,ಗಳಾಗಿವೆ. ವಿಜೇತರಿಗೆ ಮೊದಲ ಬಹುಮಾನವಾಗಿ 15 ಸಾವಿರ, ಎರಡನೇ ಬಹುಮಾನವಾಗಿ 10 ಹಾಗೂ ಮೂರನೇ ಬಹುಮಾನವಾಗಿ 8 ಸಾವಿರ ರೂ. ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 98860 49716 ನ್ನು ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ರೂಪಾ ವೆಂಕಟೇಶ್, ಕೆ.ವಿ.ಕೃಷ್ಣಾನಂದ್ ಉಪಸ್ಥಿತರಿದ್ದರು.

ನಾಳೆ ಇಷ್ಟಲಿಂಗ ಪೂಜಾ ಮಹೋತ್ಸವ

ಮೈಸೂರು, ಜೂ.30(ಜಿಎ)–ಟಿ.ನರಸೀಪುರ ತಾಲೂಕಿನ ತಲಕಾಡಿನ ಹಸ್ತಿಕೇರಿ ಮಠದಲ್ಲಿ ಜು.2ರಂದು ಬೆಳಗ್ಗೆ 8.30ಕ್ಕೆ ಹಿಮವದ್ ಕೇದಾರ ವೈರಾಗ್ಯ ಪೀಠದ ರಾವಲ್ ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರಿಂದ ಇಷ್ಟಲಿಂಗ ಪೂಜಾ ಮಹೋತ್ಸವ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಸ್ತಿಕೇರಿ ಮಠದ ಡಾ.ಸಿದ್ಧಮಲ್ಲಿಕಾರ್ಜುನ ಸ್ವಾಮೀಜಿ ಈ ವಿಷಯ ತಿಳಿಸಿ, ಕಳೆದ 24ರಿಂದ ಸಪ್ತಾಹ ಕಾರ್ಯಕ್ರಮ ನಡೆಯುತ್ತಿದ್ದು, ಜಗತ್ತಿನೆಲ್ಲೆಡೆ ಅಶಾಂತಿ, ಯುದ್ಧ, ಜಲಪ್ರಳಯಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಲೋಕ ಕಲ್ಯಾಣಾರ್ಥವಾಗಿ ಈ ಸಪ್ತಾಹ ಆಯೋಜಿಸಲಾಗಿದೆ. ಸಮಾರೋಪದಲ್ಲಿ ರಾವಲ್ ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಇಷ್ಟಲಿಂಗ ಪೂಜೆ ನೆರವೇರಿಸಿಕೊಡಲಿದ್ದಾರೆ. ಗೋಷ್ಠಿಯಲ್ಲಿ ರೇಣುಕಾಪ್ರಸಾದ್, ಜಗದಾಂಬೆ, ನಾಗರಾಜು, ಪ್ರದೀಪ್, ಪ್ರಸನ್ನಕುಮಾರ್ ಇದ್ದರು.

ಪ್ರಯಾಣಿಕರನ್ನು ಪಿಕ್‌ಅಪ್ ಮಾಡಲು ಅಡ್ಡಿ, ಹಲ್ಲೆ ಆರೋಪ

ನಾಲ್ವರ ವಿರುದ್ಧ ಪೊಲೀಸ್ ಆಯುಕ್ತರಿಗೆ ಆಟೋ ಚಾಲಕ ದೂರು

ಮೈಸೂರು, ಜೂ.30(ಆರ್‌ಕೆ)–ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್ ಬಳಿಯಿಂದ ಪ್ರಯಾಣಿಕರನ್ನು ಪಿಕ್‌ಅಪ್ ಮಾಡಲು ನಾಲ್ವರು ಅಡ್ಡಿಪಡಿಸಿ, ಹಲ್ಲೆ ಮಾಡಿದ್ದಾರೆ ಎಂದು ಸಾತಗಳ್ಳಿ ನಿವಾಸಿ ಆಟೋ ಚಾಲಕ ಜಮೀರ್ ಖಾನ್ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಇಂದು ಲಿಖಿತ ದೂರು ನೀಡಿದ್ದಾರೆ.

ಮುಜಮಿಲ್, ಸಾಹೇಬ್, ಬಿಲ್ಲಿ ಹಾಗೂ ಸಫೀ ಎಂಬುವರು ಸೆಂಟ್ ಫಿಲೋಮಿನಾ ಚರ್ಚ್ ಬಳಿ ಆಟೋ ಸ್ಟ್ಯಾಂಡ್‌ನಿಂದ ಪ್ರಯಾಣಿಕರನ್ನು ಕೂರಿಸಿಕೊಂಡು ಹೋಗುತ್ತಿದ್ದಾಗ ಜೂನ್ 28ರಂದು ಸಂಜೆ 4 ಗಂಟೆ ವೇಳೆಯಲ್ಲಿ ನನ್ನ ಆಟೋ ಅಡ್ಡಗಟ್ಟಿ ಪ್ರಯಾಣಿಕರನ್ನು ಇಳಿಸಿದರು ಎಂದು ಹೇಳಿರುವ ದೂರುದಾರರು, ಪ್ರಶ್ನಿಸಿದ ನನ್ನ ಕುತ್ತಿಗೆಪಟ್ಟಿ ಹಿಡಿದು ಅವಾಚ್ಯ ಶಬ್ಧಗಳಿಂದ ನಿಂದಿಸಿ ಹಲ್ಲೆಗೈದು, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಜಮೀರ್ ಖಾನ್ ದೂರಿನಲ್ಲಿ ಆರೋಪಿಸಿದ್ದಾರೆ.

ಜು.5ರಂದು ದಿಶಾ ಸಮಿತಿ ಸಭೆ

ಮೈಸೂರು,ಜೂ.30– ಜು.5ರಂದು ಬೆಳಗ್ಗೆ 10 ಗಂಟೆಗೆ ಉಕ್ಕು–ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ 2025–26ನೇ ಸಾಲಿನ ತ್ರೈಮಾಸಿಕದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ (ದಿಶಾ ಸಮಿತಿ) ಸಭೆಯನ್ನು ಜಿಪಂನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.



ಬಿವಿಬಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ

ಮೈಸೂರು ಭಾರತೀಯ ವಿದ್ಯಾಭವನದಲ್ಲಿ(ಬಿವಿಬಿ) ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಲಾಯಿತು. (ಎಡದಿಂದ) ಸಂಸ್ಕೃತ ಶಿಕ್ಷಕರಾದ ನಾಗರಾಜ್ ಹೆಗ್ಡೆ, ಶ್ರೀಕಾಂತ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಎಸ್.ಲೇಖಾ ನಾಯರ್, ಮೈಸೂರು ಬಿವಿಬಿ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಪದ್ಮಶ್ರೀ ಪುರಸ್ಕೃತೆ ಶ್ರೀಮತಿ ಜಯಲಕ್ಷ್ಮಿ ಸಂಪತ್‌ಕುಮಾರ್ (ಸುಧರ್ಮ ಸಂಸ್ಕೃತ ದಿನಪತ್ರಿಕೆ ಸಂಪಾದಕರು), ಮೈಸೂರು ಬಿವಿಬಿ ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಗೌರವ ಕೋಶಾಧಿಕಾರಿ ಡಾ.ಎ.ಟಿ.ಭಾಷ್ಯಂ, ಸಾಂಸ್ಕೃತಿಕ ಸಂಯೋಜಕರಾದ ಶ್ರೀಮತಿ ಶಾಮ ಎಂ.ವಿ, ಬಿವಿಬಿ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಡಾ.ಜಿ.ವಿ.ಗಾಯತ್ರಿ, ಗಂಗಾಧರ್ ಚಿತ್ರದಲ್ಲಿ ಇದ್ದಾರೆ.


ದೇಶ - ವಿದೇಶ

ಭಾರತ ಬಿಟ್ಟು ಸಾರ್ಕ್‌ಗೆ ಹೊಸ ಪ್ರಾದೇಶಿಕ ಒಕ್ಕೂಟ ರಚಿಸಲು ಚಿಂತನೆ



ಕುನ್ಮಿಂಗ್: ಚೀನಾದ ಕುನ್ಮಿಂಗ್‌ನಲ್ಲಿ ಇತ್ತೀಚೆಗೆ ನಡೆದ ಚೀನಾ–ದಕ್ಷಿಣ ಏಷ್ಯಾ ಎಕ್ಸ್‌ಪೋ ಮತ್ತು ಚೀನಾ–ದಕ್ಷಿಣ ಏಷ್ಯಾ ಸಹಕಾರ ಸಮ್ಮೇಳನದ ಸಂದರ್ಭದಲ್ಲಿ ಚೀನಾ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ನಡುವೆ ತ್ರಿಪಕ್ಷೀಯ ಸಭೆ ನಡೆದಿದೆ. ಸಭೆಯಲ್ಲಿ ಸೌತ್ ಏಷಿಯನ್ ಅಸೋಸಿಯೇಷನ್ ಫಾರ್ ರೀಜನಲ್ ಕೋಆಪರೇಷನ್ ಬದಲಿಗೆ ಹೊಸ ಒಕ್ಕೂಟ ಸ್ಥಾಪಿಸುವ ಬಗ್ಗೆ ಚರ್ಚೆ ನಡೆದಿದೆ. ಸಾರ್ಕ್, ದಕ್ಷಿಣ ಏಷ್ಯಾದ 8 ರಾಷ್ಟ್ರಗಳನ್ನು ಒಳಗೊಂಡಿರುವ ಪ್ರಾದೇಶಿಕ ಸಂಘಟನೆಯಾಗಿದೆ. ಭಾರತ, ಬಾಂಗ್ಲಾದೇಶ, ಭೂತಾನ್, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ, ಶ್ರೀಲಂಕಾ–ಅಫ್ಘಾನಿಸ್ತಾನವನ್ನು ಒಳಗೊಂಡಿದೆ. ಆದರೆ, ಭಾರತ ಮತ್ತು ಪಾಕಿಸ್ತಾನದ ನಡುವಿನ ಭೌಗೋಳಿಕ–ರಾಜಕೀಯ ಘರ್ಷಣೆಯಿಂದಾಗಿ, 2016ರಿಂದ ಸಾರ್ಕ್‌ನ ಶೃಂಗಸಭೆಗಳು ಸ್ಥಗಿತಗೊಂಡಿವೆ. ಪ್ರಾದೇಶಿಕ ಏಕೀಕರಣ ಮತ್ತು ಸಂಪರ್ಕಕ್ಕಾಗಿ ಹೊಸ ಸಂಘಟನೆಯ ಅಗತ್ಯವಿದೆ ಎಂದು ಪಾಕಿಸ್ತಾನ ಮತ್ತು ಚೀನಾ ಎರಡೂ ಸಭೆಯಲ್ಲಿ ಮನಮಾಕೆ ಮಾಡಿವೆ.

ಜು.3ರಿಂದ ಅಮರನಾಥ ಯಾತ್ರೆ ಆರಂಭ; ಜಮ್ಮುವಿನಲ್ಲಿ ಬಿಗಿ ಭದ್ರತೆ



ಜಮ್ಮು: ಜುಲೈ 3ರಿಂದ ಪ್ರಾರಂಭವಾಗಲಿರುವ ಅಮರನಾಥ ಯಾತ್ರೆ ಹಿನ್ನೆಲೆ ಜಮ್ಮುವಿನಲ್ಲಿ ಪೊಲೀಸ್ ಬಿಗಿ ಭದ್ರತೆ ಕೈಗೊಂಡಿದ್ದು, ತಪಾಸಣೆ ನಡೆಸಲು ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಯಾತ್ರಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಜಮ್ಮುವಿನಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಅರೆಸೇನಾ ಪಡೆಗಳು ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿದ್ದು, ಯಾತ್ರಾರ್ಥಿಗಳಿಗೆ ಸುಗಮ ಯಾತ್ರೆಯ ಅನುಭವ ಒದಗಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳು, ನಗರದ ಹೊರವಲಯ ಮತ್ತು ಮೂಲ ಶಿಬಿರವಾದ ಭಗವತಿ ನಗರಕ್ಕೆ ಹೋಗುವ ಮಾರ್ಗಗಳು ಸೇರಿದಂತೆ ಸೂಕ್ಷ್ಮ ವಲಯಗಳಲ್ಲಿ ಚೆಕ್‌ಪೋಸ್ಟ್‌ಗಳು ನಿರ್ಮಿಸಿದ್ದು, ದಿನದ 24 ಗಂಟೆಗಳ ಕಾಲ ನಿಗಾ ವಹಿಸಲಾಗುವುದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹೋಟೆಲ್‌ಗಳು, ಅತಿಥಿಗೃಹಗಳು ಮತ್ತು ವಸತಿಗೃಹಗಳಲ್ಲಿ ರ್‍ಯಾಂಡಮ್ (ಯಾದೃಚ್ಛಿಕ) ತಪಾಸಣೆ ನಡೆಸಲು ಸೂಚನೆಗಳನ್ನು ನೀಡಲಾಗಿದೆ. ಯಾತ್ರೆಗಾಗಿ 50 ಸಾವಿರ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆ ಮಾಡಿರುವುದಾಗಿ ಜಮ್ಮು–ಕಾಶ್ಮೀರ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.


ಟ್ರಂಪ್–ನೆತನ್ಯಾಹು ‘ಶಿರಚ್ಛೇದ’ಕ್ಕೆ ಫತ್ವಾ ಹೊರಡಿಸಿದ ಇರಾನ್ ಶಿಯಾ ಮೌಲ್ವಿ!



ಇರಾನ್: ಇಲ್ಲಿನ ಉನ್ನತ ಶಿಯಾ ಧರ್ಮಗುರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರುದ್ಧ 'ಫತ್ವಾ' ಅಥವಾ ಧಾರ್ಮಿಕ ಆದೇಶ ಹೊರಡಿಸಿದ್ದು ಇವರುಗಳು 'ಅಲ್ಲಾಹನ ಶತ್ರುಗಳು' ಎಂದು ಕರೆದಿದ್ದಾರೆ.

ಇಸ್ಲಾಮಿಕ್ ಗಣರಾಜ್ಯದ ನಾಯಕತ್ವಕ್ಕೆ ಬೆದರಿಕೆ ಹಾಕುವ ಅಮೆರಿಕ ಮತ್ತು ಇಸ್ರೇಲಿ ನಾಯಕರನ್ನು ಒಗ್ಗೂಡಿ ತೊಲಗಿಸಬೇಕು ಎಂದು ಗ್ರ್ಯಾಂಡ್ ಅಯತೊಲ್ಲಾ ನಾಸರ್ ಮಕರೆಮ್ ಶಿರಾಜಿ ವಿಶ್ವದಾದ್ಯಂತ ಮುಸ್ಲಿಮರಿಗೆ ಕರೆ ನೀಡಿದ್ದಾರೆ. ಮಕರೆಮ್ ಫತ್ವಾದಲ್ಲಿ, ನಾಯಕ ಅಥವಾ ಮಾರ್ಜಾವನ್ನು ಬೆದರಿಸುವ ಯಾವುದೇ ವ್ಯಕ್ತಿ ಅಥವಾ ಆಡಳಿತವನ್ನು 'ಯುದ್ಧನಾಯಕ' ಅಥವಾ 'ಮೊಹರೆಬ್' ಎಂದು ಪರಿಗಣಿಸಲಾಗುತ್ತದೆ ಎಂದು ಹೇಳಿದ್ದಾರೆ. ಮೊಹರೆಬ್ ಎಂದರೆ ಅಲ್ಲಾಹನ ವಿರುದ್ಧ ಯುದ್ಧ ಮಾಡುವ ವ್ಯಕ್ತಿ. ಇರಾನಿನ ಕಾನೂನಿನಡಿಯಲ್ಲಿ ಮೊಹರೆಬ್ ಎಂದು ಗುರುತಿಸಲ್ಪಟ್ಟ ಜನರು ಮರಣ ದಂಡನೆ, ಶಿಲುಬೆಗೇರಿಸುವಿಕೆ, ಅಂಗಚ್ಛೇದನ ಅಥವಾ ಗಡೀಪಾರಿಗೆ ಗುರಿಯಾಗುತ್ತಾರೆ. ಜೂನ್ 13ರಂದು ಪ್ರಾರಂಭವಾದ 12 ದಿನಗಳ ಯುದ್ಧಕ್ಕೆ ಕದನ ವಿರಾಮ ನಂತರ ಧಾರ್ಮಿಕ ಫತ್ವಾ ಹೊರಡಿಸಲಾಗಿದೆ.

ಶಿಮ್ಲಾದಲ್ಲಿ ಭಾರಿ ಮಳೆ: 5 ಅಂತಸ್ತಿನ ಕಟ್ಟಡ ಕುಸಿತ



ಶಿಮ್ಲಾ: ಹಿಮಾಚಲ ಪ್ರದೇಶದಲ್ಲಿ ಮುಂಗಾರು ಮಳೆ ಸಕ್ರಿಯವಾಗಿದ್ದು, ಹಲವಾರು ಪ್ರದೇಶಗಳಲ್ಲಿ ಭೂಕುಸಿತ ಸೇರಿದಂತೆ ಭಾರಿ ಹಾನಿ ಉಂಟಾಗಿದೆ.

ಶಿಮ್ಲಾದ ಉಪನಗರ ಭಟ್ಟಾಕುಫರ್‌ನಲ್ಲಿ ಮೇಘ ಸ್ಫೋಟದಿಂದಾಗಿ ಭಾರಿ ಮಳೆಯಾಗಿದ್ದು, ಐದು ಅಂತಸ್ತಿನ ಕಟ್ಟಡ ಕುಸಿದಿದೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿವೆ. ಆದರೆ ಯಾವುದೇ ಸಾವು–ನೋವು ಸಂಭವಿಸಿಲ್ಲ. ಅಪಾಯದ ಸೂಚನೆಯ ಹಿನ್ನೆಲೆಯಲ್ಲಿ ಅಲ್ಲಿಂದ ಜನರನ್ನು ಸ್ಥಳಾಂತರಿಸಲಾಗಿತ್ತು. ರಾಂಪುರದಲ್ಲಿ ಮೇಘಸ್ಫೋಟದಿಂದಾಗಿ ಹಲವಾರು ಹಸುಗಳು ಕೊಚ್ಚಿ ಹೋಗಿವೆ. ಹಲವಾರು ಕಡೆಗಳಲ್ಲಿ ಭೂಕುಸಿತದಿಂದಾಗಿ ರಸ್ತೆ ಸಂಚಾರಕ್ಕೆ ತೊಡಕಾಗಿದೆ. ನಿರಂತರ ಮಳೆ ಹಿನ್ನೆಲೆಯಲ್ಲಿ ಹಿಮಾಚಲದ 12 ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ.

ಗಡಿಯಲ್ಲಿ ಒಳನುಸುಳಲು ಯತ್ನ; ಪಾಕ್ ‘ಟೆರರಿಸ್ಟ್ ಗೈಡ್’ ಬಂಧನ

ಜಮ್ಮು: ಜಮ್ಮು –ಕಾಶ್ಮೀರದ ಗಡಿ ಜಿಲ್ಲೆಗಳಾದ ಪೂಂಚ್ ಮತ್ತು ರಜೌರಿ ಬಳಿಯ ಗಡಿ ನಿಯಂತ್ರಣ ರೇಖೆಯಲ್ಲಿ ಭಾರತದೊಳಗೆ ನುಸುಳಲು ಯತ್ನಿಸುತ್ತಿದ್ದ ಪಾಕಿಸ್ತಾನದ ಟೆರರಿಸ್ಟ್ ಗೈಡ್ ನನ್ನು (ಭಯೋತ್ಪಾದಕರ ಮಾರ್ಗದರ್ಶಿ) ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಾಲ್ವರು ಜೈಶ್–ಎ–ಮೊಹಮ್ಮದ್ ಉಗ್ರರೊಂದಿಗೆ ಭಾರಿ ಶಸಾಸ್ತ್ರಗಳೊಂದಿಗೆ ಭಾರತದೊಳಗೆ ನುಸುಳಲು ಪ್ರಯತ್ನಿಸುತ್ತಿದ್ದ ಮೊಹಮ್ಮದ್ ಆರಿಫ್ ಎಂಬಾತನನ್ನು ಭಾನುವಾರ ಸೇನಾಪಡೆಗಳು ಬಂಧಿಸಿವೆ. ಉಳಿದ ಭಯೋತ್ಪಾದಕರು ಗಾಯಗೊಂಡು, ಪಾಕಿಸ್ತಾನದ ಕಡೆಗೆ ಕಾಲ್ಕಿತ್ತಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರದ ದತೋಟೆ ಗ್ರಾಮದ ನಿವಾಸಿ ಆರಿಫ್ ಅವರನ್ನುಗಂಭೀರ್ ಪ್ರದೇಶದ ಫಾರ್ವರ್ಡ್ ಹಜುರಾ ಪೋಸ್ಟ್‌ನಿಂದ ಬಂಧಿಸಲಾಗಿದೆ. ಮುನ್ಸೂಚನೆ ಪಡೆಗಳು ಶಂಕಿತ ಭಯೋತ್ಪಾದಕರ ಅನುಮಾನಾಸ್ಪದ ಚಲನವಲನಗಳನ್ನು ಪತ್ತೆ ಹಚ್ಚಿದ ನಂತರ 20 ವರ್ಷದ ಆರಿಫ್‌ನನ್ನು ಸೆರೆ ಹಿಡಿಯಲಾಗಿದೆ. ಇತರ ನಾಲ್ವರು ಭಯೋತ್ಪಾದಕರು ಬಂಡೆಯಿಂದ ಜಿಗಿದು ಪಾಕಿಸ್ತಾನದ ಕಡೆಗೆ ಕಾಲ್ಕಿತ್ತಿದ್ದಾರೆ. ಪಾಕಿಸ್ತಾದ ಪೋಸ್ಟ್ ಹತ್ತಿರದಲ್ಲಿಯೇ ಇದುದ್ದರಿಂದ ಸೇನಾಪಡೆ ಉಗ್ರರ ವಿರುದ್ಧ ಗುಂಡಿನ ದಾಳಿ ನಡೆಸಲಿಲ್ಲ. ಅವರು ಗಾಯಗೊಂಡಿರುವುದನ್ನು ಡ್ರೋನ್ ದೃಶ್ಯಾವಳಿಗಳು ತೋರಿಸುವೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಓದುವ ಮನಸ್ಥಿತಿ ಮೂಡಿಸಿದ ದೀಪಾಭಾಸ್ತಿ

ದೀಪಾಭಾಸ್ತಿಗೆ ತವರಿನಲ್ಲಿ ಸಂದ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಂತರ್‌ಗೌಡ ಅಭಿಮತ

ಮಡಿಕೇರಿ,ಜೂ.30–ಕನ್ನಡ ಸಾಹಿತ್ಯದ ಅಂತಃಶಕ್ತಿಯನ್ನು ವಿಶ್ವದ ಉದ್ದಗಲಕ್ಕೂ ಪಸರಿಸಿದ ಹಿರಿಮೆಗೆ ಪಾತ್ರರಾಗಿರುವ, ಬೂಕರ್ ಪ್ರಶಸ್ತಿ ಪುರಸ್ಕೃತೆ ದೀಪಾಭಾಸ್ತಿ ಅವರಿಗೆ ಕೊಡಗು ಪತ್ರಕರ್ತರ ಸಂಘ ಆಯೋಜಿಸಿದ್ದ 'ಅಭಿವಂದನಾ ದೀಪಾ' ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳು ಅಭಿಮಾನ ಪೂರ್ವಕ ಗೌರವವನ್ನು ಅರ್ಪಿಸಿ ಸಂಭ್ರಮಿಸಿದವು.


'ಅಭಿವಂದನಾ ದೀಪಾ' ಕಾರ್ಯಕ್ರಮವನ್ನು ಶಾಸಕ ಡಾ.ಮಂತರ್‌ಗೌಡ ಉದ್ಘಾಟಿಸಿದರು.

ನಗರದ ರೆಡ್ ಬ್ರಿಕ್ಸ್ ಇನ್‌ನ ಸತ್ಕಾರ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ಶಾಸಕ ಡಾ.ಮಂತರ್‌ಗೌಡ ಉದ್ಘಾಟಿಸಿ ವಿಶ್ವದ ಅತ್ಯುನ್ನತ ಅನುವಾದ ಸಾಹಿತ್ಯ ಪ್ರಶಸ್ತಿ ಬೂಕರ್‌ನ್ನು ಪಡೆಯುವ ಮೂಲಕ, ದೀಪಾ ಅವರು ಇಡೀ ದೇಶದ ಯುವ ಸಮೂಹಕ್ಕೆ ಸಾಹಿತ್ಯಾಸಕ್ತಿ ಮೂಡಿಸಲು ಪ್ರೇರಣೆಯನ್ನು ನೀಡಿದ್ದಾರೆ. ಪ್ರಸ್ತುತ ಡಿಜಿಟಲ್ ಮಾಧ್ಯಮ, ಕಂಪ್ಯೂಟರ್‌ಗಳ ಆಳಕ್ಕೆ ಇಳಿದಿರುವ ನಮ್ಮಗಳ ಅರಿವನ್ನು ಅದರಿಂದ ಹೊರ ತಂದು ಪುಸ್ತಕಗಳನ್ನು ಓದುವ, ಮನಸ್ಥಿತಿಯನ್ನು ಮೂಡಿಸಿದ್ದಾರೆ ಎಂದು ಪ್ರಶಂಸಿಸಿದರು.

ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಮಾತನಾಡಿ, ದೀಪಾ ಭಾಸ್ತಿ ಅವರ ಸಾಧನೆ ಈ ನೆಲದ ಭಾಷೆ, ಶ್ರೀಮಂತ ಸಂಸ್ಕೃತಿಗಳಿಗೆ ಜಾಗತಿಕ ಮನ್ನಣೆ ದೊರಕಿದಂತಾಗಿದ್ದು, ಇದೊಂದು ಅಪೂರ್ವ ಸಂದರ್ಭವೇ ಆಗಿದೆ. ದೀಪಾ ಭಾಸ್ತಿ ಅವರು ತಮ್ಮ ಈ ಸಾಧನೆಯ ಮೂಲಕ ಯುವ ಲೇಖಕರಿಗೆ ತಾವು ಏನನ್ನಾದರೂ ಸಾಧಿಸಬಹುದೆನ್ನುವ ನಂಬಿಕೆ ಮತ್ತು ವಿಶ್ವಾಸಗಳನ್ನು ಮೂಡಿಸಿದ್ದಾರೆಂದರು. ನಗರಸಭಾ ಅಧ್ಯಕ್ಷೆ ಕಲಾವತಿ, ಕೊಡವ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಅರೆಭಾಷಾ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ ಮಾತನಾಡಿ ದೀಪರವರ ಸಾಧನೆಯನ್ನು ಕೊಂಡಾಡಿದರು.

ಪೌರ ಸನ್ಮಾನ ಸ್ವೀಕರಿಸಿದ ದೀಪಾ ಭಾಸ್ತಿ ಮಾತನಾಡಿ, ಓದುಗರು ಅನುವಾದಕರ ಬಗ್ಗೆ ಅಸಡ್ಡೆಯನ್ನು ತಾಳಿರುವುದನ್ನು ಗಮನಿಸಿದ್ದೇನೆ. ಅನುವಾದವೆಂದರೆ ಒಂದು ಕೃತಿಯನ್ನು ಮತ್ತೊಂದು ಭಾಷೆಗೆ ತರ್ಜುಮೆ ಮಾಡುವುದಷ್ಟೆ, ಅದೊಂದು ದೊಡ್ಡ ವಿಷಯವಲ್ಲ ಎನ್ನುವ ಭಾವನೆಗಳಿವೆ. ಇಂತಹ ಮನಸ್ಥಿತಿಯಿಂದ ಹೊರ ಬರಬೇಕಾಗಿದೆ. ಅನುವಾದವೆನ್ನುವುದು ಒಂದು ಪದವನ್ನು ಮತ್ತು ಭಾಷೆಯ ಪದಕ್ಕೆ ತರ್ಜುಮೆ ಮಾಡುವುದಲ್ಲ. ಪದ ಪದಗಳ ತರ್ಜುಮೆ ಎಂದಿಗೂ ಒಳ್ಳೆಯ ಅನುವಾದವಾಗಲಾರದೆಂದು ಸ್ಪಷ್ಟಪಡಿಸಿದರು. ಪ್ರಸ್ತುತ ಕಂಡು ಬರುವ ಗೂಗಲ್ ಅನುವಾದಗಳು ಎಂದಿಗೂ ಉತ್ತಮ ಅನುವಾದದ ಕ್ರಿಯೆ ಅಲ್ಲ ಎಂದು ಅವರು ಅಭಿಪ್ರಾಯಪಟ್ಟರು.

> ಅನುವಾದಕರ ಬಗ್ಗೆ ಅಸಡ್ಡೆ ಭಾವ ಸಲ್ಲದು; ಅನುವಾದವೆಂದರೆ ಒಂದು ಪದವನ್ನು ಮತ್ತೊಂದು ಭಾಷೆಯ ಪದಕ್ಕೆ ತರ್ಜುಮೆ ಮಾಡುವುದಲ್ಲ. ಪದ ಪದಗಳ ತರ್ಜುಮೆ ಎಂದಿಗೂ ಒಳ್ಳೆಯ ಅನುವಾದವಾಗಲಾರದು. ಪ್ರಸ್ತುತ ಕಂಡು ಬರುವ ಗೂಗಲ್ ಅನುವಾದಗಳು ಎಂದಿಗೂ ಉತ್ತಮ ಅನುವಾದ ಕ್ರಿಯೆ ಅಲ್ಲ.
>
> – ದೀಪಾ ಭಾಸ್ತಿ

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಪ್ರಾಸ್ತಾವಿಕವಾಗಿ ಮಾತನಾಡಿದರು.

51 ಸಂಘ ಸಂಸ್ಥೆಗಳಿಂದ ಸನ್ಮಾನ: ಕೊಡಗು ಪತ್ರಕರ್ತರ ಸಂಘದ ವತಿಯಿಂದ ಆಯೋಜಿತ 'ಅಭಿವಂದನಾ ದೀಪಾ' ಪೌರ ಸನ್ಮಾನ ಕಾರ್ಯಕ್ರಮದಲ್ಲಿ ಇದೇ ಮೊದಲ ಬಾರಿಗೆ 51 ಸಂಘ ಸಂಸ್ಥೆಗಳ ಪ್ರಮುಖರು ಪಾಲ್ಗೊಂಡು ಬೂಕರ್ ಪ್ರಶಸ್ತಿ ವಿಜೇತೆ ದೀಪಾ ಭಾಸ್ತಿ ಅವರನ್ನು ಗೌರವಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ.

ಶಿಕ್ಷಕರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಿ


ಮೂಕಾಂಬಿಕಾ ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಎಸ್.ಎಸ್.ಗೋಪಾಲ ಅವರನ್ನು ಅಭಿನಂದಿಸಲಾಯಿತು.

ಕುಶಾಲನಗರ,ಜೂ.30– ಪವಿತ್ರವಾದ ವೃತ್ತಿಯಲ್ಲಿರುವ ಶಿಕ್ಷಕರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳುವಂತೆ ಜಿಲ್ಲಾ ಜಾನಪದ ಪರಿಷತ್ತು ಅಧ್ಯಕ್ಷ ಬಿ.ಜಿ.ಅನಂತ ಶಯನ ತಿಳಿಸಿದ್ದಾರೆ.

ಸಮೀಪದ ಗುಮ್ಮನಕೊಲ್ಲಿ ಮೂಕಾಂಬಿಕಾ ಅನುದಾನಿತ ಪ್ರೌಢಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಎಸ್.ಎಸ್.ಗೋಪಾಲ ರವರನ್ನು ಅಭಿನಂದಿಸಿ ಮಾತನಾಡಿದ ಅವರು, ಶಿಕ್ಷಕ ವೃತ್ತಿ ಪವಿತ್ರವಾದ ವೃತ್ತಿಯಾಗಿದ್ದು, ಪ್ರತಿಯೊಬ್ಬರೂ ಗೌರವ ಸಲ್ಲಿಸಬೇಕು. ಗೋಪಾಲ್ ಅವರು ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಭವಿಷ್ಯವನ್ನು ರೂಪಿಸಿದ್ದಾರೆ. ವೃತ್ತಿಯಿಂದ ನಿವೃತ್ತರಾಗಿದ್ದರೂ ಪ್ರವೃತ್ತಿಯಿಂದ ನಿವೃತ್ತರಾಗುವುದಿಲ್ಲ ಎಂದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಗೋಪಾಲ್ ಸುದೀರ್ಘ ಸೇವೆ ಸಲ್ಲಿಸುವ ಮುಖಾಂತರ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದಾರೆ. ಅವರ ಬದುಕಿನ ಅರ್ಧದಷ್ಟು ವಯಸ್ಸನ್ನು ಶಾಲೆಯಲ್ಲಿ ಕಳೆದಿದ್ದಾರೆ ಎಂದರು.

ವಿನಾಯಕ ವಿದ್ಯಾಸಂಸ್ಥೆ ಅಧ್ಯಕ್ಷೆ ಕೆ.ಪಿ. ಚಂದ್ರಕಲಾ ಅಧ್ಯಕ್ಷತೆ ವಹಿಸಿದ್ದರು. ಕೂಡಿಗೆ ಡಯಟ್ ಉಪನ್ಯಾಸಕಿ ಬಿ.ಎನ್.ಪುಷ್ಪಾ, ಮೂಕಾಂಬಿಕಾ ಪಿಯು ಕಾಲೇಜು ಪ್ರಾಂಶುಪಾಲ ಪ್ರಸನ್ನ, ಶಿಕ್ಷಕಿ ದೇವಕಿಗೋಪಾಲ್, ನಿವೃತ್ತ ಸಿಬ್ಬಂದಿ ಪಾರ್ವತಿ, ಪ್ರಭಾರ ಮುಖ್ಯ ಶಿಕ್ಷಕ ಸುರೇಶ್, ಶಿಕ್ಷಕರಾದ ಪ್ರತಾಪ್ ಉಪಸ್ಥಿತರಿದ್ದರು.

ಕೆಂಬಟ್ಟಿ ಸಮುದಾಯ ಆದಿ ಕರ್ನಾಟಕ ಜಾತಿ ಪಟ್ಟಿಯಲ್ಲಿ ಸೇರಿಸಲು ಆಗ್ರಹ

ಮಡಿಕೇರಿ: ಕೊಡಗಿನ ಮೂಲ ನಿವಾಸಿ 'ಕೆಂಬಟ್ಟಿ' ಸಮುದಾಯವನ್ನು, ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿ ಪಟ್ಟಿಯಲ್ಲಿ ಸೇರಿಸುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕೊಡವ ಭಾಷಿಕ ಸಮುದಾಯಗಳ ಕೂಟದ ನಿಯೋಗ ಶಾಸಕ ಎ.ಎಸ್.ಪೊನ್ನಣ್ಣರಿಗೆ ಮನವಿ ಸಲ್ಲಿಸಿತು.

ಕೂಟದ ಅಧ್ಯಕ್ಷ ಡಾ.ಮೇಚಿರ ಸುಭಾಷ್ ನಾಣಯ್ಯ ನೇತೃತ್ವದಲ್ಲಿ ಶಾಸಕರನ್ನು ಭೇಟಿಯಾದ ಕೆಂಬಟ್ಟಿ ಸಮುದಾಯದ ಪ್ರಮುಖರು ರಾಜ್ಯದ ಬೇರೆಲ್ಲೂ ಕಾಣದ ಕೊಡಗಿನ ಪ್ರಾಚೀನ 'ಕೆಂಬಟ್ಟಿ ಸಮುದಾಯವನ್ನು, ಪರಿಶಿಷ್ಟ ಜಾತಿಯನ್ನು ಆದಿಕರ್ನಾಟಕ ಜಾತಿ ಪಟ್ಟಿಯಲ್ಲಿ ನಮೂದಿಸಬೇಕು ಎಂದು ಕೋರಿದರು.

ಕೆಂಬಟ್ಟಿ ಸಮುದಾಯ ಅನಾದಿ ಕಾಲದಿಂದಲೂ ಕೊಡಗಿನಲ್ಲಿ ಜೀವಿಸಿಕೊಂಡು, ಕೊಡವ ಭಾಷಾ ಜನಪದ ಪದ್ಧತಿ ಪರಂಪರೆ ಮೈಗೂಡಿಸಿಕೊಂಡು ಬಂದಿರುವ ಮೂಲ ನಿವಾಸಿಗಳಾಗಿದ್ದಾರೆ. ಇವರನ್ನು ಪರಿಶಿಷ್ಟ ಜಾತಿ ಆದಿಕರ್ನಾಟಕ ಜಾತಿ ಪಟ್ಟಿಯಲ್ಲಿ ಸೇರಿಸಬೇಕೆನ್ನುವುದು ಹಲವು ದಿನಗಳ ಬೇಡಿಕೆಯಾಗಿದೆ. ಅಲ್ಲದೆ ಈ ಕುರಿತು ಜಿಲ್ಲಾಡಳಿತದ ಮೂಲಕ ಸರ್ಕಾರದ ಗಮನವನ್ನು ಕೂಡ ಸೆಳೆಯಲಾಗಿದೆ ಎಂದು ಡಾ.ಮೇಚಿರ ಸುಭಾಷ್ ನಾಣಯ್ಯ ವಿವರಿಸಿದರು.



ಇಂದು ಮಡಿಕೇರಿಯಲ್ಲಿ ಪತ್ರಿಕಾ ದಿನಾಚರಣೆ

ಮಡಿಕೇರಿ: ಪತ್ರಕರ್ತರ ಸಂಘದ ವತಿಯಿಂದ ಜುಲೈ 1ರಂದು ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾ ದಿನಾಚರಣೆ ಮತ್ತು ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ ಆಯೋಜಿಸಲಾಗಿದೆ. ಪತ್ರಿಕಾಭವನ ಟ್ರಸ್ಟ್ ಸಭಾಂಗಣದಲ್ಲಿ ಜುಲೈ 1ರ ಬೆಳಗ್ಗೆ 10.30 ಗಂಟೆಗೆ ಸಂಘದ ಅಧ್ಯಕ್ಷ ಅನಿಲ್. ಹೆಚ್.ಟಿ. ಅಧ್ಯಕ್ಷತೆಯಲ್ಲಿ ಪತ್ರಿಕಾ ದಿನಾಚರಣೆ ಸಮಾರಂಭವನ್ನು ಸಮಾಜ ಸೇವಕ ತೇಲಪಂಡ ಶಿವಕುಮಾರ್ ನಾಣಯ್ಯ ಉದ್ಘಾಟಿಸಲಿದ್ದಾರೆ. ಇದೇ ಕಾರ್ಯಕ್ರಮದಲ್ಲಿ ಕೊಡಗು ಪತ್ರಕರ್ತರ ಸಂಘದ ವಾರ್ಷಿಕ ದತ್ತಿ ನಿಧಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ.

ಜೆಡಿಎಸ್ ಸಂಘಟಿಸಲು ಸದಸ್ಯತ್ವ ನೋಂದಣಿ ಅಭಿಯಾನ

ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ


ಅಭಿಯಾನ ಕಾರ್ಯಕ್ರಮದಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡುತ್ತಿರುವುದು.

ಮಳವಳ್ಳಿ, ಜೂ.30– ಜೆಡಿಎಸ್ ಅನ್ನು ತಳಮಟ್ಟದಿಂದಲೇ ಸಂಘಟಿಸಲು ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಡಿಜಿಟಲ್ ಸದಸ್ಯತ್ವ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಶಾಂತಿ ಸಮುದಾಯ ಭವನದಲ್ಲಿ ನಡೆದ ಜೆಡಿಎಸ್ ಡಿಜಿಟಲ್ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆ ಚುನಾವಣೆಗೆ ಇಂದಿನಿಂದಲೇ ಕಾರ್ಯಕರ್ತರು ಪಕ್ಷ ಸಂಘಟನೆಗೆ ಮುಂದಾಗಬೇಕು. ಜೆಡಿಎಸ್ ಕಾರ್ಯಕರ್ತರ ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತೇನೆ. ಯಾವುದೇ ಹೋರಾಟಕ್ಕೂ ಸಿದ್ಧವಿದ್ದು, ಮಂಡ್ಯ ಜಿಲ್ಲೆ ಜನರ ಋಣ ತೀರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಜಿಲ್ಲಾ, ತಾಪಂ ಚುನಾವಣೆವರೆಗೂ ಗೃಹಲಕ್ಷ್ಮಿ ಹಣ ಹಾಕಲ್ಲ. ಯಾವುದಾದರೂ ಉಪ, ಸಂಸತ್ ಚುನಾವಣೆ ಹಾಗೂ ಜಿಲ್ಲಾ ಮತ್ತು ತಾಪಂ ಚುನಾವಣೆ ಬರೋವರೆಗೂ ಹಣ ಹಾಕಲ್ಲ ಎಂದು ಆರೋಪಿಸಿದರು.

ಸರ್ಕಾರ ಗ್ಯಾರಂಟಿಗಳನ್ನು ಜನಸಾಮಾನ್ಯರಿಗೆ ಸರಿಯಾಗಿ ತಲುಪಿಸುತ್ತಿಲ್ಲ. ಪ್ರತಿ ತಿಂಗಳು ಗ್ಯಾರಂಟಿ ಹಣ ಕೊಡ್ತೀವಿ ಅಂದು ಪ್ರಣಾಳಿಕೆಯಲ್ಲಿ ಮಾತು ಕೊಟ್ಟಿದ್ದರು. ಆದರೆ ಮಾತು ತಪ್ಪಿದ್ದಾರೆ. 3 ಉಪ ಚುನಾವಣೆ ಸಂದರ್ಭ 3 ಕ್ಷೇತ್ರ ಗಳಿಗೆ ಮಾತ್ರ ಒಂದೇ ಸಲ 4 ತಿಂಗಳು ಹಣ ಜಮೆ ಆಯ್ತು. ಮುಂದೆ ತಾಪಂ ಹಾಗೂ ಜಿಪಂ ಚುನಾವಣೆ ಬರೋವರೆಗೂ ಜನ ಕಾಯಬೇಕು ಎಂದು ಕಿಡಿಕಾರಿದರು.

ರಾಮನಗರದ ಪೆನ್ನು, ಪೇಪರ್ ನಾಯಕರು ಜಿಲ್ಲೆಯಲ್ಲಿ ಫಲಾನುಭವಿಗಳ ಸಭೆ ಮಾಡಿದರು. ಅಲ್ಲಿ ಕ್ಷೇತ್ರದ ಹೆಣ್ಣು ಮಕ್ಕಳಿಗೆ ನನ್ನ ತಮ್ಮನಿಗೆ ಮತ ಹಾಕಿಲ್ಲ ಅಂದರೆ ನಮ್ಮೆಲ್ಲಾ ಕಾರ್ಯಕ್ರಮಗಳನ್ನು ನಿಲ್ಲುಸುತ್ತೇವೆ ಎಂದು ಧಮ್ಕಿ ಹಾಕ್ತಾರೆ. ಈಗ ಸೋತು ಮನೆಯಲ್ಲಿ ಕೂತಿದ್ದಾರೆ ಎಂದು ಡಿಸಿಎಂ ವಿರುದ್ಧ ವಾಗ್ದಾಳಿ ನಡೆಸಿದರು.

ಮಳವಳ್ಳಿ ಕ್ಷೇತ್ರದಲ್ಲಿ ಎಲ್ಲಾ ಸಮುದಾಯದವರಿದ್ದಾರೆ. ಪ.ಜಾತಿ, ವರ್ಗದವರು ಹೆಚ್ಚು ಇರುವಂತಹ ಕ್ಷೇತ್ರ. ಮುಂದಿನ ಚುನಾವಣೆಯಲ್ಲಿ ಅನ್ನದಾನಿ ಅವರನ್ನು ಶಾಸಕರಾಗಿ ಮಾಡುವುದಕ್ಕೆ ನಮ್ಮ ಸಹಕಾರ ಇರಲಿದೆ ಎಂದರು.

ಜೆಡಿಎಸ್ ನಾಯಕರು ಸೋತಿರಬಹುದು ಸತ್ತಿಲ್ಲ. ಅನ್ನದಾನಿಯವರು ಸೋತಿರಬಹುದು. ಆದರೆ ಮನೆ ಸೇರಿಕೊಂಡಿಲ್ಲ. ಮುಂದಿನ ಚುನಾವಣೆಯಲ್ಲಿ ತೋರಿಸುತ್ತೇವೆ ಎಂದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ. ಪೊಲೀಸ್ ಇಲಾಖೆಯಿಂದ ಜೆಡಿಎಸ್ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ದೌರ್ಜನ್ಯ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು

ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭ ಮಂಡ್ಯಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಕೊಡುಗೆ ಶೂನ್ಯ ಕೇವಲ ಕಮಿಷನ್‌ಗಾಗಿ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಜೆಡಿಎಸ್ ಕಾರ್ಯಕರ್ತರು ನಿಖಿಲ್ ಕುಮಾರಸ್ವಾಮಿ ಅವರನ್ನು ಪಟ್ಟಣದ ದಂಡಿನ ಮಾರಮ್ಮ ದೇವಸ್ಥಾನದಿಂದ ಶಾಂತಿ ಸಮುದಾಯದವರೆಗೂ ಬೈಕ್ ರ್ಯಾಲಿ ಮೂಲಕ ಕರೆತಂದರು. ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಯುವ ಘಟಕದ ಜಿಲ್ಲಾಧ್ಯಕ್ಷ ರವಿ, ಹಿಂದುಳಿದ ವರ್ಗಗಳ ರಾಜ್ಯ ಘಟಕದ ಅಧ್ಯಕ್ಷ ಜಯರಾಮ್, ಜೆಡಿಎಸ್ ತಾಲೂಕು ಘಟ ಕದ ಅಧ್ಯಕ್ಷ ವಿಶ್ವನಾಥ್, ಪುರಸಭೆ ಉಪಾಧ್ಯಕ್ಷ ಬಸವರಾಜು, ನಂದಕುಮಾರ್, ಪ್ರಶಾಂತ್ ಸಿದ್ದರಾಜು ನಾಗೇಶ್ ಸೇರಿದಂತೆ ಇತರರಿದ್ದರು.

ಸಾಧಕರಿಗೆ ಬಿಜಿಎಸ್ ಕೆಂಪೇಗೌಡ ಪ್ರಶಸ್ತಿ ಪ್ರದಾನ


ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವವನ್ನು ಗಣ್ಯರು ಉದ್ಘಾಟಿಸುತ್ತಿರುವುದು.

ಕೆ.ಆರ್.ಪೇಟೆ, ಜೂ.30– ತಾಲೂಕಿನ ಹೇಮಗಿರಿ ಶ್ರೀ ಕ್ಷೇತ್ರದಲ್ಲಿರುವ ಬಿಜಿಎಸ್ ಪಬ್ಲಿಕ್ ಶಾಲೆಯಲ್ಲಿ ನಾಡಪ್ರಭು ಕೆಂಪೇಗೌಡರ 516ನೇ ಜಯಂತ್ಯುತ್ಸವದ ಅಂಗವಾಗಿ ಹಲವು ಸಾಧಕರಿಗೆ 2025ನೇ ಸಾಲಿನ ಬಿಜಿಎಸ್ ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಚಿತ್ರನಟ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಜಯಂತಿಯ ಅಂಗವಾಗಿ ಹಲವು ಸಾಧಕರಿಗೆ ಕೆಂಪೇಗೌಡರ ಹೆಸರಿನಲ್ಲಿ ತಾಲೂಕು ಮಟ್ಟದ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಶ್ಲಾಘನೀಯವಾದುದಾಗಿದೆ. ಹೇಮಗಿರಿ ಶಾಖಾ ಮಠದ ಹಲವು ಉತ್ತಮ ಕಾರ್ಯಕ್ರಮಗಳು ನಡೆಯುತ್ತಾ ಬರುತ್ತಿವೆ ಇದಕ್ಕೆ ಆದಿಚುಂಚನಗಿರಿ ಹೇಮಗಿರಿ ಶಾಖಾ ಮಠದ ಕಾರ್ಯದ ಶ್ರೀಗಳಾದ ಡಾ.ಜೆ.ಎನ್.ರಾಮಕೃಷ್ಣೇಗೌಡರ ಪರಿಶ್ರಮ ಕಾರಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ ವಹಿಸಿಕೊಂಡಿದ್ದರು. ಬಳಿಕ ಮಾತನಾಡಿದ ಅವರು ಕೆಂಪೇಗೌಡರು ತಮ್ಮ ಅಧಿಕಾರದ ಅವಧಿಯಲ್ಲಿ ಬೆಂಗಳೂರು ಪ್ರಾಂತ್ಯವನ್ನು ಸುಭದ್ರವಾಗಿ ಕಟ್ಟಿದ್ದರ ಪರಿಣಾಮ ಇಂದು ವಿಶ್ವ ಮಟ್ಟದಲ್ಲಿ ಬೆಂಗಳೂರು ಗುರುತಿಸಿಕೊಳ್ಳುವಂತಾಗಿದೆ. ಇಂದು ಇಡೀ ಪ್ರಪಂಚದ ಎಲ್ಲಾ ದೇಶಗಳ ಜನತೆಯು ಬೆಂಗಳೂರಿನಲ್ಲಿ ವಾಸವಿರುವುದಕ್ಕೆ ಕೆಂಪೇಗೌಡರ ದೂರದೃಷ್ಟಿಯ ಆಡಳಿತವೇ ಪ್ರಮುಖ ಕಾರಣವಾಗಿದೆ ಎಂದು ಕೆಂಚಪ್ಪಗೌಡ ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಟಿ. ಮಂಜು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಹೇಮಗಿರಿ ಶಾಖಾ ಮಠದ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ, ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಆರ್‌ಟಿಓ ಮಲ್ಲಿಕಾರ್ಜುನ್, ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಬಾಲು, ಮಾಜಿ ಶಾಸಕ ಬಿ.ಪ್ರಕಾಶ್, ಮಾಜಿ ಶಾಸಕ ಎಂ.ಪುಟ್ಟಸ್ವಾಮೀಗೌಡರ ಪತ್ನಿ ವಿಜಯಲಕ್ಷ್ಮಿ, ನಿವೃತ್ತ ಉಪನ್ಯಾಸಕ ಎಂ.ಕೆ.ಹರಿಚರಣ ತಿಲಕ್, ಮುಖಂಡರಾದ ಹಾದನೂರು ಪ್ರಕಾಶ್, ಶಾಸಕರ ಆಪ್ತ ಸಹಾಯಕ ಧ್ರುವ, ಪ್ರಾಂಶುಪಾಲ ಆನಂದ್ ಮತ್ತಿತರರಿದ್ದರು.

ದೊಡ್ಡಬ್ಯಾಡರಹಳ್ಳಿಯಲ್ಲಿ ಕೆಂಪೇಗೌಡರ ಜಯಂತಿ


ದೊಡ್ಡಬ್ಯಾಡರಹಳ್ಳಿ ಗ್ರಾಪಂನಲ್ಲಿ ಕೆಂಪೇಗೌಡರ ಜಯಂತಿ ಆಚರಿಸಲಾಯಿತು.

ಪಾಂಡವಪುರ, ಜೂ.30– ತಾಲೂಕಿನ ದೊಡ್ಡಬ್ಯಾಡರಹಳ್ಳಿ ಗ್ರಾಪಂ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತೋತ್ಸವವನ್ನು ಸೋಮವಾರ ವಿಜೃಂಭಣೆ ಯಿಂದ ಆಚರಿಸಲಾಯಿತು.

ಗ್ರಾಪಂ ಆವರಣದಲ್ಲಿ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಹಾಗೂ ಗ್ರಾಮಸ್ಥರು ಜತೆಗೂಡಿ ನಾಡಪ್ರಭು ಕೆಂಪೇಗೌಡ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ರವಿ ಮಾತನಾಡಿ, ಕೆಂಪೇಗೌಡರು ಉತ್ತಮ ಆಡಳಿತಗಾರರು. ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜನಾಗಿದ್ದ ಅವರು ಅಲ್ಲಿನ ವೈಭವ ಕಣ್ಣಾರೆ ಕಂಡಿದ್ದರು. ನಮ್ಮ ಜನರಿಗೂ ಇಂತಹ ವೈಭವಯುತ ನಗರ ನಿರ್ಮಿಸಬೇಕೆಂಬ ಉದ್ದೇಶದಿಂದ ಬೆಂಗಳೂರು ನಗರ ನಿರ್ಮಿಸಿದರು ಎಂದರು.

ಮುಖ್ಯ ಶಿಕ್ಷ ಶ್ರೀನಿವಾಸ್ ಮಾತನಾಡಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ಅಗಟಹಳ್ಳಿ ಕೆ.ರವಿರಾಜ್, ಉಪಾಧ್ಯಕ್ಷೆ ಬಿ.ಕೆ.ಶಕುಂತಲ, ಮಾಜಿ ಅಧ್ಯಕ್ಷ ಕಾರಿಶಂಕರ, ಮನು, ಪ್ರಸನ್ನ, ಮಹದೇವಮ್ಮ, ಸದಸ್ಯೆ ಮಂಜುಳ, ಗ್ರಾಪಂ ಮಾಜಿ ಉಪಾಧ್ಯಕ್ಷ ನಿಂಗೇಗೌಡ, ಕುಳ್ಳೇಗೌಡ, ಡಿ.ಟಿ.ಧರ್ಮ, ಶಂಕರ, ಸಿ.ಎನ್.ಚಂದನ್, ಪಿಡಿಓ ಕುಮಾರ್, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಮುಖಂಡರು, ಜಯಮಾನರು, ಯುವಕರು ಹಾಜರಿದ್ದರು.

ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ನ್ಯಾಯಕ್ಕಾಗಿ ಆಗ್ರಹಿಸಿ

ಜು.15, ಚಾಮರಾಜನಗರ ಬಂದ್‌ಗೆ ನಿರ್ಧಾರ

ಚಾಮರಾಜನಗರ, ಜೂ.30–ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ತಲಾ 25 ಲಕ್ಷ ರೂ. ಪರಿಹಾರ ಹಾಗೂ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿ ಜು.15ರಂದು ಚಾಮರಾಜನಗರ ಸ್ವಯಂ ಪ್ರೇರಿತ ಬಂದ್‌ಗೆ ವಿವಿಧ ಸಂಘಟನೆಗಳು ಕರೆ ನೀಡಿವೆ.


ಜು.15ರಂದು ಚಾಮರಾಜನಗರ ಬಂದ್ ಸಂಬಂಧ ವಿವಿಧ ಸಂಘಟನೆಗಳ ಸಭೆ.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಮುಖಂಡ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ದುರಂತ ನಡೆದು ತಿಂಗಳುಗಳೇ ಕಳೆದಿದ್ದರೂ ಈವರೆಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಅಬ್ರಾರ್ ಅಹಮದ್ ಮಾತನಾಡಿ, ನಗರದಲ್ಲಿ ಶನಿವಾರ ನಡೆದ ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸುವ ಸಮಾವೇಶದಲ್ಲಿ ಆಕ್ಸಿಜನ್ ಸಂತ್ರಸ್ತರಿಗೆ ನ್ಯಾಯ ಕೊಡಿಸಲು ಬೆಂಬಲ ನೀಡಬೇಕೆಂದು ಕೋರಲಾಯಿತು. ಎಲ್ಲಾ ಮಸೀದಿಗಳ ಮುಖಂಡರು ಬೆಂಬಲಿಸುವುದಾಗಿ ತಿಳಿಸಿದ್ದಾರೆ. ಎಸ್‌ಡಿಪಿಐ ಜೊತೆಗೆ ಜಿಲ್ಲಾ ಮುಸ್ಲಿಂ ಒಕ್ಕೂಟ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದೆ ಎಂದರು.

ಬಳಿಕ ನಿಜಧ್ವನಿ ಗೋವಿಂದರಾಜು ಮಾತನಾಡಿ, ಜು.15ರಂದು ಕರೆ ನೀಡಿರುವ ಬಂದ್‌ಗೆ ಬೆಂಬಲ ನೀಡುವಂತೆ ನಗರದ ವರ್ತಕರು, ಬಸ್ ಮಾಲೀಕರು, ಆಟೋ ಚಾಲಕರು, ಗಿರಿವಿ ಅಂಗಡಿ ಹಾಗೂ ಲಾರಿ ಮಾಲೀಕರಿಗೆ, ಬೀದಿ ಬದಿ ವ್ಯಾಪಾರಿಗಳಿಗೆ ಮನವಿ ಸಲ್ಲಿಸಬೇಕಿದೆ ಎಂದು ತಿಳಿಸಿದರು.

ಸಭೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ಪಿಯುಸಿಎಲ್ ಅಧ್ಯಕ್ಷ ಪುಣಜನೂರು ದೊರೆಸ್ವಾಮಿ, ನಗರಸಭೆ ಸದಸ್ಯ ಮಹಮ್ಮದ್ ಅಮೀಕ್, ಮುಖಂಡರಾದ ಅರಕಲವಾಡಿ ನಾಗೇಂದ್ರ, ನಮ್ಮನೆ ಪ್ರಶಾಂತ್, ಸುರೇಶ್ ವಾಜಪೇಯಿ, ಪತ್ರಕರ್ತರಾದ ಎ.ಡಿ. ಸಿಲ್ವಾ, ದೊಡ್ಡಿಂದುವಾಡಿ ಸಿದ್ದರಾಜು, ಬೆಳ್ಳಿಯಪ್ಪ, ಸಂತ್ರಸ್ತರಾದ ಸವಿತಾ, ನಾಗರತ್ನ ಸೇರಿದಂತೆ ಇತರರು ಇದ್ದರು.

ಸಚಿವರೊಂದಿಗೆ ಸಭೆ : ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಜು.3ರಂದು ಭೇಟಿ ನೀಡುತ್ತಿದ್ದು, ಅಂದು ಸಂತ್ರಸ್ತರ ಸಭೆ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಭರವಸೆ ನೀಡಿದ್ದಾರೆ. ಅದರಂತೆ ಸಚಿವರ ಸಭೆಯಲ್ಲಿ ಭಾಗವಹಿಸಿ ಚರ್ಚೆ ಮಾಡೋಣ. ಆದರೆ, ಸಭೆಯಲ್ಲಿ ಕೈಗೊಂಡಿರುವ ಬಂದ್ ನಿರ್ಧಾರದಿಂದ ಹಿಂದೆ ಸರಿಯೋದು ಬೇಡ ತನ್ಮೂಲಕ ಸರ್ಕಾರದ ಗಮನ ಸೆಳೆಯೋಣ ಎಂದು ತಿಳಿಸಿದರು.

ಅಕ್ರಮ ಒತ್ತುವರಿ: ರೈತರ ಹಿತರಕ್ಷಣಾ ಸಂಘ ಅನಿರ್ದಿಷ್ಟಾವಧಿ ಧರಣಿಗೆ ಚಾಲನೆ


ಗುಂಡಾಲ್ ಜಲಾಶಯದ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ ಒತ್ತುವರಿ ವಿರೋಧಿಸಿ ರೈತರ ಹಿತರಕ್ಷಣಾ ಸಂಘ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿತು.

ಕೊಳ್ಳೇಗಾಲ: ಗುಂಡಾಲ್ ಜಲಾಶಯದ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ ಒತ್ತುವರಿಗಳ ವಿರುದ್ಧ ಹಾಗೂ ಸಾರ್ವಜನಿಕ ಆಸ್ತಿಗಳ ರಕ್ಷಣೆಗಾಗಿ, ರೈತರ ಹಿತರಕ್ಷಣಾ ಸಂಘದ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ಇಂದಿನಿಂದ ಪ್ರಾರಂಭವಾಯಿತು.

ಇಲ್ಲಿನ ಉಪವಿಭಾಗಾಧಿಕಾರಿ ಕಚೇರಿ ಮುಂಭಾಗದಲ್ಲಿ ಸೇರಿದ ರೈತ ಸಂಘದ ಪದಾಧಿಕಾರಿಗಳು, ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದರು. ಸಂಘದ ಅಧ್ಯಕ್ಷ ದಶರಥ ಮಾತನಾಡಿ, ಟಗರಪುರದಿಂದ ಗೋಪಿನಾಥಂವರೆಗಿನ ಪ್ರದೇಶದಲ್ಲಿ ರೈತರ ಜಮೀನುಗಳು, ಕಾಲುವೆಗಳು, ಕೆರೆಗಳು, ಗೋಮಾಳ, ಸ್ಮಶಾನ ಮತ್ತು ಬಂಡಿದಾರಿ ಪ್ರದೇಶಗಳು ಅಕ್ರಮವಾಗಿ ಆಕ್ರಮಣಕ್ಕೊಳಗಾಗಿವೆ. ಇವುಗಳನ್ನು ಮೂಲ ದಾಖಲೆ ಆಧಾರದ ಮೇಲೆ ತಿದ್ದುಪಡಿ ಮಾಡುವವರೆಗೆ ಧರಣಿಯನ್ನು ಮುಂದುವರೆಸಲಾಗುವುದು. ಕಾವೇರಿ ನದಿಗೆ ಗಲೀಜು ನೀರು ಮತ್ತು ಯುಜಿಡಿ ನೀರು ಬಿಡುವ ಪ್ರಕರಣಗಳನ್ನು ಕೂಡ ಉಲ್ಲೇಖಿಸಿ ಇವು ಪರಿಸರದೊಂದಿಗೆ ರೈತರ ಜಮೀನಿಗೂ ನಷ್ಟ ತರುತ್ತಿವೆ. ಮೇಲಾಗಿ ಕೆರೆಗಳು, ರಸ್ತೆಗಳು, ಕಾಲುವೆಗಳು ಹಾಗೂ ಲೋಕೋಪಯೋಗಿ ಸೌಕರ್ಯಗಳು ನಾಶವಾಗುತ್ತಿವೆ. ಹೀಗಾಗಿ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಧರಣಿಯಲ್ಲಿ ಸಂಘದ ಕಾರ್ಯದರ್ಶಿ ರಾಮಕೃಷ್ಣ, ಹಿರಿಯ ಹೋರಾಟಗಾರ ಮಾಲಂಗಿ ರೇಚಣ್ಣ, ಸರಗೂರು ವೀರಭದ್ರಸ್ವಾಮಿ, ಚಿನ್ನಸ್ವಾಮಿ ಮಾಳಿಗೆ, ಹಿತ್ತಲದೊಡ್ಡಿ ನಾಗರಾಜು, ಮೋಳೆ ರಾಜಣ್ಣ, ಸೋಮಣ್ಣ, ಮಹದೇವಪ್ಪ, ಕುಣಗಳ್ಳಿ ಸಿದ್ದಪ್ಪ, ಮತೀನ್, ಮತ್ತು ಹೊಂಡರಬಾಳು ಅರಸು ಇದ್ದರು.

ಮಹಿಳೆ ಕೊಲೆ: ಪತಿ ಪೊಲೀಸರ ವಶಕ್ಕೆ

ಚಾಮರಾಜನಗರ: ಅತ್ತೆ ಮತ್ತು ಗಂಡ ಮನೆಯಲ್ಲಿರುವಾಗಲೇ ಮಹಿಳೆಯ ಕೊಲೆ ನಡೆದಿರುವ ಘಟನೆ ತಾಲೂಕಿನ ದೊಳ್ಳಿಪುರ ಗ್ರಾಮದಲ್ಲಿ ಸೋಮವಾರ ನಡೆದಿದೆ.


ಶುಭಾ

ಗ್ರಾಮದ ನಿವಾಸಿ ಶುಭಾ(38) ಮೃತ ಮಹಿಳೆ. ಈಕೆ ಪತಿ ಮಹೇಶ್ ಹಾಗೂ ಅತ್ತೆ ಭಾರತಿ ವಿರುದ್ಧ ಮೃತಳ ತಂಗಿ ಶೃತಿ ಚಾಮರಾಜನಗರದ ಪೂರ್ವ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ದೂರಿನನ್ವಯ ಮೃತಳ ಪತಿ ಮಹೇಶ್‌ನನ್ನು ಪೊಲೀಸರು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಪೂರ್ವ ಪೊಲೀಸ್ ಠಾಣೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮೃತದೇಹವನ್ನು ಸಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜೃಂಭಣೆಯ ಕುರುಬನಕಟ್ಟೆ ಕಂಡಾಯ ಉತ್ಸವ

ಕೊಳ್ಳೇಗಾಲ: ಪಟ್ಟಣದ ಭೀಮನಗರ ಬಡಾವಣೆಯಲ್ಲಿ ಶ್ರೀ ಕುರುಬನಕಟ್ಟೆ ಕಂಡಾಯಗಳ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಭೀಮನಗರ ಬಡಾವಣೆಯ ನೀಲಗಾರರು ತರಿಸಿದ್ದ ಕಂಡಾಯಗಳನ್ನು ನಿನ್ನೆ ಸಂಜೆ ಪಟ್ಟಣದ ವಾಟರ್ ಟ್ಯಾಂಕ್ ಬಳಿ ಹೂ ಹೊಂಬಾಳೆ ತರಿಸಿ ಬಳಿಕ ಪ್ರಮುಖ ರಸ್ತೆಗಳ ಮೂಲಕ ಮೆರವಣಿಗೆ ನಡೆಸಿ, ಬಡಾವಣೆಯ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಇರಿಸಲಾಯಿತು. ಬೆಳಿಗ್ಗೆ ಭೀಮನಗರದ ಬಡಾವಣೆಯಲ್ಲಿ ಕಂಡಾಯಗಳನ್ನು ಮೆರವಣಿಗೆ ಮಾಡುವ ವೇಳೆ ಪ್ರತಿ ಮನೆಗಳಿಂದ ಹಣ್ಣು ಕಾಯಿ ಅರ್ಪಿಸಿ ಪೂಜೆ ಸಲ್ಲಿಸಿದರು.

ನೀಲಗಾರರ ತಂಬಡಿ ರಾಚಪ್ಪ, ಸಿದ್ದರಾಜು, ಪ್ರಮೋದ್, ಗಣಿ, ಕುಂಠಿ, ಶಶಿ, ರಘು, ಸುಪ್ರೀತ್, ಚಿಕ್ಕಮಾಳಿಗ ಸಾಲುಹಟ್ಟಿ, ಮಹದೇವಸ್ವಾಮಿ, ನಟರಾಜು, ಸಿದ್ದರಾಜು, ಆನಂದ್, ವರದರಾಜ್ ಪಾಪಣ್ಣ, ಮುಖಂಡರಾದ ಕೃಷ್ಣರಾಜ್, ಜಗದೀಶ್, ಎನ್. ನಟರಾಜ್, ಸುರೇಶ್ ಇತರರು ಇದ್ದರು.


ಶ್ರೀ ಕುರುಬನಕಟ್ಟೆ ಕಂಡಾಯಗಳ ಉತ್ಸವ ವಿಜೃಂಭಣೆಯಿಂದ ನಡೆಯಿತು.

ನೂತನ ವಿದ್ಯುತ್ ಮಾರ್ಗಕ್ಕೆ ಚಾಲನೆ; ಮುನ್ನೆಚ್ಚರಿಕೆ ವಹಿಸಲು ಸೂಚನೆ

ಮೈಸೂರು,ಜೂ.30– ಮೈಸೂರು ತಾಲೂಕು ವರಕೂಡಿನಲ್ಲಿ ಉದ್ದೇಶಿತ 1X8 MVA, 66/11 ಕೆ.ವಿ. ವಿದ್ಯುತ್ ಉಪ–ಕೇಂದ್ರಕ್ಕೆ 66 ಕೆ.ವಿ ದ್ವಿಮುಖ ವಿದ್ಯುತ್ ಮಾರ್ಗವು ಹಾಲಿ ಇರುವ ವಾಜಮಂಗಲ–ಕಡಕೊಳ ಮಾರ್ಗದಿಂದ ಉದ್ದೇಶಿತ ಸುಮಾರು 1.856 ಕಿಮೀ ನೂತನವಾಗಿ ನಿರ್ಮಿಸಿರುವ ಪ್ರಸರಣಾ ವಿದ್ಯುತ್ ಮಾರ್ಗವನ್ನು ಉದ್ದೇಶಿತ 1X8 MVA, 66/11 ವರುಣ (ವರಕೋಡು) ಕೇಂದ್ರಕ್ಕೆ ಪ್ರವಹಿಸಲಾಗುವುದು.

ಆದ್ದರಿಂದ ಗೋಪುರಗಳಿಗೆ ದನ–ಕರುಗಳನ್ನು ಕಟ್ಟುವುದಾಗಲೀ, ಲೋಹದ ಪಟ್ಟಿಯನ್ನು ತೆಗೆಯುವುದಾಗಲೀ, ಗೋಪುರಗಳನ್ನು ಹತ್ತುವುದಾಗಲೀ, ತಂತಿಗಳನ್ನು ಮುಟ್ಟುವುದಾಗಲೀ, ಗೋಪುರಗಳ ಕೆಳಗಡೆ ಮರ–ಗಿಡಗಳನ್ನು ನೆಡುವುದಾಗಲೀ, ಗೋಪುರಗಳಿಗೆ ಬಳ್ಳಿ ಮತ್ತು ಹಗ್ಗ ಮುಂತಾದವುಗಳನ್ನು ಎಸೆಯುವುದಾಗಲೀ, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದಾಗಲೀ ಮಾಡುವುದು ಅಪಾಯಕಾರಿಯಾಗಿ ಹಾಗೂ ಪ್ರಾಣ ಹಾನಿಯಾಗುವುದರಿಂದ ಈ ಸೂಚನೆ ಉಲ್ಲಂಘಿಸಿದಲ್ಲಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣ ಹಾನಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಜವಾಬ್ದಾರರಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಲ್ಲಿಕಾರ್ಜುನ ಖರ್ಗೆ 'ಆಕ್ಸಿಡೆಂಟಲ್' ಎಐಸಿಸಿ ಅಧ್ಯಕ್ಷ: ಅಶೋಕ ವಾಗ್ದಾಳಿ



ಬೆಂಗಳೂರು, ಜೂ.30– ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಮಾಡುವ ವಿಚಾರ ಪಕ್ಷದ ಹೈಕಮಾಂಡ್ ಕೈಯಲ್ಲಿದ್ದು, ಏನು ನಡೆಯುತ್ತಿದೆ ಎಂಬುದನ್ನು ಯಾರೂ ಹೇಳಲಾಗದು ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತಿರುಗೇಟು ನೀಡಿದ್ದಾರೆ.

ಬಹುಶಃ ಕಾಂಗ್ರೆಸ್ ನಮಗೆ ಮತ್ತೊಬ್ಬ 'ಆಕ್ಸಿಡೆಂಟಲ್' ನಾಯಕನನ್ನು ನೀಡಿದ್ದಾರೆ ಎಂದು ಅನಿಸುತ್ತಿದೆ. ಮೊದಲನೇಯದಾಗಿ 'ಆಕ್ಸಿಡೆಂಟಲ್ ಪ್ರೈಮ್ ಮಿನಿಸ್ಟರ್' ಡಾ.ಮನಮೋಹನ್ ಸಿಂಗ್. ಅವರು ಪ್ರಧಾನಿಯಾಗಿದ್ದರೂ ಯಾವುದೇ ಅಧಿಕಾರ ಇರಲಿಲ್ಲ. ಈಗ ಆಕ್ಸಿಡೆಂಟಲ್ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಹೈಕಮಾಂಡ್ ಏನು ಯೋಚಿಸುತ್ತಿದೆ ಎಂದು ನನಗೆ ತಿಳಿದಿಲ್ಲ ಎಂದು ಹೇಳುತ್ತಿದ್ದಾರೆ. ಖರ್ಗೆ ಅವರೇ ನೀವು ಹೈಕಮಾಂಡ್ ಆಗಿಲ್ಲದಿದ್ದರೆ ಇನ್ಯಾರು ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಅಥವಾ ಅದೃಶ್ಯ ಸಮಿತಿಯೇ ಎಂದು ಪ್ರಶ್ನಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಅಧ್ಯಕ್ಷರು ಕೇವಲ ಹೆಸರಿಗೆ ಮಾತ್ರ. ನಿರ್ಣಯಗಳನ್ನು ಜನಪಥದಲ್ಲಿ ಮುಚ್ಚಿದ ಬಾಗಿಲುಗಳ ಹಿಂದೆ ತೆಗೆದುಕೊಳ್ಳಲಾಗುತ್ತದೆ ಎಂದು ಆರೋಪಿಸಿದ್ದಾರೆ.

ಕುಕಿ ಬಂಡುಕೋರ ನಾಯಕ ಸೇರಿ ನಾಲ್ವರಿಗೆ ಗುಂಡಿಕ್ಕಿ ಹತ್ಯೆ

ಗುವಾಹಟಿ: ಮಣಿಪುರದ ಚುರಾಚಂದ್‌ಪುರ ಜಿಲ್ಲೆಯಲ್ಲಿ ಸೋಮವಾರ ಅಪರಿಚಿತ ದಾಳಿಕೋರರು ಹೊಂಚು ಹಾಕಿ, ಕುಕಿ ಬಂಡುಕೋರ ನಾಯಕನ ಕಾರಿನ ಮೇಲೆ ಗುಂಡಿನ ದಾಳಿ ನಡೆಸಿದ್ದು, ದಾಳಿಯಲ್ಲಿ ಅವರ ಇಬ್ಬರು ಅಂಗರಕ್ಷಕರು ಮತ್ತು ಒಬ್ಬ ವೃದ್ಧ ಮಹಿಳೆ ಸೇರಿ ನಾಲ್ವರು ಸಾವನ್ನಪ್ಪಿದ್ದಾರೆ. ಚುರಾಚಂದ್‌ಪುರ ಪಟ್ಟಣದಿಂದ ಸುಮಾರು 10 ಕಿ.ಮೀ ದೂರದಲ್ಲಿರುವ ಮೊಂಗ್‌ಜಾಂಗ್ ಗ್ರಾಮದ ಬಳಿಯ ಜೆಸಾಮಿ ರಸ್ತೆಯಲ್ಲಿ ಇಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ ಈ ಗುಂಡಿನ ದಾಳಿ ನಡೆದಿದೆ. ಕುಕಿ ರಾಷ್ಟ್ರೀಯ ಸೇನೆಯ(ಕೆಎನ್‌ಎ) ಉಪ ಕಮಾಂಡರ್–ಇನ್–ಚೀಫ್ ಥಾಪಿ ಹಾವೋಕಿಪ್ ಅವರು ತಮ್ಮ ಇಬ್ಬರು ಅಂಗರಕ್ಷಕರೊಂದಿಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಗುಂಡಿನ ದಾಳಿ ನಡೆದಿದೆ. ದಾಳಿಯಲ್ಲಿ ಕಾರಿನಲ್ಲಿ ಈ ಮೂವರು ಹಾಗೂ ಇತರ ಒಬ್ಬ ಮಹಿಳೆ ಮೃತಪಟ್ಟಿದ್ದಾರೆ. ಎಲ್ಲಾ ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸಲಾಗಿದೆ.

ಪ್ರಾಥಮಿಕ ವರದಿಗಳ ಪ್ರಕಾರ, ದಾಳಿಕೋರರು ಹತ್ತಿರದಿಂದ ಗುಂಡು ಹಾರಿಸಿದ್ದು, ಸ್ಥಳದಿಂದ ಒಂದು ಡಜನ್‌ಗೂ ಹೆಚ್ಚು ಖಾಲಿ ಶೆಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಘಟನೆ ಬಣಗಳ ವೈಷಮ್ಯಕ್ಕೆ ಸಂಬಂಧಿಸಿದೆ ಎಂದು ನಂಬಲಾಗಿದೆ. ಆದರೆ ಯಾವುದೇ ಗುಂಪು ಇದುವರೆಗೆ ದಾಳಿಯ ಹೊಣೆ ಹೊತ್ತುಕೊಂಡಿಲ್ಲ.

ಘಟನೆಯ ನಂತರ, ಪರಿಸ್ಥಿತಿ ಉಲ್ಬಣಗೊಳ್ಳುವ ಭೀತಿ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭದ್ರತಾ ಸಿಬ್ಬಂದಿ ಧಾವಿಸಿದೆ. ಈ ವರ್ಷದ ಫೆಬ್ರವರಿಯಿಂದ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದೆ. ಆದರೂ ಆಗಾಗ ಹಿಂಸಾಚಾರ ಘಟನೆಗಳು ನಡೆಯುತ್ತಿವೆ.

ಮೈಸೂರು ವಿವಿಯಲ್ಲಿ ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮ

ನಾಡಪ್ರಭು ಕೆಂಪೇಗೌಡರು ಸರ್ವ ಸಮುದಾಯಗಳ ಹಿತದೃಷ್ಟಿಯಿಂದ ಜನಪರ ಆಡಳಿತ ನೀಡಿದವರು

ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸ್ಮರಣೆ



ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಪ್ರತಿಮೆ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮವನ್ನು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಉದ್ಘಾಟಿಸಿದರು. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸೇರಿದಂತೆ ಇನ್ನಿತರ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜೂ.30(ಪಿಎಂ)– ನಾಡಪ್ರಭು ಕೆಂಪೇಗೌಡರು ಎಲ್ಲಾ ಸಮುದಾಯಗಳ ಹಿತದೃಷ್ಟಿಯಿಂದ ಜನಪರ ಆಡಳಿತ ನೀಡಿದವರು ಎಂದು ಮೈಸೂರು ವಿವಿ ಹಾಗೂ ಮುಕ್ತ ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸ್ಮರಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಪ್ರತಿಮೆ ಆವರಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಒಕ್ಕಲಿಗರ ಹಿತರಕ್ಷಣ ಸಮಿತಿ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರಕವಿ ಕುವೆಂಪು ವಿಶ್ವ ಮಾನವ ಸಂದೇಶ ಕೊಟ್ಟ ಮಹನೀಯರು. ಇದೇ ಸಂದೇಶದಂತೆಯೇ ಅಂದೇ ಸರ್ವ ಸಮುದಾಯಗಳ ಹಿತದೃಷ್ಟಿ ಕಾಯ್ದುಕೊಂಡು ಜನಪರ ಆಡಳಿತ ನೀಡಿದವರು ಕೆಂಪೇಗೌಡರು. ಅವರು ಬೆಂಗಳೂರು ಮತ್ತು ನಾಡು ಕಟ್ಟಿರುವುದು ಕೇವಲ ಒಂದು ವರ್ಗಕ್ಕೆ ಸೀಮಿತವಾಗಿ ಅಲ್ಲ. ಅವರು ಎಲ್ಲಾ ವರ್ಗಗಳನ್ನು ಸರಿದೂಗಿಸಿಕೊಂಡು ಆಡಳಿತ ನಡೆಸಿದರು. ಕೆಂಪೇಗೌಡರು ಕೊಟ್ಟ ಕೊಡುಗೆಗಳು ಅವಿಸ್ಮರಣೀಯ ಎಂದರು.

ಕುವೆಂಪು ಅವರು ಸಹ ಯಾವುದೇ ಒಂದು ವರ್ಗ ಮತ್ತು ಸಮುದಾಯಕ್ಕೆ ಸೀಮಿತವಲ್ಲ. ಎಲ್ಲಾ ಸಮುದಾಯದ ಹಿತಾಸಕ್ತಿಗಾಗಿ ಕುವೆಂಪು ಶ್ರಮಿಸಿದ್ದಾರೆ. ಎಲ್ಲರೂ ಸಮಾನರು ಎಂಬ ದೃಷ್ಟಿಯಿಂದ ವಿಶ್ವ ಮಾನವ ಸಂದೇಶ ಕೊಟ್ಟಿದ್ದಾರೆ. ಇದೇ ಸಂದೇಶವನ್ನು ಅಂದೇ ಕೆಂಪೇಗೌಡರು ಅನುಸರಿಸಿದ್ದರು ಎಂದು ಸ್ಮರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಆಶೀರ್ವಚನ ನೀಡಿ, 500 ವರ್ಷಗಳ ಹಿಂದೆಯೇ ಕೆಂಪೇಗೌಡರು ಈ ನಾಡಿಗೆ ಅಗತ್ಯವಾದ ಎಲ್ಲಾ ಮಹತ್ತರ ಕೊಡುಗೆಗಳನ್ನು ನೀಡಿದ್ದಾರೆ. 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಕುವೆಂಪು ವಾಣಿಯಂತೆ ಕೆಂಪೇಗೌಡರು ನಡೆದುಕೊಂಡವರು. ಬಸವಣ್ಣನವರ ತತ್ವಾದರ್ಶದಂತೆ ಕೆಂಪೇಗೌಡರು ಎಲ್ಲಾ ವರ್ಗಗಳನ್ನು ಅಪ್ಪಿಕೊಂಡ ಮಹನೀಯರು. ಹಾಗಾಗಿ ಕೆಂಪೇಗೌಡರು ಕೇವಲ ಒಂದು ಜನಾಂಗ, ಮತ ಹಾಗೂ ಧರ್ಮಕ್ಕೆ ಸೀಮಿತವಲ್ಲ ಎಂದರು.

ಕೆಂಪೇಗೌಡರ ಕುಟುಂಬ ಸಹ ನಮ್ಮ ನಾಡಿಗೆ ಕೊಟ್ಟಿರುವ ಕೊಡುಗೆ ಅಪಾರ. ಅವರ ಸೊಸೆ ಲಕ್ಷ್ಮೀದೇವಿ ಕೋಟೆ ಬಾಗಿಲು ನಿಲ್ಲದೇ ಇದ್ದಾಗ ತನ್ನ ಬಲಿದಾನ ಮಾಡಿಕೊಳ್ಳುತ್ತಾಳೆ. ಇದು ಎಂತಹ ತ್ಯಾಗ ಅಲ್ಲವೇ. ಕೆಂಪೇಗೌಡರ ತತ್ವಾದರ್ಶ, ಕೊಡುಗೆಗಳನ್ನು ನಮ್ಮ ಯುವ ಜನರು ಅರಿಯಬೇಕು. ಕೆಂಪೇಗೌಡರು ಕಟ್ಟಿದ ಬೆಂಗಳೂರು ಇಂದು ಸಿಲಿಕಾನ್ ಸಿಟಿ ಆಗಿ ಇಡೀ ವಿಶ್ವಕ್ಕೆ ತನ್ನ ಖ್ಯಾತಿ ಪಸರಿಸಿದೆ. ಕುವೆಂಪು ಅವರು ನಡೆದಾಡಿದ ಜಾಗದಲ್ಲಿ ಕೆಂಪೇಗೌಡರ ಜಯಂತಿ ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೆಂಪೇಗೌಡರ ಕುರಿತು ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ. ಮಂಜುನಾಥ್ ಮಾತನಾಡಿದರು. ಇದಕ್ಕೂ ಮುನ್ನ ಕೆಂಪೇಗೌಡರ ಪ್ರತಿಮೆಗೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ್, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಸಿಂಡಿಕೇಟ್ ಸದಸ್ಯರಾದ ಡಾ.ಚಂದ್ರಶೇಖರ್, ಮಾದೇಶ್, ಗೋಕುಲ್ ಗೋವರ್ಧನ್, ಮಾಜಿ ಸದಸ್ಯ ಈ.ಸಿ.ನಿಂಗರಾಜೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಸಿ.ಜಿ.ಗಂಗಾಧರ್‌ಗೌಡ, ಡಾ.ಎಂ.ಬಿ.ಮಂಜೇಗೌಡ, ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ನ್ಯೂರೋಜೋನ್ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಶುಶ್ರೂತ್‌ಗೌಡ, ಒಕ್ಕಲಿಗರ ಸಂಘದ (ಮೈಸೂರು–ಚಾಮರಾಜನಗರ) ಅಧ್ಯಕ್ಷ ಸಿ.ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ.ಇ.ಚೇತನ್, ಸಹಾಯಕ ಪ್ರಾಧ್ಯಾಪಕ ಡಾ.ಕೆ.ಎನ್. ಗಿರೀಶ್, ಹಿತರಕ್ಷಣ ಸಮಿತಿ ಅಧ್ಯಕ್ಷ ಕಾರ್ತಿಕ್‌ಗೌಡ ಮತ್ತಿತರರು ಹಾಜರಿದ್ದರು.

ಕೆಂಪೇಗೌಡರ ಕುರಿತು 19 ಜನಪದ ಕಾವ್ಯಗಳಿವೆ ; ಪ್ರೊ.ಎಂ.ಜಿ.ಮಂಜುನಾಥ್

ಮೈಸೂರು, ಜೂ.30(ಪಿಎಂ)– ನಮ್ಮ ಜನಪದರು ಜನಸಮುದಾಯಕ್ಕೆ ಅನುಕೂಲ ಮಾಡಿಕೊಟ್ಟ ಮಹಾನ್ ವ್ಯಕ್ತಿಗಳ ಬಗ್ಗೆ ಮಾತ್ರವೇ ಕಾವ್ಯ ಕಟ್ಟುತ್ತಾರೆ. ಕೆಂಪೇಗೌಡರ ಕುರಿತು 19 ಜನಪದ ಕಾವ್ಯಗಳನ್ನು ಕಟ್ಟಿದ್ದು, ಇದರಿಂದಲೇ ಕೆಂಪೇಗೌಡರ ಹಿರಿಮೆ–ಗರಿಮೆ ಅರಿಯಬಹುದು ಎಂದು ಸಂಗೀತ ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್ ಹೇಳಿದರು.

ರಾಜನ ಆಶ್ರಯದಲ್ಲಿರುವ ಕವಿಗಳು ಬರೆಯುವುದಾದರೆ ತಮ್ಮ ಆಶ್ರಯದಾತನನ್ನು ಹಾಡಿ ಹೊಗಳಿ ಬರೆಯುತ್ತಾರೆ. ಆದರೆ ಜನಪದರು ನಿಜವಾಗಿಯೂ ತಮಗೆ ಅನುಕೂಲ ಮಾಡಿಕೊಟ್ಟಂತಹ ಮಹಾನ್ ವ್ಯಕ್ತಿಗಳ ಬಗ್ಗೆ ಮಾತ್ರ ಕಾವ್ಯಗಳನ್ನು ಕಟ್ಟುತ್ತಾರೆ. ಈ ನಿಟ್ಟಿನಲ್ಲಿ ಕೆಂಪೇಗೌಡರ ಜನಪರ ಸೇವೆಯನ್ನು ಅರಿಯಬಹುದು. ಕೆಂಪೇಗೌಡರ ಕುರಿತ ಜನಪದ ಕಾವ್ಯಗಳನ್ನು ಸಂಕಲನ ಮಾಡಿ ವಿದ್ವಾಂಸರು ಪ್ರಕಟಿಸಿದ್ದಾರೆ ಎಂದರು.

ಬೆಂಗಳೂರು, ಮಾಗಡಿ, ತುಮಕೂರು ಪ್ರದೇಶದಲ್ಲಿ ಮಾತ್ರವಲ್ಲದೇ ಮೈಸೂರಿನಲ್ಲಿಯೂ ದೊಂಬಿದಾಸರು, ಕೆಂಪೇಗೌಡರ ಕುರಿತು ಜನಪದ ಕಾವ್ಯಗಳನ್ನು ಹಾಡುವುದನ್ನು ಹಿರಿಯ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಸಂಕಲನ ಮಾಡಿಕೊಟ್ಟಿದ್ದಾರೆ. ಕೆಂಪೇಗೌಡರ ಇಡೀ ವಂಶಕ್ಕೆ ಸಂಬಂಧಿಸಿದಂತೆ ಸುಮಾರು 100 ಶಿಲಾಶಾಸನಗಳು ಸಿಕ್ಕಿವೆ. ಅವುಗಳನ್ನು ನಾನೇ ಸಂಕಲನ ಮಾಡಿದ್ದು, ಬೆಂಗಳೂರು ವಿವಿ ಪ್ರಸಾರಾಂಗದಿಂದ ಪ್ರಕಟಿಸಲಾಗಿದೆ ಎಂದು ವಿವರಿಸಿದರು.



ಕಾಸಿಯಾ ಸಂಸ್ಥೆಯ ನೂತನ ಪದಾಧಿಕಾರಿಗಳು

ಬೆಂಗಳೂರಿನ ಕಾಸಿಯಾ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಗಣೇಶ್‌ರಾವ್, ಗೌರವ ಉಪಾಧ್ಯಕ್ಷರಾಗಿ ಬಿರಾದಾರ್, ಗೌರವ ಕಾರ್ಯದರ್ಶಿಯಾಗಿ ಹುಸೇನ್, ಜಂಟಿ ಕಾರ್ಯದರ್ಶಿ(ಪಟ್ಟಣ)ಯಾಗಿ ಕಿರಣ್, ಜಂಟಿ ಕಾರ್ಯದರ್ಶಿ(ಗ್ರಾಮೀಣ ಪ್ರದೇಶ)ಯಾಗಿ ದಿನೇಶ್, ಕಾರ್ಯಕಾರಿ ಸಮಿತಿ ನಿರ್ದೇಶಕರಾಗಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಹಾಗೂ ಕಿಯಾಮ ಹೆಬ್ಬಾಳು ಗೌರವ ಕಾರ್ಯದರ್ಶಿ ಕೆ.ಬಿ.ಲಿಂಗರಾಜು, ಮೈಸೂರು ಡಿಸ್ಟ್ರಿಕ್ಟ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಅಸೋಸಿಯೇಷನ್ ಗೌರವ ಕಾರ್ಯದರ್ಶಿ ಸಿ.ಎಂ.ಸುಬ್ರಹ್ಮಣ್ಯನ್ ಎನ್.ಟೆಲ್ ಕ್ಯಾಡ್ ಕೈಗಾರಿಕಾ ಪ್ರದೇಶದ ಎನ್.ಸತೀಶ್, ವೀಮಾ ರಬ್ಬರ್ಸ್‌ನ ಮಂಜುನಾಥ್, ಕಿಶೋರ್ ಇಂಜಿನಿಯರ್ಸ್‌ನ ದೇವೇಂದ್ರಕುಮಾರ್ ಚುನಾಯಿತರಾಗಿದ್ದಾರೆ. ಇವರನ್ನು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ಒಂದನೇ ಪುಟದಿಂದ

2028ಕ್ಕೂ ನಮಗೇ ಅಧಿಕಾರ

ಬಿಜೆಪಿಯವರು ನಾಡಿನ ಜನರಿಗೆ ಉತ್ತರಿಸಬೇಕು. ದಿವಾಳಿ ಆಗಿದ್ದರೆ ನೀರಾವರಿಗೆ 25 ಸಾವಿರ ಕೋಟಿ ರೂಪಾಯಿ ಎಲ್ಲಿಂದ ಬಂತು ಎಂದು ಪ್ರಶ್ನಿಸಿದ ಅವರು, ಕೃಷಿ ಪ್ರಗತಿಗಾಗಿ ವರ್ಷಕ್ಕೆ 19000 ಸಾವಿರ ಕೋಟಿ ಪಂಪ್‌ಸೆಟ್ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿದ್ದೇವೆ. 92 ವರ್ಷಗಳ ಬಳಿಕ ಜೂನ್ ತಿಂಗಳಲ್ಲೇ ಭರ್ತಿ ಆಗಿರುವ ಕೆಆರ್‌ಎಸ್‌ನಲ್ಲಿ ಸ್ಮಾರಕ ನಿರ್ಮಿಸಿ ಎಂದು ಕಾವೇರಿ ನಿಗಮದ ಎಂಡಿ ಅವರಿಗೆ ಸಿಎಂ ಸೂಚನೆ ನೀಡಿದರು. ಕೃಷ್ಣರಾಜಸಾಗರದ ಒಟ್ಟು 124 ಅಡಿ ಸಾಮರ್ಥ್ಯದಲ್ಲಿ 120.90 ಅಡಿ ಭರ್ತಿ ಆಗಿದೆ. ಅಣೆಕಟ್ಟೆ 49 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದೆ. 193 ವರ್ಷಗಳಲ್ಲಿ 76 ಬಾರಿ ಭರ್ತಿಯಾಗಿದ್ದು, 2023–24ರಲ್ಲಿ ಬರಗಾಲವಿತ್ತು. ಈ ಕಾರಣಕ್ಕೇ ಸಿದ್ದರಾಮಯ್ಯ ಅವರ ಕಾಲುಗುಣ ಚನ್ನಾಗಿಲ್ಲ, ಕಾಂಗ್ರೆಸ್ ಸರ್ಕಾರದ ಕಾಲುಗುಣ ಸರಿಯಿಲ್ಲ ಎಂದು ವಿರೋಧ ಪಕ್ಷಗಳು ಟೀಕಿಸಿದ್ದವು. ಈಗ ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಮಳೆ, ಬೆಳೆ ಉತ್ತಮವಾಗಿ ಆಗುತ್ತಿದೆ. ವಿರೋಧ ಪಕ್ಷಗಳ ಮೂಢಾತ್ಮರು ಈಗ ಏನು ಹೇಳುತ್ತಾರೆಂದು ವ್ಯಂಗ್ಯವಾಡಿದರು.

ನಾವು ಈ ಬಾರಿ ಕಾವೇರಿ ಅಭಿವೃದ್ಧಿ ನಿಗಮಕ್ಕೆ 3000 ಕೋಟಿ ಹಣ ಕೊಟ್ಟಿದ್ದೇವೆ. ಈಗ ಟೀಕಿಸುತ್ತಿರುವವರು ಅಧಿಕಾರದಲ್ಲಿದ್ದಾಗ ಕಾವೇರಿ ನೀರಾವರಿ ನಿಗಮಕ್ಕೆ ಹಣ ಕೊಡಲಿಲ್ಲ. ಸುಳ್ಳು ಹೇಳುವ ಚಾಳಿಯಲ್ಲಿರುವ ಬಿಜೆಪಿಗೆ ರಾಜ್ಯದ ಜನ ಪೂರ್ಣ ಅಧಿಕಾರವನ್ನೇ ಕೊಟ್ಟಿಲ್ಲ. ಆಪರೇಷನ್ ಕಮಲ ಮಾಡಿ ಎರಡು ಬಾರಿ ಅಧಿಕಾರಕ್ಕೆ ಬಂದರು. ಜೆಡಿಎಸ್ ಇನ್ನೊಬ್ಬರ ಹೆಗಲ ಮೇಲೆ ಕೈ ಹಾಕಿಕೊಂಡೇ ಅಧಿಕಾರಕ್ಕೆ ಬರಬೇಕು. ಸ್ವಂತ ಶಕ್ತಿಯಿಂದ ಸಾಧ್ಯವೇ ಇಲ್ಲ ಎಂದರು.

ತಾಯಿ ಕಾವೇರಿಗೆ ಪೂಜೆ ಮಾಡಿ ನಾಡಿನ ಮಳೆ, ಬೆಳೆ ಹೀಗೆ ಚನ್ನಾಗಿ ಆಗಲಿ ಎಂದು ಪ್ರಾರ್ಥಿಸಿದ್ದೇನೆ. ನಾವು ಅಧಿಕಾರದಲ್ಲಿದ್ದಾಗ ಯಾವಾಗಲಾದರೂ ರೈತರಿಗೆ ಬೀಜ, ಗೊಬ್ಬರಕ್ಕೆ ತೊಂದರೆ ಮಾಡಿದ್ದೇವಾ ಬೀಜ ಕೇಳಿದವರಿಗೆ ಗೋಲಿಬಾರ್ ಮಾಡಿದ್ದೇವಾ ಎಂದು ನೆರೆದಿದ್ದವರನ್ನೇ ಪ್ರಶ್ನಿಸಿದರು.

ಕಾವೇರಿ ತಾಯಿ, ಚಾಮುಂಡೇಶ್ವರಿ ಕೃಪಾಕಟಾಕ್ಷದಿಂದ ರಾಜ್ಯ ಸುಭಿಕ್ಷವಾಗಿದೆ. ಎಲ್ಲಾ ಜಲಾಶಯಗಳೂ ತುಂಬಿವೆ ಎಂದ ಅವರು, ಎಲ್ಲಾ ನಾಲೆಗಳಿಗೂ ತಕ್ಷಣದಿಂದ ನೀರು ಹರಿಸಲು ಅಧಿಕಾರಿಗಳಿಗೆ ವೇದಿಕೆಯಿಂದಲೇ ಆದೇಶ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ರಾಜ್ಯ ಸರ್ಕಾರವು ಸಾರ್ವಜನಿಕರಿಗೆ ಸ್ಪಂದಿಸುತ್ತಾ ಪ್ರಚಾರದಲ್ಲಿ ಹಿಂದೆ ಇದ್ದೇವೆ. ನಮ್ಮ ವಿರುದ್ಧ ಏಕಾಂಗಿಯಾಗಿ ಹೋರಾಟ ಮಾಡದೇ ಬಿಜೆಪಿ– ಜೆಡಿಎಸ್ ಒಗ್ಗಟ್ಟಾಗಿ ಹೋರಾಟ ಮಾಡಿದರು. ಆದರೆ ಕಳೆದ ಸಂಸತ್ ಚುನಾವಣೆಯಲ್ಲಿ 25 ಸೀಟು ಗೆದ್ದಿದ್ದ ಬಿಜೆಪಿ ಮೈತ್ರಿ ಮಾಡಿಕೊಂಡು 19 ಸೀಟು ಗೆದ್ದಿದ್ದೇ ಅವರ ಸಾಧನೆ ಎಂದು ವ್ಯಂಗ್ಯವಾಡಿದರು.

ಪ್ರತಿಪಕ್ಷಗಳು ಗ್ಯಾರಂಟಿಯನ್ನು ಟೀಕಿಸಿದ್ದವು. ಸಿದ್ದರಾಮಯ್ಯ ಅನುಭವವು ರಾಜ್ಯದ ಆರ್ಥಿಕ ಸಮಸ್ಯೆಯನ್ನು ಬಗೆಹರಿಸಿ, ಉತ್ತಮ ಗ್ಯಾರಂಟಿ ಕೊಟ್ಟು ರಾಜ್ಯವನ್ನು ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಮಳೆ ಸ್ವಲ್ಪ ಕೊರತೆಯಾಗಿದ್ದು, ಅದು ನಮ್ಮ ಕೈಯ್ಯಲ್ಲಿ ಇಲ್ಲ. ಗೌರವಯುತವಾಗಿ ಟೀಕೆ, ಟಿಪ್ಪಣಿ ಮಾಡಬೇಕು. ಸಿದ್ದು ಸಿಎಂ ಆದರೆ ಬರಗಾಲ ಅನ್ನುತ್ತಾರೆ. ಈ ರೀತಿಯ ಟೀಕೆ ಮಾಡುವವರಿಗೆ ಪ್ರಕೃತಿ ಉತ್ತರ ಕೊಟ್ಟಿದ್ದು, ಅದಕ್ಕೆ 92 ವರ್ಷದಲ್ಲಿ ಜೂನ್ ತಿಂಗಳಲ್ಲಿ ಭರ್ತಿಯಾಗಿದೆ ಅದೇ ಸಾಕ್ಷಿ ಎಂದು ಹೇಳಿದರು.

ಈಗಾಗಲೇ ಕಚೇರಿ ತೆರೆಯಲಾಗಿದೆ

ಅರಣ್ಯ ಭೂಮಿಗೆ ಪರ್ಯಾಯವಾಗಿ ಅರಣ್ಯ ಬೆಳೆಸಲು ಎಲ್ಲಿ ಭೂಮಿ ನೀಡಬೇಕು ಎಂದು ತೀರ್ಮಾನ ಕೂಡ ಮಾಡಿದ್ದೇವೆ ಎಂದು ತಿಳಿಸಿದರು. ಮಂಡ್ಯ ಜಿಲ್ಲೆ ಒಂದಕ್ಕೆ ನೀರಾವರಿ ಇಲಾಖೆಯಿಂದ 1 ಸಾವಿರ ಕೋಟಿ ರೂಪಾಯಿ ಅನುದಾನ ನೀಡಿದ್ದೇವೆ. ಕಾಲುವೆ ಸ್ವಚ್ಛತೆ, ನೀರಿನ ಕೊರತೆ, ನಾಲೆಯ ಕೊನೆ ಪ್ರದೇಶಕ್ಕೆ ನೀರು ಹರಿಸುವುದು ಸೇರಿದಂತೆ ಹಲವು ಅಭಿವೃದ್ಧಿ ಕೆಲಸ ಮಾಡಲಾಗಿದೆ. ಕಬಿನಿ ನೀರಾವರಿ ಪ್ರದೇಶಕ್ಕೆ ಕೂಡ 400 ಕೋಟಿ ರೂಪಾಯಿ ನೀಡಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಕಾವೇರಿ ಆರತಿ ಸಂಬಂಧ ರೈತರು ಆತಂಕಪಡುವ ಪ್ರಮೇಯವಿಲ್ಲ. ಪೂಜೆ ಹಾಗೂ ಪ್ರಾರ್ಥನೆ ಮಾಡುವುದರಿಂದ ಯಾರಿಗೂ ತೊಂದರೆ ಆಗುವುದಿಲ್ಲ. ಕಾವೇರಿ ಆರತಿಯನ್ನು ಚಿಕ್ಕದಾಗಿಯೂ ಮಾಡಬಹುದು ಅಥವಾ ದೊಡ್ಡದಾಗಿಯೂ ಮಾಡಬಹುದು. ಆದರೆ ಇದನ್ನು ಮಾಡುವುದರಿಂದ ಪ್ರತ್ಯಕ್ಷವಾಗಿಯೇ 1,500 ಜನರಿಗೆ ಉದ್ಯೋಗ ದೊರೆಯಲಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಬದಲಾವಣೆ ವಿಚಾರ ವರಿಷ್ಠರ ಕೈಯಲ್ಲಿದೆ!

ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ವಿಚಾರಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸುತ್ತಾರೆ. ಏನೇನು ನಡೆದಿದೆ, ಅವರು ಏನು ಹೇಳುತ್ತಾರೆ ಎಂಬ ಮಾಹಿತಿಯನ್ನು ನೀಡಿದ ನಂತರ ಮುಂದೇನು ಮಾಡಬೇಕೆಂಬುದನ್ನು ನೋಡೋಣ ಎಂದು ಮಾರ್ಮಿಕವಾಗಿ ತಿಳಿಸಿದರು. ಶಾಸಕರು, ಸಚಿವರು ನೀಡುವ ಹೇಳಿಕೆಗಳಿಗೆ ನಾನು ಉತ್ತರ ಕೊಡಲಾರೆ. ಪ್ರಧಾನ ಕಾರ್ಯದರ್ಶಿಗಳು ಏನು ವರದಿ ನೀಡುತ್ತಾರೋ, ಅದರ ಮೇಲೆ ವರಿಷ್ಠರು ತೀರ್ಮಾನ ಮಾಡುತ್ತಾರೆ ಎಂದರು.

ಸಿಎಂ ಸಿದ್ದರಾಮಯ್ಯ ಬಾಗಿನ ಅರ್ಪಣೆ



ಮಾತೆಗೆ ಅರ್ಪಿಸಲಾಗುತ್ತದೆ. ನವ ಧಾನ್ಯ, ಹಸಿರು ಸೀರೆ, ಬಳೆ, ಮೂಗುತಿ, ಹರಿಶಿನ, ಕುಂಕುಮ ಸೇರಿದಂತೆ ಹಲವು ವಸ್ತುಗಳನ್ನು ಈ ಬಾಗಿನ ಒಳಗೊಂಡಿರುತ್ತದೆ ಎಂದು ವಿವರಿಸಿದರು. ಆಷಾಢ ಮಾಸದಲ್ಲೇ ಡ್ಯಾಂ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಈ ಮಾಸದಲ್ಲೇ ಪ್ರತಿ ಬಾರಿಯೂ ಬಾಗಿನ ಅರ್ಪಣೆ ಮಾಡಲಾಗುತ್ತದೆ ಎಂದು ವಿವರಿಸಿದರು. ಗಮನ ಸೆಳೆದ ಸಾಂಸ್ಕೃತಿಕ ಕಲಾ ತಂಡ: ಬಾಗಿನ ಅರ್ಪಣೆ ಕಾರ್ಯಕ್ರಮದ ಹಿನ್ನಲೆಯಲ್ಲಿ ಪೂಜಾ ಕುಣಿತ, ಕಂಸಾಳೆ, ತಮಟೆ, ನಗಾರಿ, ಡೊಳ್ಳು ಕುಣಿತ, ತಲೆ ಮೇಲೆ ಕಳಶ ಹೊತ್ತ ಮಹಿಳೆಯರ ತಂಡ ಸೇರಿದಂತೆ ಸಾಂಸ್ಕೃತಿಕ ಕಲಾತಂಡಗಳ ಮೆರಗು ಕಣ್ಮನ ಸೆಳೆದವು. ಎಲ್ಲಕ್ಕಿಂತ ಹೆಚ್ಚಾಗಿ ಕಾವೇರಿ ಜನ್ಮಸ್ಥಳ ಮಡಿಕೇರಿಯ ಭಾಗಮಂಡಲವನ್ನು ಸ್ಮರಿಸುವ ರೀತಿಯಲ್ಲಿ ಕೊಡಗು ಸಾಂಪ್ರದಾಯಕ ಉಡುಗೆ ತೊಟ್ಟು ಕೊಡವ ನೃತ್ಯ ಮಾಡಿದ ಕಲಾವಿದರ ತಂಡವು ಗಮನ ಸೆಳೆಯಿತು.

ನವವಧುವಿನಂತೆ ಕಂಗೊಳಿಸಿದ ಡ್ಯಾಂ: ಇಂದು ಅಣೆಕಟ್ಟೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮವಿದ್ದ ಹಿನ್ನಲೆಯಲ್ಲಿ ಮೊನ್ನೆಯಿಂದಲೂ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿದ್ದವು. ಕಳೆದ ರಾತ್ರಿ ಡ್ಯಾಂಗೆ ಅಳವಡಿಸಿದ್ದ ಲೈಟಿಂಗ್ ಗಮನ ಸೆಳೆದಿತ್ತು. ಇಂದು ಅಣೆಕಟ್ಟೆಯ ದ್ವಾರದಿಂದ ಬಾಗಿನ ಅರ್ಪಿಸುವ ಸ್ಥಳದ ವರೆಗೆ ರೆಡ್ ಕಾರ್ಪೆಟ್, ತಳಿರು ತೋರಣ, ಕನ್ನಡ ಬಾವುಟ ಅಳವಡಿಕೆ ಕಣ್ಮನ ಸೆಳೆದವು.

ಬಿಗಿ ಭದ್ರತೆ: ಡ್ಯಾಂನ ಸುತ್ತಲೂ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು. ಸಾವಿರಾರು ಪೊಲೀಸ್ ಸಿಬ್ಬಂದಿ, ಬಾಂಬ್ ನಿಷ್ಕ್ರೀಯ ದಳ, ಗುಪ್ತಚರ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯನಿರ್ವಹಿಸಿದರು.

ಡಿಕೆಶಿ ವಿಶೇಷ ಪ್ರಾರ್ಥನೆ: ಇಡೀ ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಗಮನ ಸೆಳೆದಿದ್ದು ಮಾತ್ರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಬಾಗಿನ ಅರ್ಪಣೆ ಸಂದರ್ಭದಲ್ಲಿ ಕಾವೇರಿಗೆ ಒಂದು ನಿಮಿಷಕ್ಕೂ ಹೆಚ್ಚು ಕಾಲ ಕೈ ಮುಗಿದು ನಿಂತ ಡಿಕೆಶಿ, ಇತ್ತ ಕಾವೇರಿ ಮಾತೆ ಪ್ರತಿಮೆಗೆ ಪೂಜೆ ಸಲ್ಲಿಸುವಾಗಲೂ ಎರಡು ನಿಮಿಷ ಪ್ರಾರ್ಥನೆ ಸಲ್ಲಿಸಿದರು. ನಾಡಿನ ಒಳಿತಿಗಾಗಿ ಪ್ರಾರ್ಥಿಸುವಂತೆ ಕಂಡರೂ, ಮುಖ್ಯಮಂತ್ರಿಯಾಗಿ ಮುಂದಿನ ಬಾರಿ ಬಾಗಿನ ಅರ್ಪಿಸುವ ಅವಕಾಶ ಕಲ್ಪಿಸು ತಾಯೇ ಎಂದು ಪ್ರಾರ್ಥಿಸಿರಬಹುದು ಎಂದು ಅಲ್ಲೇ ಇದ್ದ ಕೆಲವರು ಮಾತನಾಡಿಕೊಳ್ಳುತ್ತಿದ್ದದ್ದು ಕೇಳಿ ಬಂತು. ಇದಾದ ಬಳಿಕ ವೇದಿಕೆಯಲ್ಲಿ ಕೆಆರ್‌ಎಸ್, ಬೃಂದಾವನ ಅಭಿವೃದ್ಧಿಯ ಬಗ್ಗೆ ನೀಲಿನಕ್ಷೆಯನ್ನು ಪ್ರದರ್ಶಿಸಲಾಯಿತು.

ಶಾಸಕ ದರ್ಶನ್ ಗೈರು: ಇಂದು ನಡೆದ ಕೆಆರ್‌ಎಸ್‌ಗೆ ಬಾಗಿನ ಅರ್ಪಣೆ ಕಾರ್ಯಕ್ರಮಕ್ಕೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಗೈರಾಗಿದ್ದಾರೆ. ಸದ್ಯ ಅಮೆರಿಕಾದಲ್ಲಿರುವ ಕಾರಣ ದರ್ಶನ್ ಗೈರಾಗಿದ್ದಾರೆ ಎಂದು ತಿಳಿದು ಬಂದಿದೆ.

ತಾವು ಶಾಸಕರಾದ ಬಳಿಕ ಹತ್ತಕ್ಕೂ ಹೆಚ್ಚು ಬಾರಿ ಕಾರಣವೊಡ್ಡಿ ಅಮೆರಿಕಾಗೆ ಹೋಗಿರುವ ಶಾಸಕರು, ಎಲ್ಲಕ್ಕಿಂತ ಹೆಚ್ಚಾಗಿ ರೈತರು, ರೈತ ಸಂಘದ ಹೆಸರೇಳಿಕೊಂಡು ಚುನಾವಣೆ ಗೆದ್ದರು. ಆದರೆ ರೈತರ ಜೀವನಾಡಿ ಕೆಆರ್‌ಎಸ್‌ಗೆ ಬಾಗಿನ ಅರ್ಪಿಸುವ ಕಾರ್ಯಕ್ರಮಕ್ಕೆ ಗೈರಾಗಿರುವುದು, ಮೇಲುಕೋಟೆ ಕ್ಷೇತ್ರದ ಜನರು ಹಾಗೂ ರೈತರ ಅಸಮಾಧಾನಕ್ಕೆ ಕಾರಣವಾಗಿದೆ.

ಶಾಸಕ ದರ್ಶನ್ ಕಳೆದ ಬಾರಿಯೂ ಸಹ ಬಾಗಿನ ಅರ್ಪಣೆ ಕಾರ್ಯಕ್ರಮಕ್ಕೆ ಗೈರಾಗಿದ್ದರು. ಹಲವು ಸರ್ಕಾರಿ ಕಾರ್ಯಕ್ರಮಗಳು, ರಾಷ್ಟ್ರೀಯ ಹಬ್ಬಗಳು, ಇತ್ತೀಚೆಗೆ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೂ ಗೈರಾಗುವ ಮೂಲಕ ಸರ್ಕಾರಿ ಕಾರ್ಯಕ್ರಮಗಳಿಗೆ ಒಬ್ಬ ಶಾಸಕರು ಗೈರಾಗಿ ತಮ್ಮ ಜವಾಬ್ದಾರಿ ಮರೆತಂತೆ ಕಾಣುತ್ತಿದೆ.

ಈ ಸಂದರ್ಭದಲ್ಲಿ ಸಚಿವರಾದ ಎನ್.ಚಲುವರಾಯಸ್ವಾಮಿ, ಡಾ.ಹೆಚ್.ಸಿ.ಮಹದೇವಪ್ಪ ಎನ್.ಎಸ್.ಬೋಸರಾಜು, ಕೆ.ವೆಂಕಟೇಶ್, ಶಾಸಕರಾದ ಎ.ಬಿ.ರಮೇಶ ಬಂಡಿಸಿದ್ದೇಗೌಡ, ತನ್ವೀರ್ ಸೇಠ್, ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ರವಿಕುಮಾರ್ ಗಣಿಗ, ಕೆ.ಎಂ.ಉದಯ್, ರವಿಶಂಕರ್, ಕೆ.ಹರೀಶ್‌ಗೌಡ, ಮಂತರ್‌ಗೌಡ, ವಿಧಾನಪರಿಷತ್ ಸದಸ್ಯರಾದ ಕೆ.ವಿವೇಕಾನಂದ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ತಮ್ಮಯ್ಯ, ರಾಜ್ಯ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪ ಅಮರ್‌ನಾಥ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಂಡ್ಯ ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಂಪತ್‌ರಾಜ್, ಮಂಡ್ಯ ಮುಡಾ ಅಧ್ಯಕ್ಷ ನಹೀಂ, ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ್ ಗುಪ್ತ, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ. ಸಿಇಓ ಕೆ.ಆರ್.ನಂದಿನಿ, ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಪ್ರಾದೇಶಿಕ ಆಯುಕ್ತ ರಮೇಶ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಅಕ್ಟೋಬರ್ - ನವೆಂಬರ್‌ಗೆ ರಾಷ್ಟ್ರ ರಾಜಕಾರಣಕ್ಕೆ ಬನ್ನಿ...

ನಂತರ ಖರ್ಗೆ, ಶಾಸಕರ ಧ್ವನಿಗೆ ಸ್ಪಂದಿಸಿ ತಕ್ಷಣವೇ ಬೇಡಿಕೆಗಳನ್ನು ಈಡೇರಿಸಿ ಎಂದಷ್ಟೇ ಹೇಳಿದ್ದಾರೆ. ಎಐಸಿಸಿ ಅಧ್ಯಕ್ಷರ ಸಂದೇಶ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ತಲುಪಿತು. ಅಷ್ಟೇ ಅಲ್ಲದೆ, ಎರಡು ದಿನಗಳ ರಾಜ್ಯ ಪ್ರವಾಸಕ್ಕೆ ಬಂದಿರುವ ಎಐಸಿಸಿ ಅಧ್ಯಕ್ಷರು, ನಿನ್ನೆ ರಾತ್ರಿ ಉಪಮುಖ್ಯಮಂತ್ರಿ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಸಮಾಲೋಚನೆ ಮಾಡಿದರು. ಅಧ್ಯಕ್ಷರ ಭೇಟಿ ನಂತರ ಹೊರಬಂದ ಶಿವಕುಮಾರ್ ಅವರಲ್ಲಿ ಎಲ್ಲಿಲ್ಲದ ಉತ್ಸಾಹ ಕಂಡುಬಂದಿತು.

ಖರ್ಗೆ ಅವರ ಹೇಳಿಕೆ ಮುಖ್ಯಮಂತ್ರಿ ಜೊತೆಗೆ ದೆಹಲಿಗೆ ತೆರಳಿದ್ದ ಸಚಿವರಾದ ಕೆ.ಜೆ.ಜಾರ್ಜ್, ಡಾ.ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ ಅವರುಗಳಿಗೆ ದೊಡ್ಡ ಶಾಕ್ ನೀಡಿದೆ. ಇವರುಗಳು ದೆಹಲಿಗೆ ತೆರಳಿದ ಉದ್ದೇಶವೇ ಬೇರೆ ಆಗಿತ್ತು, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಜೊತೆಗೆ ಸಿದ್ದರಾಮಯ್ಯ ಅವರನ್ನು ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಸಿ ಎಂದು ಪಕ್ಷದ ವರಿಷ್ಠರಿಗೆ ಮನವಿ ಮಾಡಿಕೊಳ್ಳಲು ನಿಷ್ಠಾವಂತ ಸಚಿವರು ಖರ್ಗೆ ಭೇಟಿ ಮಾಡಿದ್ದರು. ಇದೆಲ್ಲವನ್ನು ಮೊದಲೇ ಅರಿತಿದ್ದ ಅನುಭವಿ ರಾಜಕಾರಣಿಯಲ್ಲಿ ಮಲ್ಲಿಕಾರ್ಜುನ ಖರ್ಗೆ, ಒಂದೇ ಮಾತಿನಲ್ಲಿ ಸಂದೇಶ ನೀಡುತ್ತಿದ್ದಂತೆ ಸಚಿವರುಗಳಿಗೆ ಬೇರೇ ಮಾತೇ ಹೊರಡದಂತೆ ಆಯಿತು.

ಖರ್ಗೆ ಅವರ ಹೇಳಿಕೆ ನಂತರ ನಗರಕ್ಕೆ ಹಿಂತಿರುಗಿದ ಸಚಿವರಾದ ಸತೀಶ್ ಜಾರಕಿಹೊಳಿ ಜೊತೆ ಕೆ.ಎನ್.ರಾಜಣ್ಣ ಸಹ ಸೆಪ್ಟೆಂಬರ್‌ಗೆ ರಾಜ್ಯ ರಾಜಕಾರಣದಲ್ಲಿ ಕ್ರಾಂತಿ ನಡೆಯಲಿದೆ ಎಂದಿದ್ದರು.

ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಜಾರಕಿಹೊಳಿ, ಸರ್ಕಾರದಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆ ಆಗಲಿದೆ ಎಂದು ಹೇಳುವ ಮೂಲಕ ಅನುಮಾನಾಸ್ಪದ ಸಂದೇಶ ನೀಡಿದ್ದು, ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿತು.

ದೆಹಲಿಯಿಂದ ಮುಖ್ಯಮಂತ್ರಿ ಹಿಂದಿರುಗುತ್ತಿದ್ದಂತೆ, ಕಾಂಗ್ರೆಸ್ ಶಾಸಕರ ಕ್ಷೇತ್ರದ ಅಭಿವೃದ್ಧಿಗೆ ತಲಾ 50 ಕೋಟಿ ರೂ. ಬಿಡುಗಡೆ ಮಾಡಿದರೆ, ಮತ್ತೊಂದೆಡೆ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಕರ್ನಾಟಕಕ್ಕೆ ಆಗಮಿಸಿ, ಶಾಸಕರ ಮನದಾಳದ ಮಾತುಗಳನ್ನು ಆಲಿಸುತ್ತಿದ್ದಾರೆ.

ಸರ್ಕಾರ ಬಂಡೆಯಂತೆ ಗಟ್ಟಿಯಾಗಿದೆ!

ಸಕರಾತ್ಮಕ ಪ್ರತಿಕ್ರಿಯೆ ನೀಡಿದರು. ನಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟು ಮಾಡಿ ಬಿರುಕು ಮೂಡಿಸುವ ಪ್ರಯತ್ನ ಮಾಡಿದರೂ ಅದು ಯಶಸ್ವಿಯಾಗುವುದಿಲ್ಲ. ನಾವಿಬ್ಬರೂ ಒಗ್ಗಟ್ಟಾಗಿದ್ದೇವೆ, ಒಂದಾಗಿ ಸರ್ಕಾರ ನಡೆಸಲಿದ್ದೇವೆ ಎಂದು ಸಿದ್ದರಾಮಯ್ಯ, ವಿರೋಧ ಪಕ್ಷಗಳಿಗೆ ಟಾಂಗ್ ನೀಡಿದರು.

ನಮ್ಮ ಸರ್ಕಾರವನ್ನು ಟೀಕೆ ಮಾಡುವ ಶ್ರೀರಾಮುಲು ಎಷ್ಟು ಚುನಾವಣೆ ಸೋತಿದ್ದಾನೆ ಗೊತ್ತಾ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಎರಡು ಚುನಾವಣೆ ಸೋತಿರುವ ಶ್ರೀರಾಮುಲು ನಮ್ಮ ಬಗ್ಗೆ ಮಾತನಾಡಲು ಯಾವ ನೈತಿಕತೆ ಹೊಂದಿದ್ದಾನೆ ಎಂದು ಏಕ ವಚನದಲ್ಲಿ ವಾಗ್ದಾಳಿ ನಡೆಸಿದರು. ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಇದಕ್ಕೆಲ್ಲಾ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ಯಾರು ಏನೇ ಹೇಳಲಿ, ಈ ಬಾರಿಯ ದಸರಾ ಜಂಬೂ ಸವಾರಿಯನ್ನು ಕೂಡ ನಾನೇ ಉದ್ಘಾಟನೆ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು. ರಣದೀಪ್ ಸಿಂಗ್ ಸುರ್ಜೆವಾಲ ಅವರು ಕಾಂಗ್ರೆಸ್ ಪಕ್ಷದ ಕರ್ನಾಟಕದ ಉಸ್ತುವಾರಿ ಹೊಣೆ ಹೊತ್ತಿದ್ದಾರೆ. ಇಂದು ಕಾಂಗ್ರೆಸ್ ಶಾಸಕರ ಕಷ್ಟ ಸುಖ ವಿಚಾರಿಸುತ್ತಿದ್ದಾರೆ. ಅಲ್ಲದೆ ಪಕ್ಷ ಸಂಘಟನೆ ಮಾಡುವ ಬಗ್ಗೆ ಶಾಸಕರಿಂದ ಸಲಹೆ ಕೂಡ ಕೇಳುತ್ತಿದ್ದಾರೆ. ಅದು ಅವರ ಕೆಲಸವಾಗಿದ್ದು, ಇದರಲ್ಲಿ ಬೇರೆ ವಿಶೇಷವಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು.

ಸಾವಿನ ಬಗ್ಗೆ ತಜ್ಞರಿಂದ ವರದಿ ಪಡೆಯುವೆ

ಸಾಲುತ್ತಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು. ಕಾವೇರಿ ನ್ಯಾಯ ಮಂಡಳಿ 2018 ರಲ್ಲಿ 177.25 ಟಿಎಂಸಿ ನೀರನ್ನು ತಮಿಳುನಾಡಿಗೆ ನೀಡುವಂತೆ ಆದೇಶಿಸಿದೆ. ಒಂದು ವರ್ಷ ಹೊರತುಪಡಿಸಿ ಪ್ರತಿ ವರ್ಷ ತಮಿಳುನಾಡಿಗೆ ಅಗತ್ಯಕ್ಕಿಂತ ಹೆಚ್ಚು ನೀರು ಬಿಡುತ್ತಿದ್ದೇವೆ. ಕಳೆದ ವರ್ಷ ತಮಿಳುನಾಡಿಗೆ 303 ಟಿಎಂಸಿ ನೀರು ಬಿಡುಗಡೆ ಮಾಡಿದ್ದು, ಈ ತಿಂಗಳಲ್ಲಿ 9 ಟಿಎಂಸಿ ನೀರು ಬಿಡುಗಡೆ ಮಾಡುವಂತೆ ನ್ಯಾಯಾಧೀಕರಣ ನಿಗದಿ ಮಾಡಿದ್ದರೂ ನಾವು ಈಗಾಗಲೇ 22 ಟಿಎಂಸಿ ನೀರು ಬಿಟ್ಟಿದ್ದೇವೆ ಎಂದು ಅಂಕಿ ಅಂಶಗಳ ವಿವರಣೆ ನೀಡಿದರು. ಆದರೆ ಮಳೆಯಾಗದೆ ಸಂಕಷ್ಟದ ಸಮಯದಲ್ಲಿ ನ್ಯಾಯಯುತವಾಗಿ ನೀರಿನ ಹಂಚಿಕೆಯಾಗಬೇಕು. ಕಾವೇರಿಯಿಂದ ಮತ್ತಷ್ಟು ನೀರಾವರಿ ಪ್ರದೇಶ ವಿಸ್ತರಿಸಲು ಮೇಕೆದಾಟು ಯೋಜನೆಯೊಂದೇ ಮುಂದಿರುವ ದಾರಿ. ಆದರೆ ಈ ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡದೆ ಸತಾಯಿಸುತ್ತಿದೆ ಎಂದು ಸಿದ್ದರಾಮಯ್ಯ ಆರೋಪಿಸಿದರು.

ಹಾಸನದಲ್ಲಿ ಹೃದಯಾಘಾತ ಹೆಚ್ಚಳ: ವಿಶೇಷ ಸಮಿತಿ ರಚಿಸಿದ ರಾಜ್ಯ ಸರ್ಕಾರ

ಬೆಂಗಳೂರು, ಜೂ.30– ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಈ ಸರಣಿ ಸಾವು ರಾಜ್ಯದಲ್ಲಿ ಆತಂಕ ಸೃಷ್ಟಿಸಿದೆ. ಇದರಿಂದ ಎಚ್ಚೆತ್ತುಕೊಂಡ ರಾಜ್ಯ ಆರೋಗ್ಯ ಇಲಾಖೆ ಜಯದೇವ ನಿರ್ದೇಶಕ ಡಾ. ರವಿಂದ್ರಾನಾಥ್ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದು, ಹಾಸನ ಜಿಲ್ಲೆಯ ಜನರ ಸಾವಿನ ಬಗ್ಗೆ ವರದಿ ನೀಡುವಂತೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತಾ ಸಮಿತಿಗೆ ಸೂಚಿಸಿದ್ದಾರೆ.

ಹಾಸನ ಜಿಲ್ಲೆ 18ಕ್ಕೂ ಹೆಚ್ಚು ಡೆತ್ ರಿಪೋರ್ಟ್ ಆಗಿದೆ. ಆರೋಗ್ಯ ಇಲಾಖೆಯಿಂದ ಸಿಸ್ಟಮ್ ಇಲ್ಲ. ನಿಖರ ಮಾಹಿತಿ ಕಲೆ ಹಾಕಲು ಸಾಧ್ಯವಿಲ್ಲ. ಕೆಲ ಖಾಯಿಲೆಗಳ ಬಗ್ಗೆ ಮಾತ್ರ ನಮ್ಮ ಬಳಿ ರಿಪೋರ್ಟ್ ಇದೆ. ಮುಂದಿನ ದಿನಗಳಲ್ಲಿ ಪ್ರತಿ ಸಾವಿನ ಬಗ್ಗೆ ರಿಪೋರ್ಟ್ ಆಗಬೇಕಿದೆ. ಸಾವು ಹೆಚ್ಚಳ ಏಕಾಏಕಿ ಅಂತ ಹೇಳಲು ಸಾಧ್ಯವಿಲ್ಲ. ನಮ್ಮ ಡೇಟಾ ಪ್ರಕಾರ ಇಲ್ಲ. 15 ದಿನಗಳ ಹಿಂದೆ ಪ್ರಿಮಿಲರಿ ಮಾಹಿತಿ ಪ್ರಕಾರ ಡಿಸಿ ಅಧ್ಯಕ್ಷತೆಯಲ್ಲಿ ವರದಿ ಮಾಡಿದೆ ಎಂದು ಹರ್ಷಗುಪ್ತಾ ತಿಳಿಸಿದ್ದಾರೆ.

18 ಸಾವಿನ ಪೈಕಿ 9 ಜನರು ಸಾವನ್ನಪ್ಪಿದ್ದವರು 55 ವರ್ಷ ಮೇಲ್ಪಟ್ಟವರು. ಅವರಿಗೆ ಬೇರೆ ಬೇರೆ ತರದ ಖಾಯಿಲೆಗಳು ಇತ್ತು. 5 ಜನ 20 ಹರೆಯದವರು ಎಂದು ತಿಳಿದಿದೆ. 1 ಸಾವು ಹಾಸನ ದಲ್ಲಿ ಆಗಿದೆ. ಇನ್ನುಳಿದ 4 ಸಾವು ಬೆಂಗಳೂರಿನಲ್ಲಿ ಆಗಿದೆ. ಆದರೆ ಈ 4 ಜನ ಹಾಸನ ಮೂಲದವರಾಗಿದ್ದಾರೆ. ಅವರಿಗೆ ಟೈಪ್ 1 ಡಯಾಬಿಟಿಸ್ ಇತ್ತು, ಕ್ರಾನಿಲ್ ಡಿಸೀಸ್ ಇತ್ತು. ಬಹುಪಾಲು ಸಾವು ಮನೆಯಲ್ಲಿ ಸಂಭವಿಸಿದೆ. ಹೀಗಾಗಿ ಹಳೆ ಮೆಡಿಕಲ್ ರೆಕಾರ್ಡ್ ಪರೀಕ್ಷಿಸ ಬೇಕಿದೆ. 9 ಸಾವಿನ ಬಗ್ಗೆ ತಿಳಿಯಲು ಕಮಿಟಿ ರಚನೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಫೆಬ್ರವರಿ ತಿಂಗಳಲ್ಲಿ ಈ ಸಮಿತಿ ರಚನೆ ಆಗಿತ್ತು. ಕೋವಿಡ್‌ನಿಂದ ಹೀಗಾಗಿದೆಯಾ ಎಂಬ ಮಾಹಿತಿ ಬಗ್ಗೆ ಅಧ್ಯಯನ ನಡೆಸಿದೆ. ಅದೇ ಕಮಿಟಿಗೆ ಹಾಸನದ ಮೆಡಿಕಲ್ ರಿಪೋರ್ಟ್ ತರಿಸಿ ಅಧ್ಯಯನ ನಡೆಸಲು ಸೂಚಿಸಿದ್ದೇವೆ. 10 ದಿನಗಳ ಒಳಗಾಗಿ ವರದಿ ಕೊಡಲು ತಿಳಿಸಿದ್ದೇವೆ ಎಂದು ಹೇಳಿದರು. 20 ವರ್ಷದ ಯುವತಿಗೆ ಟೈಪ್ 1 ಡಯಾಬಿಟಿಸ್, ಕ್ರಾನಿಕ್ ಕಿಡ್ನಿ ಡಿಸೀಸ್ ಇರೋದು ತಿಳಿದಿದೆ. ಜನಟಿಕ್ ಇದೆಯಾ, ಅನ್ ಕಂಟ್ರೋಲ್ಡ್ ಡಿಸೀಸ್ ಇತ್ತಾ ಎಂದು ಅಧ್ಯಯನ ಮಾಡಬೇಕಿದೆ.

ಮೈಸೂರು ಮಿತ್ರ

ಮಂಗಳವಾರ 1 ಜುಲೈ 2025

ಸರ್ಕಾರಿ ಬಸ್ ಟೈರ್ ಸ್ಫೋಟ

10ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯ





ನಂಜನಗೂಡು, ಜೂ.30– ಸಾರಿಗೆ ಬಸ್ ಟೈರ್ ಸ್ಫೋಟಗೊಂಡ ಪರಿಣಾಮ ಬಸ್‌ನಲ್ಲಿದ್ದ 10ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿರುವ ಘಟನೆ ತಾಲೂಕಿನ ಹೆಡಿಯಾಲ ಬಳಿ ನಡೆದಿದೆ.

ಬೇಗೂರು–ಹೆಡಿಯಾಲ–ಸರಗೂರು ನಡುವೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ನ ಟೈರ್ ಸ್ಫೋಟಗೊಂಡ ರಭಸಕ್ಕೆ ಚಕ್ರದ ಬಳಿ ಪ್ರಯಾಣಿಕರು ಕುಳಿತುಕೊಳ್ಳುವ ಸೀಟ್ ಛಿದ್ರವಾಗಿದೆ. ಅಲ್ಲದೇ ಸೀಟ್ ಮೇಲೆ ಕುಳಿತಿದ್ದ ಶಾಯಿದಾ ಬಾನು ಎಂಬ ಮಹಿಳೆಗೆ ಗಂಭೀರ ಗಾಯವಾಗಿದೆ. ಜೊತೆಗೆ 10ಕ್ಕೂ ಹೆಚ್ಚು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸ್ಥಳೀಯರು ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬಸ್ ನೊಂದಣಿ ಸಂಖ್ಯೆ KA.10 F.0272 ಆಗಿದ್ದು, ಸ್ಥಳೀಯರು ಆನ್‌ಲೈನ್‌ನಲ್ಲಿ ಈ ನೋಂದಣಿ ಸಂಖ್ಯೆ ಪರಿಶೀಲಿಸಿದಾಗ 2019 ರಿಂದ ಬಸ್‌ನ ಇನ್ಸೂರೆನ್ಸ್ ರಿನಿವಲ್ ಆಗಿಲ್ಲ ಎಂಬ ಅಚ್ಚರಿ ಮಾಹಿತಿ ಬಯಲಾಗಿದೆ. ಸರ್ಕಾರಿ ವಾಹನವೇ ನಿಯಮ ಉಲ್ಲಂಘಿಸಿರುವುದು ನಿಜವಾಗಲೂ ನಾಚಿಕೆಗೇಡಿನ ಸಂಗತಿಯಾಗಿದೆ. ಹೆಚ್ಚಿನ ಅಪಘಾತ ಸಂಭವಿಸಿದಲ್ಲಿ ಪ್ರಯಾಣಿಕರ ಗತಿ ಏನು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಾಸಕ ಅನಿಲ್ ಆಪ್ತರಿಂದ ರಸ್ತೆ ಬದಿ ಬೃಹತ್ ಆಲದ ಮರ ಹನನ

ಕ್ರಮಕ್ಕೆ ಆಗ್ರಹಿಸಿ ಮಾಜಿ ಶಾಸಕ ಚಿಕ್ಕಣ್ಣ ಪ್ರತಿಭಟನೆ

ಹೆಚ್.ಡಿ.ಕೋಟೆ, ಜೂ.30– ಶಾಸಕ ಅನಿಲ್ ಚಿಕ್ಕಮಾದು ಅವರ ಆಪ್ತರು ಅಕ್ರಮವಾಗಿರುವ ಕಂದಾಯ ಇಲಾಖೆ ಜಾಗವನ್ನು ಪುರಸಭೆ ಮೂಲಕ ಸಕ್ರಮ ಮಾಡಿಕೊಳ್ಳಲು ರಸ್ತೆ ಬದಿಯಲ್ಲಿದ್ದ ಬೃಹತ್ ಆಲದ ಮರ ಕಡಿದು ಹಾಕಿದ್ದಾರೆ. ಹೀಗಾಗಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ನೇತೃತ್ವದಲ್ಲಿ ಮುಖಂಡರು ಪಟ್ಟಣದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.



ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಬಳಿ ಮಾಜಿ ಶಾಸಕ ಚಿಕ್ಕಣ್ಣ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಹುಣಸೂರು–ಬೇಗೂರು ಮುಖ್ಯರಸ್ತೆ ತಡೆದು ಪ್ರತಿಭಟನೆ ನಡೆಸಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಬಳಿ ರಸ್ತೆ ಬದಿಯಲ್ಲಿದ್ದ ಬೃಹತ್ ಆಲದ ಮರದ ನೆರಳನ್ನು ಆಸ್ಪತ್ರೆಗೆ ಆಗಮಿಸುವ ರೋಗಿಗಳು, ಸಾರ್ವಜನಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ವ್ಯಾಪಾರಿಗಳು, ಚಾಲಕರು ಸೇರಿದಂತೆ ಎಲ್ಲಾ ವರ್ಗದ ಜನರು ಅವಲಂಬಿಸಿದ್ದರು. ಆದರೆ ಅರಣ್ಯ ಇಲಾಖೆ ಮತ್ತು ಪುರಸಭೆ ಅಧಿಕಾರಿಗಳ ಸಹಕಾರದಲ್ಲಿ ಶಾಸಕ ಅನಿಲ್ ಅವರ ಆಪ್ತರಾಗಿರುವ ಪ್ರದೀಪ್ ಸೇರಿದಂತೆ ಇತರರು ಅಕ್ರಮವಾಗಿರುವ ಕಂದಾಯ ಇಲಾಖೆ ಜಾಗವನ್ನು ಪುರಸಭೆ ಮೂಲಕ ಸಕ್ರಮ ಮಾಡಿಕೊಳ್ಳಲು ಮರ ಕಡಿದು ಹಾಕಿದ್ದಾರೆ. ಈ ಸಂಬಂಧ ಉನ್ನತ ತನಿಖೆ ನಡೆದು ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿ ನೀಡುವವರೆಗೂ ಪ್ರತಿಭಟನೆ ನಿಲ್ಲುವ ಪ್ರಶ್ನೆ ಇಲ್ಲ ಎಂದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ಗಂಗಾಧರ್ ಏಕಾಏಕಿ ರಸ್ತೆ ತಡೆದು ಪ್ರತಿಭಟಿಸುವುದು ಸರಿಯಲ್ಲ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಮಿಸಿ ನಿಮ್ಮ ಸಮಸ್ಯೆಗೆ ಸ್ಪಂದಿಸಲಿದ್ದಾರೆಂದು ಮನವೊಲಿಸಿದ ಪರಿಣಾಮ ಪ್ರತಿಭಟನೆ ಕೈಬಿಟ್ಟರು.

ಈ ವೇಳೆ ಸ್ಥಳಕ್ಕಾಮಿಸಿದ ಅರಣ್ಯ ಇಲಾಖೆ ಅಧಿಕಾರಿ ನಿತೀಶ್ ಕುಮಾರ್ ಹಾಗೂ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಅವರನ್ನು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ತರಾಟೆ ತೆಗೆದುಕೊಂಡು ಮಾತನಾಡಿ, ಮರ ಇದ್ದ ಜಾಗ ಕಂದಾಯ ಇಲಾಖೆಗೆ ಸೇರಿದ್ದು. ಶಾಸಕರ ಆಪ್ತರಾಗಿರುವ ಪ್ರದೀಪ್ ಹಾಗೂ ಇತರರೊಂದಿಗೆ ಶಾಮೀಲಾಗಿ ಬೃಹತ್ ಆಲದ ಮರದ ಹನನಕ್ಕೆ ಕಾರಣರಾಗಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಸೀಲ್ದಾರ್ ಶ್ರೀನಿವಾಸ್ ಪ್ರಕರಣ ಸಂಬಂಧ ದೂರು ನೀಡಿದ್ದಲ್ಲಿ ತನಿಖೆ ನಡೆಸಿ ಸತ್ಯಾಂಶ ಬಯಲಿಗೆ ತಂದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದರು. ಈ ವೇಳೆ ಮಾಜಿ ಶಾಸಕ ಚಿಕ್ಕಣ್ಣ ಪ್ರಕರಣ ಸಂಬಂಧ ನಾನೇ ದೂರು ನೀಡುತ್ತೇನೆ. ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದ ಅವರು ಪಟ್ಟಣ ಮತ್ತು ತಾಲೂಕಿನಲ್ಲಿ ನಡೆಯುವ ಅಕ್ರಮಗಳಿಗೆ ಕಡಿವಾಣ ಹಾಕಲು ಇಂತಹ ಹೋರಾಟ ಅನಿವಾರ್ಯ ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ರಾಜೇಂದ್ರ ಗೋಪಾಲಸ್ವಾಮಿ, ಸಿ.ವಿ.ನಾಗರಾಜು, ನರಸಿಂಹೇಗೌಡ, ಪುರಸಭಾ ಸದಸ್ಯ ಮಿಲ್ ನಾಗರಾಜು, ನಂಜಪ್ಪ, ಚಾಕಳ್ಳಿ ಕೃಷ್ಣ, ಯಶ್ವಂತ್, ನಿಂಗಣ್ಣ, ಮೆಕಾನಿಕ್ ಸೂರಿ, ವಿವೇಕ, ಪ್ರಕಾಶ್, ಬೆಳಗನಹಳ್ಳಿ ಬಸವರಾಜು, ಗುಂಡತ್ತೂರು ಪ್ರಕಾಶ, ಮಹೇಶ, ಶಿವಯ್ಯ, ನಾಗ ನಾಯಕ, ಗೋವಿಂದೇಗೌಡ, ವಡ್ಡರಗುಡಿ ರಘು, ಓಕೆ ಮಹೇಂದ್ರ ಕುಮಾರಸ್ವಾಮಿ, ಕೆಇಬಿ ದೊರೆ, ಶಿವರಾಜ್, ಮಹೇಂದ್ರ ನಾಗರಾಜು, ಚೆಲುವ, ಮಾದೇಗೌಡ, ಶಿವಕುಮಾರ್, ರಾಜೇಂದ್ರ, ಕೆ.ಎಸ್.ಗೌಡ, ಗಣೇಶ, ಮಲ್ಲೇಶ್, ಸೋಮನಾಯಕ, ಮಂಜುಶೆಟ್ಟಿ, ನಟರಾಜ್, ವೈದ್ಯನಾಥ್, ಜವರೇಗೌಡ, ಮಹೇಶ ಸೇರಿದಂತೆ ಇತರರಿದ್ದರು.

ನಾಲ್ವಡಿ ಜಯಂತಿ: ಮಕ್ಕಳಿಗೆ ನೋಟ್‌ಬುಕ್ ವಿತರಣೆ

ತಿ.ನರಸೀಪುರ, ಜೂ.30– ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತಾಲೂಕಿನ ಶ್ರೀಮಹರ್ಷಿ ವಾಲ್ಮೀಕಿ ಟ್ರಸ್ಟ್ ನೋಟ್ ಬುಕ್ ವಿತರಿಸುವ ಸಮಾಜಮುಖಿ ಕಾರ್ಯ ಶ್ಲಾಘನೀಯ ಎಂದು ಶ್ರೀಕ್ಷೇತ್ರ ಬೊಪ್ಪೇಗೌಡನಪುರ ಮಠದ ಆಡಳಿತಾಧಿಕಾರಿ ಬಿ.ಪಿ.ಭರತ್ ಅರಸ್ ತಿಳಿಸಿದರು.



ಬೊಪ್ಪೇಗೌಡನಪುರ ಮಠದ ಆಡಳಿತಾಧಿಕಾರಿ ಬಿ.ಪಿ.ಭರತ್ ಅರಸ್ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಿದರು.

ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತ್ಯೋತ್ಸವದ ಅಂಗವಾಗಿ ತಾಲೂಕಿನ ಯಡದೊರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ನೋಟ್‌ಬುಕ್ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮೀಣ ವಿದ್ಯಾರ್ಥಿಗಳು ನಿಜಕ್ಕೂ ಪ್ರತಿಭಾವಂತರು. ಅವರಿಗೆ ಗುಣಮಟ್ಟದ ಶಿಕ್ಷಣ ದೊರೆತರೆ ಉತ್ತಮ ಪ್ರಜೆಗಳಾಗಿ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು. ತಾಲೂಕಿನ ಗ್ರಾಮವೊಂದರಲ್ಲಿ ಸ್ಥಾಪನೆಯಾಗಿರುವ ವಾಲ್ಮೀಕಿ ಟ್ರಸ್ಟ್ ಅಧ್ಯಕ್ಷರು ತಮ್ಮ ಸ್ನೇಹಿತರೊಡಗೂಡಿ ಅವಿರತ ಶ್ರಮದ ಮೂಲಕ ಗ್ರಾಮೀಣ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಪಠ್ಯ ಸಾಮಾಗ್ರಿ ಉಚಿತವಾಗಿ ಹಂಚುತ್ತಿರುವುದು ಸಮಾಜಕ್ಕೆ ಮಾದರಿಯಾಗಿದೆ ಎಂದರು.

ಗ್ರಾಮೀಣ ಮಕ್ಕಳಿಗೂ ಸರಿಯಾದ ಅವಕಾಶಗಳು ದೊರೆಯಬೇಕು. ಮಕ್ಕಳ ಶಿಕ್ಷಣಕ್ಕೆ ಯಾವುದೇ ಅಡ್ಡಿಯಾಗಬಾರದು. ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಬಡ ಕುಟುಂಬಗಳ ಮಕ್ಕಳೇ ಸರ್ಕಾರಿ ಶಾಲೆಗೆ ಆಗಮಿಸುತ್ತಿದ್ದು, ನೋಟ್‌ಬುಕ್ ಸೇರಿದಂತೆ ಇತರ ಶಾಲಾ ಸಾಮಗ್ರಿ ದೊರೆತಾಗ ಅವರ ಕಲಿಕೆಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕರ ಸೇವೆ ಶ್ಲಾಘನೀಯ ಎಂದರು.

ಕರ್ನಾಟಕ ರಾಜ್ಯ ಜೆಡಿಎಸ್ ಮಾಧ್ಯಮ ವಕ್ತಾರ ಹಾಗೂ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, ನಾಲ್ವಡಿ ಕೃಷ್ಣರಾಜರ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನ ಮಾದರಿ ಸಂಸ್ಥಾನವಾಗಿತ್ತು. ನಾಲ್ವಡಿಯವರು ಸಾಮಾಜಿಕ ಕಾನೂನುಗಳ ಹರಿಕಾರ ಎಂದೇ ಹೆಸರಾಗಲು ಅವರು ನೀಡಿದ ಕೊಡುಗೆಗಳೇ ಕಾರಣ. ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ ಸೇರಿದಂತೆ ರಾಜ್ಯದ ಆಮುಲಾಗ್ರ ಅಭಿವೃದ್ಧಿಗೆ ಕೃಷ್ಣರಾಜರು ಕಾರಣರಾದರು ಎಂದರು.

ಅವರ 141ನೇ ಜಯಂತ್ಯೋತ್ಸವದಲ್ಲಿ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಿಸುತ್ತಿರುವ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಕಾರ್ಯ ನಿಜಕ್ಕೂ ಶ್ಲಾಘನೀಯ. ಗ್ರಾಮೀಣ ಪ್ರದೇಶದ ಕೆಲ ಕುಟುಂಬದಲ್ಲಿ ಈಗಲೂ ಬಡತನ ಕಿತ್ತು ತಿನ್ನುತ್ತಿದೆ. ಶಾಲಾ ಪಠ್ಯಗಳನ್ನು ಕೊಳ್ಳಲಾಗದೇ ಪೋಷಕರು ಪರದಾಡುವ ಪರಿಸ್ಥಿತಿ ಇದೆ. ಇಂತಹ ಕಾಲಘಟ್ಟದಲ್ಲಿ ಟ್ರಸ್ಟ್‌ಗಳು, ಸಂಸ್ಥೆಗಳು, ನೋಟ್‌ಬುಕ್ ವಿತರಿಸುವ ಕಾರ್ಯ ಕ್ರಮ ಹಮ್ಮಿಕೊಂಡು ಸಮಾಜ ಸೇವೆ ಮಾಡುತ್ತಿರುವುದು ಮೆಚ್ಚುಗೆಗೆ ಅರ್ಹವಾಗಿದೆ. ಇಂತಹ ಸಮಾಜಮುಖಿ ಕಾರ್ಯಕ್ರಮಗಳು ಟ್ರಸ್ಟ್ ವತಿಯಿಂದ ಹೆಚ್ಚಾಗಿ ನಡೆಯಲಿ ಆ ಮೂಲಕ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗಲಿ ಎಂದು ಆಶಿಸಿದರು.

ಪತ್ರಕರ್ತ ಎನ್.ಎ.ಚೌಧರಿ ಮಾತನಾಡಿದರು. ಯಡದೊರೆ ಶಾಲಾ ಶಿಕ್ಷಕಿ ಎಂ.ಎನ್.ಪವಿತ್ರ ವಿಚಾರ ಮಂಡಿಸಿದರು. ಎನ್.ಎ.ಚೌಧರಿ ಶಾಲೆ ಮಕ್ಕಳಿಗೆ ಶನಿವಾರದ ಸಮವಸ್ತ್ರ ಹಾಗೂ ಕ್ರೀಡಾಪಟುಗಳಿಗೆ ಉಚಿತವಾಗಿ ಶೂ ಕೊಡಿಸುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ.ವೈ.ಡಿ.ರಂಗನಾಥ್, ತಾಲೂಕು ನಾಯಕರ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಎಂ.ಜೆ.ಶಿವಸ್ವಾಮಿ, ಸುಬ್ಬನಾಯಕ, ನಿರಂಜನ್, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್ ಸೇರಿದಂತೆ ಮತ್ತಿತರರಿದ್ದರು.

ನದಿಗೆ ಹಾರಿ ಕೇಬಲ್ ಆಪರೇಟರ್ ಆತ್ಮಹತ್ಯೆ



ಹುಣಸೂರು, ಜೂ.30– ನದಿಗೆ ಹಾರಿ ಕೇಬಲ್ ಆಪರೇಟರ್ ಆತ್ಮಹತ್ಯೆ ಮಾಡಿಕೊಂಡಿದ್ದು, ಶವಕ್ಕಾಗಿ ಅಗ್ನಿಶಾಮಕ ಸಿಬ್ಬಂದಿ ನದಿಯಲ್ಲಿ ಹುಡುಕಾಟ ನಡೆಸುತ್ತಿದ್ದಾರೆ.

ನಗರಕ್ಕೆ ಸಮೀಪದ ಮೂಕನಹಳ್ಳಿ ನಿವಾಸಿ ಕೇಬಲ್ ಆಪರೇಟರ್ ಪುರುಷೋತ್ತಮ್(48) ಆತ್ಮಹತ್ಯೆ ಮಾಡಿಕೊಂಡ ವರು. ಈತ ಗ್ರಾಮದ ಡೈರಿ ನಿರ್ದೇಶಕರಾಗಿದ್ದರು. ಕೇಬಲ್ ಆಪರೇಟರ್ ವೃತ್ತಿ ನಡೆಸುತ್ತಿದ್ದರಲ್ಲದೆ ಆಟೋ, ಟ್ರಾಕ್ಟರ್ ಇಟ್ಟುಕೊಂಡಿದ್ದರು. ಶನಿವಾರ ರಾತ್ರಿ 9ರ ವೇಳೆಗೆ ಹೊಸ ಸೇತುವೆ ಬಳಿ ಆಟೋ ನಿಲ್ಲಿಸಿ, ಮೊಬೈಲ್, ಚಪ್ಪಲಿಯನ್ನು ಅಲ್ಲೇ ಬಿಟ್ಟು ಲಕ್ಷ್ಮಣತೀರ್ಥ ನದಿಗೆ ಹಾರಿದ್ದಾರೆ. ದಾರಿ ಹೋಕರು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಘಟನಾ ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲಿಸಿದ ವೇಳೆ ಆಟೋ ಪುರುಷೋತ್ತಮ್ ಅವರಿಗೆ ಸೇರಿದ್ದು ಎಂದು ತಿಳಿದು ಬಂದಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ರಾತ್ರಿಯಾಗಿದ್ದರಿಂದ ಭಾನುವಾರ ಬೆಳಗ್ಗೆ ನದಿಯಲ್ಲಿ ಬೋಟ್ ಮೂಲಕ ತಪಾಸಣೆ ನಡೆಸಿದರಾದರೂ ಶವ ಪತ್ತೆಯಾಗಿಲ್ಲ.

ಸ್ನೇಹಿತರಿಗೆ ಕರೆ ಮಾಡಿದ್ದರು: ನದಿಗೆ ಹಾರುವ ಮುನ್ನ ಸ್ನೇಹಿತರಿಗೆ ಕರೆ ಮಾಡಿ ತಾನು ನದಿಗೆ ಹಾರಿ ಸಾಯುತ್ತೇನೆಂದು ಹೇಳಿದ್ದರು. ಇದರಿಂದ ಆತಂಕಗೊಂಡು ಗ್ರಾಮದಲ್ಲಿ ಹಾಗೂ ನಗರದ ಸ್ನೇಹಿತರ ಅಂಗಡಿಗಳಲ್ಲಿ ವಿಚಾರಿಸಿದ್ದಾರೆ. ಕೊನೆಗೆ ಪುರುಷೋತ್ತಮ್ ಸಹೋದರ ತಾಪಂ ಮಾಜಿ ಸದಸ್ಯ ರವಿಪ್ರಸನ್ನರಿಗೆ ವಿಷಯ ಮುಟ್ಟಿಸಿ, ಹುಡುಕಾಟ ನಡೆಸಿದ ವೇಳೆ ಹೊಸ ಸೇತುವೆ ಬಳಿ ನಿಲ್ಲಿಸಿದ್ದ ಆಟೋ ಜೊತೆಗೆ ಜನ ಜಮಾಯಿಸಿರುವುದು ಕಂಡು ಬಂದಿದೆ. ಈ ಸಂಬಂಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರ್ಥಿಕವಾಗಿ ಸಾಕಷ್ಟು ಅನುಕೂಲಸ್ಥರಾಗಿರುವ ಪುರುಷೋತ್ತಮ್ ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ತಿಳಿದು ಬಂದಿಲ್ಲ.

ಜು.4ರೊಳಗೆ ನೋಂದಾಯಿಸಿಕೊಳ್ಳಿ



ಬೆಟ್ಟದಪುರ, ಜೂ.30– ಪಿರಿಯಾಪಟ್ಟಣ ತಂಬಾಕು ಮಂಡಳಿಯಲ್ಲಿ ಇದುವರೆಗೂ ಹಲವು ಕಾರಣಗಳಿಂದ ನೋಂದಾಯಿಸಿಕೊಳ್ಳದ (ರಿನಿವಲ್) ರೈತರು ಜು.4ರೊಳಗೆ ನೋಂದಾಯಿಸಿಕೊಳ್ಳುವಂತೆ ಹರಾಜು ಮಾರುಕಟ್ಟೆ–6ರ ಹರಾಜು ಅಧೀಕ್ಷಕ ಧನರಾಜ್ ಮನವಿ ಮಾಡಿದ್ದಾರೆ.

ತಂಬಾಕು ಮಾರುಕಟ್ಟೆಯಲ್ಲಿ ಶೇ.25 ರಿಂದ 50ರಷ್ಟು ತಂಬಾಕು ಮಾರಾಟ ಮಾಡಿರುವ ರೈತರಿಗೆ ಯಾವುದೇ ದಂಡ ಇರುವುದಿಲ್ಲ. ತಂಬಾಕು ಮಾರುಕಟ್ಟೆಯಲ್ಲಿ ಮಾರಾಟ ಮಾಡದಿರುವ ರೈತರು ತಂಬಾಕು ಮಂಡಳಿ ನಿಗದಿಪಡಿಸಿರುವ ದಂಡ ಕಟ್ಟಿ ನೋಂದಾಯಿಸಿಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ.

ಆಗ್ರಹ: ವಿವಿಧ ಕಾರಣಗಳಿಂದಾಗಿ ಒಂದು ಕೆಜಿ ತಂಬಾಕು ಮಾರಾಟ ಮಾಡದಿರುವ ರೈತರಿಗೆ ತಂಬಾಕು ಮಂಡಳಿ ದಂಡ ವಿಧಿಸಿದ್ದು, ಅದನ್ನು ರದ್ದುಗೊಳಿಸಿ ಎಲ್ಲಾ ತಂಬಾಕು ಬೆಳೆಗಾರರನ್ನು ದಂಡವಿಲ್ಲದೇ ನೋಂದಣಿ ಮಾಡಿಕೊಳ್ಳಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಕೇಂದ್ರೀಯ ರೇಷ್ಮೆ ಮಂಡಳಿ ಕಿರಿಯ ವಿಜ್ಞಾನಿಗೆ ಅಭಿನಂದನೆ



ಬೆಟ್ಟದಪುರ, ಜೂ.30– ಕೇಂದ್ರೀಯ ರೇಷ್ಮೆ ಮಂಡಳಿ ಕಿರಿಯ ವಿಜ್ಞಾನಿಯಾಗಿ ಆಯ್ಕೆಯಾದ ಬೆಟ್ಟದಪುರ ಸಮೀಪದ ಕೊರ್ಗಲ್ಲು ಗ್ರಾಮದ ನಿವಾಸಿ ಕೆ.ಎಂ. ಲೋಹಿತಾಶ್ವ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು.

ಗ್ರಾಮದ ಮುಖಂಡ ಕೆ.ಬಿ.ಶಿವಕುಮಾರಸ್ವಾಮಿ ಮಾತನಾಡಿ, ಲೋಹಿತಾಶ್ವ ಕೇಂದ್ರೀಯ ರೇಷ್ಮೆ ಮಂಡಳಿ ಕಿರಿಯ ವಿಜ್ಞಾನಿಯಾಗಿ ಆಯ್ಕೆಯಾಗುವ ಮೂಲಕ ಗ್ರಾಮಕ್ಕೆ ಹಾಗೂ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಅವರು ಮುಂದಿನ ದಿನಗಳಲ್ಲಿ ಮತ್ತಷ್ಟು ಸಾಧನೆ ಮಾಡಲಿ ಎಂದು ಹಾರೈಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಲೋಹಿತಾಶ್ವ, ನನ್ನ ಈ ಸಾಧನೆಗೆ ಪೋಷಕರು, ಶಿಕ್ಷಕರು ಹಾಗೂ ಗ್ರಾಮಸ್ಥರೇ ಕಾರಣ. ನಾನು ಕೇಂದ್ರೀಯ ರೇಷ್ಮೆ ಮಂಡಳಿ ಕಿರಿಯ ವಿಜ್ಞಾನಿಯಾಗಿ ಆಯ್ಕೆಯಾಗಿದ್ದು, ಕಾಶ್ಮೀರ ಅಥವಾ ಅಸ್ಸಾಂನಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕಿದೆ. ಅಲ್ಲಿ ನಮ್ಮ ರಾಜ್ಯದ ರೈತರು, ಬೆಳೆಗಳ ಬಗ್ಗೆ ತಿಳಿಸುವುದಾಗಿ ಹೇಳಿದರು.

ಈ ವೇಳೆ ಲೋಹಿತಾಶ್ವ ಅವರ ತಂದೆ ಮಹದೇವಪ್ಪ, ತಾಯಿ ಚಿಂತಾಮಣಿ, ತಾತ ಸಂಗಪ್ಪ ಸೇರಿದಂತೆ ಕುಟುಂಬದವರಾದ ಮಂಜುನಾಥ್, ಶಂಕರ್, ಪರಮೇಶ್, ಚಂದ್ರಪ್ಪ, ಶಾಂತ ಕುಮಾರ್, ಮಹೇಶ್, ಮದನ್, ಶೈಲಜಾ, ಅರ್ಚಕರಾದ ಮಹದೇವ್ ಸೇರಿದಂತೆ ಗ್ರಾಮಸ್ಥರಿದ್ದರು.

ಸ್ವಾವಲಂಬಿ ಬದುಕಿಗೆ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ ಸಹಕಾರಿ

ಸರಗೂರು, ಜೂ.30– ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ಸಹಕಾರಿಯಾಗಿದೆ ಎಂದು ಸ್ನೇಹ ಸ್ತ್ರೀ ಸಮಾಜದ ಅಧ್ಯಕ್ಷೆ ಸುಧಾ ತಿಳಿಸಿದರು.



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಪಟ್ಟಣದ ಶ್ರೀಶಿವರಾತ್ರಿ ಶಿವಾನುಭವ ಮಂದಿರದಲ್ಲಿ ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯದ ಪ್ರಾಯೋಜಕತ್ವದಲ್ಲಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ, ಸ್ನೇಹ ಸ್ತ್ರೀ ಸಮಾಜದ ಸಹ ಯೋಗದಲ್ಲಿ ಪ್ರಮಾಣ ಪತ್ರ ವಿತರಣೆ, ವೃತ್ತಿ ಕೌಶಲ್ಯ ತರಬೇತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಒಂದು ರಥ ಸಾಗಲು 2 ಚಕ್ರಗಳು ಹೇಗೆ ಮುಖ್ಯವೋ ಹಾಗೆಯೇ ಜೀವನವೆಂಬ ರಥ ಸಾಗಬೇಕಾದರೆ ಗಂಡ ಹೆಂಡತಿ ಎಂಬ ಎರಡು ಚಕ್ರಗಳು ತುಂಬಾ ಮುಖ್ಯ. ಒಬ್ಬರು ದುಡಿದರೆ ಉತ್ತಮ ಜೀವನ ನಡೆಸಲು ಸಾಧ್ಯವಿಲ್ಲ. ಹಾಗಾಗಿ ಕಳೆದ 33 ವರ್ಷಗಳಿಂದ ಸುತ್ತೂರು ಮಠದ ಶ್ರೀಗಳವರ ಆಶೀರ್ವಾದದೊಂದಿಗೆ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ತರಬೇತಿಗಳನ್ನು ನೀಡಿದ್ದು, ಹಲವು ಜನರು ಸಮಾಜದಲ್ಲಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದರು.

ದಡದಹಳ್ಳಿ ಪಟ್ಟದ ಮಠದ ಡಾ.ಶ್ರೀಷಡಕ್ಷರ ಸ್ವಾಮೀಜಿ ಮಾತನಾಡಿ, ಸುತ್ತೂರು ಮಠದ ಕಾರ್ಯವನ್ನು ಶ್ಲಾಘಿಸುತ್ತಾ, ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜೀವನ ಚರಿತ್ರೆ, ಸಾಧನೆ, ಈಗಿನ ಶ್ರೀಗಳವರ ಮಹತ್ಕಾರ್ಯಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ ನಿರ್ದೇಶಕರಾದ ರಮೇಶ್ ಜನಶಿಕ್ಷಣಸಂಸ್ಥೆಯ ತರಬೇತಿ ಮತ್ತು ಉದ್ದೇಶಗಳ ಬಗ್ಗೆ ಪ್ರಾಸ್ತಾವಿಕವಾಗಿ ತಿಳಿಸಿದರು.

ನಂತರ ತರಬೇತಿ ಪೂರ್ಣಗೊಳಿಸಿದ ತಾಲೂಕಿನ ಹೆಗ್ಗನೂರು ಗ್ರಾಮದ ಅಸಿಸ್ಟೆಂಟ್ ಜೂಟ್ ಪ್ರಾಡಕ್ಟ್ ಮೇಕರ್ ತರಬೇತಿಯ 20, ಚೆನ್ನೀಪುರ ಗ್ರಾಮದ ಅಸಿಸ್ಟೆಂಟ್ ಡ್ರೆಸ್ ಮೇಕರ್ ತರಬೇತಿಯ 20, ಸಾಗರೆ ಗ್ರಾಮದ ಅಸಿಸ್ಟೆಂಟ್ ಹ್ಯಾಂಡ್ ಎಂಬ್ರಾಯಿಡರಿ ಹಾಗೂ ಅಸಿಸ್ಟೆಂಟ್ ಡ್ರೆಸ್ ಮೇಕರ್ ತರಬೇತಿಯ 40 ಹಾಗೂ ಸರಗೂರು ಪಟ್ಟಣದ ಅಸಿಸ್ಟೆಂಟ್ ಕಂಪ್ಯೂಟರ್ ಆಪರೇಟರ್ ತರಬೇತಿಯ 40 ಮತ್ತು ಬ್ಯೂಟಿಷಿಯನ್ ತರಬೇತಿಯ 20 ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಸರಗೂರು ಪಟ್ಟಣದಲ್ಲಿ 2 ಬ್ಯಾಚ್ ಅಸಿಸ್ಟೆಂಟ್ ಕಂಪ್ಯೂಟರ್ ಟೆಕ್ನೀಷಿಯನ್ ಹಾಗೂ ತೆಲಗುಮಸಹಳ್ಳಿಯಲ್ಲಿ ಒಂದು ಬ್ಯಾಚ್ ಅಸಿಸ್ಟೆಂಟ್ ಡ್ರೆಸ್ ಮೇಕರ್ ತರಬೇತಿಯನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಅಖಿಲ ಭಾರತ ವೀರಶೈವ ಸಮಾಜದ ಅಧ್ಯಕ್ಷ ವೀರಭದ್ರಪ್ಪ, ಬಸವ ಬಳಗದ ಅಧ್ಯಕ್ಷ ಗಣಪತಿ, ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ ಕಾರ್ಯಕ್ರಮ ಅಧಿಕಾರಿ ಸೌಭಾಗ್ಯ, ಸಹಾಯಕ ಕಾರ್ಯಕ್ರಮಾಧಿಕಾರಿ ಸುರೇಶ್ ಕುಮಾರ್, ವೃತ್ತಿ ಬೋಧಕರಾದ ಲಕ್ಷ್ಮಿ, ವೇದಾವತಿ, ಗೀತಾ, ಜಯಶ್ರೀ, ರವಿಕುಮಾರ್, ಸ್ನೇಹ ಸ್ತ್ರೀ ಸಮಾಜದ ಸದಸ್ಯರಾದ ಮಂಗಳ ಸೇರಿದಂತೆ 200 ಫಲಾನುಭವಿಗಳು ಭಾಗವಹಿಸಿದ್ದರು.

ನಿವೃತ್ತ ಶಿಕ್ಷಕನಿಗೆ ಬೀಳ್ಕೊಡುಗೆ



ಮೂಗೂರಿನ ಕರ್ನಾಟಕ ಪಬ್ಲಿಕ್ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಕಳೆದ 8 ವರ್ಷಗಳಿಂದ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ವೈ.ಕೆ.ಆನಂದ್ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಈ ವೇಳೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ರಶ್ಮಿ, ಎಂ.ಕೆ.ಬಾಲಶಂಕರ್, ಸಿಆರ್‌ಪಿ ಎಂ.ಎನ್.ಮಹದೇವಸ್ವಾಮಿ, ಮುಖಂಡರಾದ ಶಿವನಾಗೇಂದ್ರ ಶರ್ಮಾ, ಶಾಲೆ ಪ್ರಭಾರ ಮುಖ್ಯ ಶಿಕ್ಷಕಿ ಸಲೀನಾ, ನಿರ್ಮಲ, ಪ್ರೇಮ, ಅತಿಥಿ ಶಿಕ್ಷಕ ಡಾ.ರಾಚಪ್ಪ, ಅಡಿಗೆ ಸಿಬ್ಬಂದಿ ಇತರರಿದ್ದರು.

ರೈತರ ಸಮಸ್ಯೆ ಬಗೆಹರಿಸಲು ಸಂಘಟನೆ ಮುಖ್ಯ

ಮಲ್ಲುಂಡಿ, ಜೂ.30– ರೈತರ ಸಮಸ್ಯೆ ಬಗೆಹರಿಸಲು ಸಂಘಟನೆ ಮುಖ್ಯ ಎಂದು ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ರಾಜ್ಯಾಧ್ಯಕ್ಷ ಹಾಡ್ಯರವಿ ತಿಳಿಸಿದರು.



ನಂಜನಗೂಡು ತಾಲೂಕಿನ ಮೊಬ್ಬಳ್ಳಿ ಗ್ರಾಮದಲ್ಲಿ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ಗ್ರಾಮ ಘಟಕದ ನಾಮಫಲಕ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಗ್ಯಾರಂಟಿ ನೆಪದಲ್ಲಿ ರೈತರ ಜೀವದ ಜೊತೆ ಚೆಲ್ಲಾಟವಾಡುತ್ತಿದೆ. ರೈತರಿಗಾಗಿ ಯಾವುದೇ ಯೋಜನೆ ಜಾರಿಗೊಳಿಸಿಲ್ಲ ಎಂದ ಅವರು ರೈತರು ಬೆಳೆದ ಬೆಳೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸೂಕ್ತ ಬೆಂಬಲ ಬೆಲೆ ಘೋಷಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಪ್ರಕಾಶ್, ರಾಜ್ಯ ಗೌರವಾಧ್ಯಕ್ಷ ನಂದೀಶ್, ಚಿಕ್ಕಸ್ವಾಮಿ, ಮರಿಸ್ವಾಮಿ, ಕುಮಾರ್, ಮಂಜೇಶ್, ಮಹೇಶ್, ಸಿದ್ದರಾಜು, ರವಿ, ಮಹೇಶ್, ಸೋಮಣ್ಣ, ಭುಜಂಗಪ್ಪ, ನಾಗೇಶ್, ಮೂರ್ತಿ, ಶಿವಮೂರ್ತಿ, ಗುರುಸ್ವಾಮಿ, ಗ್ರಾಮ ಘಟಕದ ಅಧ್ಯಕ್ಷ ವೃಷಬೇಂದ್ರ, ಉಪಾಧ್ಯಕ್ಷ ಮಲ್ಲೇಶ್, ಕಾರ್ಯದರ್ಶಿ ಅಶೋಕ್ ಕುಮಾರ್ ಸೇರಿದಂತೆ ಇತರರಿದ್ದರು.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಿಗೆ ಸನ್ಮಾನ



ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಮಾಜಿ ಜಿಪಂ ಸದಸ್ಯ, ಸಹಕಾರಿ ಧುರೀಣ ಬಿ.ಎನ್.ಸದಾನಂದ ಅವರನ್ನು ಕಿರಗಸೂರು ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಶಿವರಾಜು, ನಂಜುಂಡಸ್ವಾಮಿ, ರವಿ ಸನ್ಮಾನಿಸಿದರು.

ಕುಪ್ಯ ಗ್ರಾಪಂಗೆ ನಂದಿನಿ ಅಧ್ಯಕ್ಷೆ, ಪದ್ಮ ಉಪಾಧ್ಯಕ್ಷೆ

ತಿ.ನರಸೀಪುರ, ಜೂ.30– ತಾಲೂಕಿನ ಕುಪ್ಯ ಗ್ರಾಮ ಪಂಚಾಯತ್ ಅಧ್ಯಕ್ಷೆಯಾಗಿ ನಂದಿನಿ ರಾಜೇಶ್ ಹಾಗೂ ಉಪಾಧ್ಯಕ್ಷೆಯಾಗಿ ಪಿ.ಪದ್ಮ ಅವಿರೋಧವಾಗಿ ಆಯ್ಕೆಯಾದರು.



ಕುಪ್ಯ ಗ್ರಾಪಂ ಅಧ್ಯಕ್ಷೆ ನಂದಿನಿ, ಉಪಾಧ್ಯಕ್ಷೆ ಪಿ.ಪದ್ಮ ಅವರನ್ನು ಮುಖಂಡರು ಅಭಿನಂದಿಸಿದರು.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಗವಿಸಿದ್ದಯ್ಯ ಹಾಗೂ ಉಪಾಧ್ಯಕ್ಷೆ ಮಂಜುಳ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಗಳಿಗೆ ಗ್ರಾಪಂ ಕಚೇರಿಯಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಪ.ಜಾತಿಗೆ ಮೀಸಲಾದ ಅಧ್ಯಕ್ಷ ಸ್ಥಾನಕ್ಕೆ ನಂದಿನಿ ರಾಜೇಶ್ ಹಾಗೂ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಪಿ.ಪದ್ಮ ಅವ ರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ರೇಷ್ಮೆ ಇಲಾಖೆ ಅಧಿಕಾರಿ ಕೆಂಪರಾಜು ಪ್ರಕಟಿಸಿದರು. ಈ ವೇಳೆ ಗ್ರಾಪಂ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.


ಚುನಾವಣಾ ವಿಶೇಷ ಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷ ಗವಿಸಿದ್ದಯ್ಯ, ಉಪಾಧ್ಯಕ್ಷೆ ಮಂಜುಳ, ಸದಸ್ಯರಾದ ಎಸ್.ರಾಘವೇಂದ್ರ ಭಾಗ್ಯಮ್ಮ, ಎನ್.ಗೋವಿಂದ, ಕೆ.ಸಿ.ಪುಟ್ಟರಾಜು, ಪುಷ್ಪ, ಮಹದೇವಶೆಟ್ಟಿ, ಯಶೋಧ ಹಾಗೂ ಶಿವಮ್ಮ ಹಾಜರಾಗಿ ನೂತನ ಅಧ್ಯಕ್ಷ – ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿ ಸೂಚಿಸಿದರು.

ಸದಸ್ಯ ರಾಘವೇಂದ್ರ ಮಾತನಾಡಿ, ಒಪ್ಪಂದದ ಪ್ರಕಾರ ಗ್ರಾಪಂನಲ್ಲಿ ಯಾವುದೇ ಗೊಂದಲಗಳಿಲ್ಲದೇ ಅವಿರೋಧ ಆಯ್ಕೆಯಾಗಿದೆ. ಗ್ರಾಪಂ ವರಿಷ್ಠರ ಆಯ್ಕೆಯಲ್ಲಿ ಮೊದಲಿನಿಂದಲೂ ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡಲಾಗುತ್ತಿದೆ. ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಸದಸ್ಯರೆಲ್ಲರೂ ಸಹಕಾರ ನೀಡುವ ಮೂಲಕ ಗ್ರಾಪಂ ಅಭಿವೃದ್ಧಿಗೆ ಶ್ರಮಿಸುತ್ತೇವೆ. ಅಧ್ಯಕ್ಷರು ಮುಂಬರುವ ತಾಪಂ, ಜಿಪಂ ಹಾಗೂ ಗ್ರಾಪಂ ಚುನಾವಣೆಗಳನ್ನು ಗಮನದಲ್ಲಿರಿಸಿ ಕೊಂಡು ಗ್ರಾಪಂ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ಪಡೆದು ಉತ್ತಮ ಕೆಲಸಗಳನ್ನು ಮಾಡಬೇಕೆಂದು ಸಲಹೆ ನೀಡಿದರು.

ಅಧ್ಯಕ್ಷೆ ನಂದಿನಿ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಮೂಲ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್, ಚರಂಡಿ ಸೇರಿದಂತೆ ಇನ್ನಿತರ ಸೌಲಭ್ಯಕ್ಕೆ ಆದ್ಯತೆ ನೀಡಲಾಗುತ್ತದೆ. ಗ್ರಾಪಂಗೆ ಸರ್ಕಾರದಿಂದ ಬರುವ ಅನುದಾನವನ್ನು ಎಲ್ಲಾ ಗ್ರಾಮಗಳಿಗೆ ಸಮನಾಗಿ ಹಂಚಿಕೆ ಮಾಡಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಕೆ.ಮಹದೇವು, ಎ.ಪಿ.ಮಾರೇಗೌಡ, ಪಿ.ಶಿವರಾಮು, ಎಸ್.ಶಿವರಾಮು, ಕೆ.ಬಿ.ಪ್ರಭಾಕರ್, ಜೆ.ಶಿವರಾಮು, ಪುಟ್ಟಸ್ವಾಮಿ, ಸಿದ್ದೇಶ್, ಭಾಸ್ಕರ್, ಮಿಯಣ್ಣ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಉಮೇಶ, ನಾಗರಾಜು, ಪುಟ್ಟಸ್ವಾಮಿ.ಎನ್, ನವೀನ್, ನಾಗೇಂದ್ರ ಪ್ರಸಾದ್, ಕುಮಾರಾಚಾರ್, ನಿಂಗರಾಜು, ಮಾದ, ಮಿಲ್ ರಮೇಶ್, ವಾಸು, ಆಟೋ ಸಿದ್ದಪ್ಪ, ನಿಂಗರಾಜು, ರಂಗಸ್ವಾಮಿ, ನಂಜುಂಡಸ್ವಾಮಿ, ಅನಿಲ್, ನಾಗೇಶ್, ಮಹದೇವಣ್ಣ, ಕೃಷ್ಣಪ್ಪ, ಮಂಜುನಾಥ್, ಮಂಜು, ಮಹದೇವಯ್ಯ, ಡಿಸಿಸಿ ಸದಸ್ಯ ಮೋಹನ್, ಅಂಗಡಿ ಮಹದೇವ ಮತ್ತಿತರರಿದ್ದರು.

ನೂತನ ಬಿಇಓಗೆ ಅಭಿನಂದನೆ



ಹೆಚ್.ಡಿ.ಕೋಟೆ ತಾಲೂಕಿನ ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಅವರನ್ನು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು ಅಭಿನಂದಿಸಿದರು. ಈ ವೇಳೆ ಡೈರಿ ಅಧ್ಯಕ್ಷ ಕೆ.ಪಿ.ಚೆಲುವರಾಜು, ಕ್ಯಾತನಹಳ್ಳಿ ಗ್ರಾಪಂ ಉಪಾಧ್ಯಕ್ಷ ಪ್ರಸನ್ನಕುಮಾರ್, ಕಾಂಗ್ರೆಸ್ ಎಸ್‌ಟಿ ಘಟಕದ ಅಧ್ಯಕ್ಷ ಬಿ.ಪಿ.ಸಿದ್ದನಾಯಕ, ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷ ಬೆಟ್ಟನಾಯಕ, ಮಾಜಿ ಅಧ್ಯಕ್ಷ ರಾಜೇಂದ್ರ, ಚಿಕ್ಕಣ್ಣ, ನಿಂಗನಾಯಕ ಇದ್ದರು.

ಮೈಸೂರು ಮಿತ್ರ

ಅನರ್ಹರಿಗೆ ಗೈಡ್‌ಶಿಪ್ ನೀಡದಿರಲು ಮೈಸೂರು ವಿವಿ ಶಿಕ್ಷಣ ಮಂಡಳಿ ನಿರ್ಧಾರ

ಮೈಸೂರು,ಜೂ.30(ಎಂಟಿವೈ)– ಗೈಡ್‌ಶಿಪ್‌ಗಾಗಿ ಅರ್ಹತೆ ಇಲ್ಲದಿದ್ದರೂ ಸಲ್ಲಿಸಿರುವ ಅರ್ಜಿಗಳ ತಿರಸ್ಕರಿಸಲು ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗದ ನೂತನ ಪಠ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಲಿ ಸಭೆ ಅನುಮೋದಿಸಲು ನಿರ್ಧರಿಸಿತು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸೋಮವಾರ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ಶೈಕ್ಷಣಿಕ ಸಾಲಿನ ಪ್ರಥಮ ಶಿಕ್ಷಣ ಮಂಡಳಿ ಸಾಮಾನ್ಯ ಸಭೆಯಲ್ಲಿ ಅನರ್ಹರು ಗೈಡ್‌ಶಿಪ್‌ಗಾಗಿ ಅರ್ಜಿ ಸಲ್ಲಿಸಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಯಿತು. ಸಭೆಯಲ್ಲಿ ಕಲಾ ನಿಕಾಯದ ಡೀನ್ ಪ್ರೊ.ಎಂ.ಎಸ್. ಶೇಖರ್ ಈ ವಿಷಯ ಪ್ರಸ್ತಾಪಿಸಿ, ಖಾಸಗಿ ಕಾಲೇಜುಗಳಿಂದ ಅರ್ಹರಲ್ಲದವರಿಗೂ ಗೈಡ್‌ಶಿಪ್ ಕೊಡುವಂತೆ ಮನವಿ ಸಲ್ಲಿಕೆಯಾಗುತ್ತಿವೆ. ಯಾವುದೇ ಕಾರಣಕ್ಕೂ ಅನರ್ಹರಿಗೆ ಗೈಡ್‌ಶಿಪ್ ನೀಡಬಾರದು. ಯುಜಿಸಿ, ಸರ್ಕಾರ ಮತ್ತು ಬಿಓಎಸ್ ನಿಯಮಗಳು ಹಾಗೂ ಪ್ರೊಬೆಷನರಿ ಡಿಕ್ಲೇರ್ ಆಗಿರುವುದನ್ನು ಪರಿಶೀಲಿಸಿ ಅನುಮತಿಸಬೇಕು ಎಂದು ಮನವಿ ಮಾಡಿದರು.

ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಲವರಿಗೆ ಅರ್ಹತೆ ಇದ್ದರೂ ಗೈಡ್‌ಶಿಪ್ ಕೊಡಲಾಗುತ್ತಿಲ್ಲ. ಆದರೆ, ಖಾಸಗಿ ಕಾಲೇಜುಗಳಿಂದ ಅರ್ಜಿ ಸಲ್ಲಿಸಿದ ಅನರ್ಹರನ್ನು ಪರಿಗಣಿಸಲಾಗುತ್ತಿದೆ. ಇತ್ತೀಚೆಗೆ ಗೈಡ್‌ಶಿಪ್ ಕೋರಿ ಸಾಕಷ್ಟು ಮನವಿ ಬಂದಿವೆ. ಅರ್ಜಿ ಸಲ್ಲಿಸಿರುವವರು ನೌಕರಿ ಕಾಯಂ ಸೇರಿದಂತೆ ಯಾವುದೇ ದಾಖಲೆ ನೀಡಿಲ್ಲ. ದಾಖಲೆಗಳನ್ನು ಕಳುಹಿಸುವಂತೆ ಪತ್ರ ಬರೆದರೆ, ನೀವೇ ಬಂದು ಪರಿಶೀಲಿಸುವಂತೆ ಮರು ಉತ್ತರ ಕಳುಹಿಸಿದ್ದಾರೆ ಆ ಹಿಂಬರಹಕ್ಕೆ ಯಾರದೇ ಸಹಿಯೂ ಇಲ್ಲ ಎಂದು ಪತ್ರವನ್ನು ಸಭೆಯಲ್ಲಿ ಪ್ರದರ್ಶಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಬಿಓಎಸ್ ಮತ್ತು ಯುಜಿಸಿ ನಿಯಮಾನುಸಾರ ಗೈಡ್‌ಶಿಪ್‌ಗೆ ಅನುಮತಿ ಕೊಡಬೇಕಾಗುತ್ತದೆ. ನೇಮಕಾತಿ ವಿಷಯವಾಗಿ ಸರ್ಕಾರದ ಹಂತದಲ್ಲಿ ಇತ್ಯರ್ಥವಾಗಬೇಕು. ಇದು ನಮ್ಮ ಸಮಸ್ಯೆ ಅಲ್ಲ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪ್ರೊ.ಎಂ.ಎಸ್. ಶೇಖರ್, ಮೈಸೂರು ವಿವಿ ಗುಣಮಟ್ಟದ ದೃಷ್ಟಿಯಿಂದ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ವಾರ್ಷಿಕ ಸಭೆಯಲ್ಲಿ ಚರ್ಚೆ ಮಾಡಿ ಗೈಡ್‌ಶಿಪ್ ನೀಡಬಹುದು. ತಕ್ಷಣ ಗೈಡ್‌ಶಿಪ್ ಕೊಡುವ ಔಚಿತ್ಯ ಏನು ಎಂದು ಪ್ರಶ್ನಿಸಿದರು.

ಬಳಿಕ ಶಿಕ್ಷಣ ಮಂಡಳಿ ಸದಸ್ಯರು, 2017ರಲ್ಲಿ ಯುಜಿಸಿ ರೂಪಿಸಿರುವ ಗೈಡ್‌ಶಿಪ್ ಸಂಬಂಧಿತ ನಿಯಮಗಳನ್ನು ಪಾಲಿಸುವುದು. ಸಂಶೋಧನೆಗೆ ಉತ್ತೇಜನ ಕೊಡಲು ನಿಯಾಮನುಸಾರ ಗೈಡ್‌ಶಿಪ್ ಕೊಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚಿನ್ನದ ಪದಕ, ದತ್ತಿ: ಗೌರಮ್ಮ ಶಂಕರಪ್ಪ ದತ್ತಿ, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ನಗದು ಬಹುಮಾನ, ಪ್ರೊ.ಕೆ.ಎಂ. ಶಫಿಉಲ್ಲಾ ಮತ್ತು ಪ್ರೊ. ಹೆಚ್.ಶೇಖರ್ ಶೆಟ್ಟಿ ಡೌನಿಮಿಲ್ಡಿವ್ ಲ್ಯಾಬೊರೇಟರಿ ದತ್ತಿ, ಪ್ರೊ.ವೈ.ಬಿ.ಬಸವರಾಜು ನಗದು ಬಹುಮಾನ ದತ್ತಿ, ಸಿ.ಎಂ.ನಾರಾಯಣ ಸ್ವಾಮಿ ಮತ್ತು ಬಿ.ಜಿ.ಶಾಂತಕುಮಾರಿ ಚಿನ್ನದ ಪದಕ ದತ್ತಿ ಸ್ಥಾಪನೆಗೆ ಸಭೆ ಒಪ್ಪಿಗೆ ನೀಡಿತು. ಯುವರಾಜ ಕಾಲೇಜಿನಲ್ಲಿ ಬಿಸಿಎ ಕೋರ್ಸಿಗೆ ಹೆಚ್ಚುವರಿ ವಿದ್ಯಾರ್ಥಿಗಳ ಪ್ರವೇಶಾತಿಗೂ ಅನುಮತಿ ನೀಡಲಾಯಿತು.

ಎಂಎಲ್‌ಸಿಯಿಂದ ದತ್ತಿ: ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡು ಪ್ರಥಮ ಸಭೆಯಲ್ಲಿ ಭಾಗವಹಿಸಿದ್ದ ವಿಧಾನ ಪರಿಷತ್ ಕೆ. ವಿವೇಕಾನಂದ, ತಮ್ಮ ಪೋಷಕರ ಹೆಸರಿನಲ್ಲಿ ದತ್ತಿ ಸ್ಥಾಪಿಸುವುದಾಗಿ ಘೋಷಿಸಿದರು. ಚಿನ್ನದ ಪದಕ, ದತ್ತಿ ಸ್ಥಾಪನೆಗೆ ಒಪ್ಪಿಗೆ ಕೊಡುವ ವೇಳೆ ಮಾಹಿತಿ ಪಡೆದುಕೊಂಡ ಅವರು, ಕೂಡಲೇ ದತ್ತಿ ಸ್ಥಾಪಿಸುವುದಾಗಿ ಪ್ರಕಟಿಸಿದರು. ಸಭೆಯು ಅವರ ನಿರ್ಧಾರವನ್ನು ಸ್ವಾಗತಿಸಿತು.

ಯುಜಿ, ಪಿಜಿ ನೂತನ ಪಠ್ಯಕ್ಕೆ ಒಪ್ಪಿಗೆ: ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ನೂತನವಾಗಿ ತಯಾರಿಸಲಾಗಿರುವ ಪಠ್ಯಕ್ಕೆ ಶಿಕ್ಷಣ ಮಂಡಳಿ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು. ಪಠ್ಯ ಬದಲಾವಣೆ ರಾಜ್ಯ ಸರ್ಕಾರ ಮತ್ತು ಸ್ಟೇಟ್ ಎಜುಕೇಷನ್ ಕಮಿಷನ್ ಬದ್ಧತೆಯಾಗಿದೆ. ಪಠ್ಯ ಬದಲಾವಣೆ ಸಂಬಂಧ ಕಮಿಷನ್ ಪೂರ್ಣ ವರದಿ ಸಲ್ಲಿಸಿದೆ. ಜುಲೈ ತಿಂಗಳಲ್ಲಿ ವರದಿ ಬಿಡುಗಡೆಯಾಗಬಹುದು. ಸರ್ಕಾರದ ಆದೇಶಕ್ಕೆ ಬದ್ಧರಾಗಿ ಸಣ್ಣಪುಟ್ಟ ಬದಲಾವಣೆ ಇದ್ದರೆ ಮಾಡಬೇಕಾಗುತ್ತದೆ ಎಂದು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಹೇಳಿದರು.

ಸಭೆಯಲ್ಲಿ ಕುಲಸಚಿವೆ ಎಂ.ಕೆ. ಸವಿತಾ, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ್, ಹಣಕಾಸು ಅಧಿಕಾರಿ ಕೆ.ಎಸ್. ರೇಖಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸ್ನಾತಕ, ಸ್ನಾತಕೋತ್ತರ ವಿಭಾಗಕ್ಕೆ ನೂತನ ಪಠ್ಯಕ್ರಮಕ್ಕೂ ಅನುಮೋದನೆ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ ಶೈಕ್ಷಣಿಕ ಸಾಲಿನ ಪ್ರಥಮ ಶಿಕ್ಷಣ ಮಂಡಳಿ ಸಾಮಾನ್ಯ ಸಭೆಯಲ್ಲಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕಣ್ಣಪ್ಪ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ರಾಜರತ್ನಾಕರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ–1), ಎಕ್ಸ್ ಅಂಡ್ ವೈ (ಕ–3)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ):

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ತೆಲಂಗಾಣ: ರಾಸಾಯನಿಕ ಕಾರ್ಖಾನೆಯಲ್ಲಿ ರಿಯಾಕ್ಟರ್ ಸ್ಫೋಟ: 12 ಕಾರ್ಮಿಕರ ಸಾವು

34 ಮಂದಿಗೆ ಗಾಯ

ಹೈದರಾಬಾದ್: ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಪಾಶಮೈಲರಾಮ್‌ನಲ್ಲಿರುವ ಸಿಗಾಚಿ ರಾಸಾಯನಿಕ ಕಾರ್ಖಾನೆಯಲ್ಲಿ ಭಾರಿ ಸ್ಫೋಟ ಸಂಭವಿಸಿದ್ದು, ಕನಿಷ್ಠ 12 ಮಂದಿ ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ರಿಯಾಕ್ಟರ್‌ನಲ್ಲಿನ ಸ್ಫೋಟದಿಂದಾಗಿ ಕಾರ್ಖಾನೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎನ್ನಲಾಗಿದ್ದು, ಘಟನೆಯಲ್ಲಿ 34ಕ್ಕೂ ಹೆಚ್ಚು ಕಾರ್ಮಿಕರು ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರ್ಖಾನೆಯೊಳಗೆ ಮತ್ತಷ್ಟು ಕಾರ್ಮಿಕರು ಸಿಲುಕಿರುವ ಸಾಧ್ಯತೆ ಇದೆ ಎಂಬ ಶಂಕೆಗಳು ವ್ಯಕ್ತವಾಗಿದೆ.

ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಧಾವಿಸಿದ್ದು, ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಸ್ಫೋಟವು ಎಷ್ಟು ಪ್ರಬಲವಾಗಿತ್ತೆಂದರೆ, ಕೆಲವು ಕಾರ್ಮಿಕರು ಸುಮಾರು 100 ಮೀಟರ್ ದೂರದವರೆಗೂ ಬಿದ್ದಿದ್ದರು. ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಎಲ್ಲೆಡೆ ಆವರಿಸಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಘಟನೆಗೆ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಸಂತಾಪ ಸೂಚಿಸಿದ್ದು, ಅವಶೇಷಗಳಡಿ ಸಿಲುಕಿರುವ ಕಾರ್ಮಿಕರನ್ನು ರಕ್ಷಿಸಲು ಮತ್ತು ಅವರಿಗೆ ಸೂಕ್ತ ವೈದ್ಯಕೀಯ ಆರೈಕೆಯನ್ನು ಒದಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ದರಪಟ್ಟಿ ಆಹ್ವಾನ

ಮೈಸೂರು, ಜೂ.30– ಪಿ.ಎಂ ಅಭಿಮ್ ಯೋಜನೆಯಡಿಯಲ್ಲಿ ಪ್ರಾರಂಭಿಸಲಾಗಿರುವ ನಮ್ಮ ಕ್ಲಿನಿಕ್‌ಗೆ(ನಗರ ಆರೋಗ್ಯ ಕ್ಷೇಮ ಕೇಂದ್ರ) ಮಾರ್ಗಸೂಚಿಗಳನ್ವಯ ಅವಶ್ಯಕ ಅಲ್ಯೂಮಿನಿಯಂ ಎಕ್ಸ್‌ಟೆನ್ಸನ್ ಮತ್ತು ಅಲ್ಯೂಮಿನಿಯಂ ಪಾರ್ಟಿಷನ್ (ಡೋರ್ ಮೆಟೀರಿಯಲ್) ಗಳನ್ನು ಅಳವಡಿಸಲು ವಿವಿಧ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ವಿವಿಧ ಅರ್ಹ ಸಂಸ್ಥೆಗಳು ದರಪಟ್ಟಿಯನ್ನು ಜುಲೈ 7 ರಂದು ಸಾಯಂಕಾಲ 5 ಗಂಟೆಯ ಒಳಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಲು ಮೈಸೂರು ಜಿಲ್ಲೆಯ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಗಜಪಡೆ ಆಯ್ಕೆ ಕಸರತ್ತು: 7 ಕ್ಯಾಂಪ್‌ಗಳಿಂದ 25 ಆನೆಗಳ ಹೆಲ್ತ್ ಕಾರ್ಡ್ ಸ್ವೀಕಾರ

● ಎರಡು ವಾರದಲ್ಲಿ ಫೈನಲ್ ಲಿಸ್ಟ್ ಪ್ರಕಟ ● ತೀವ್ರಗೊಂಡ ಗಜಪಡೆ ಕಟ್ಟುವ ಕಾರ್ಯ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ.30– ದಸರಾ ಮಹೋತ್ಸವದ ಪ್ರಮುಖ ಕೇಂದ್ರಬಿಂದು ಗಜಪಡೆ ಆಯ್ಕೆ ಕಾರ್ಯದಲ್ಲಿ ಅರಣ್ಯ ಇಲಾಖೆ ಬಿರುಸಿನ ಕ್ರಮ ಕೈಗೊಂಡಿದ್ದು, 8 ಕ್ಯಾಂಪ್‌ಗಳಿಗೆ ಭೇಟಿ ನೀಡಿ 25 ಆನೆಗಳನ್ನು ಪರಿಶೀಲಿಸಿ ಹೆಲ್ತ್ ಕಾರ್ಡ್ ಸ್ವೀಕರಿಸಿದೆ.

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಗಜಪಡೆ ಕರೆತರಲು ಕೇವಲ 35 ದಿನ ಮಾತ್ರವಿದ್ದು, ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಯ ವಿವಿಧ ಕ್ಯಾಂಪ್‌ಗಳಿಗೆ ಭೇಟಿ ನೀಡಿ, ಒಟ್ಟು 25 ಆನೆಗಳನ್ನು ಪರಿಶೀಲಿಸಿದ ಅರಣ್ಯ ಇಲಾಖೆ ಅಧಿಕಾರಿಗಳ ತಂಡ ಆಯಾ ಕ್ಯಾಂಪ್‌ಗಳ ಪಶುವೈದ್ಯರಿಂದ ಆನೆಗಳ ಹೆಲ್ತ್‌ಕಾರ್ಡ್ ಪಡೆದಿದೆ.

ಹೆಲ್ತ್ ಕಾರ್ಡ್‌ನಲ್ಲೇನಿದೆ: ಆನೆಗಳ ಹೆಲ್ತ್ ಕಾರ್ಡ್‌ನಲ್ಲಿ ಆನೆಗಳ ಆರೋಗ್ಯ ಸ್ಥಿತಿಗತಿ, ವಯಸ್ಸು, ತೂಕ, ಸ್ವಭಾವ, ಮದ ಬಂದಿರುವಿಕೆ, ಹೆಣ್ಣಾನೆಗಳ ಗರ್ಭಾವಸ್ಥೆ ಸೇರಿದಂತೆ ವಿವಿಧ ಮಾಹಿತಿ ಇರುತ್ತದೆ. ಕ್ಯಾಂಪ್‌ಗಳ ಪಶುವೈದ್ಯರಿಂದ ವರದಿ ಸ್ವೀಕರಿಸಿರುವ ಅರಣ್ಯ ಇಲಾಖೆ, ಅದನ್ನು ಪರಿಶೀಲಿಸಿ ಆನೆಗಳ ಅಂತಿಮ ಪಟ್ಟಿ ತಯಾರಿಕೆಯಲ್ಲಿ ತೊಡಗಿದೆ.



ಪರಿಶೀಲಿಸಿದ ಆನೆಗಳಿವು: ನಿಗದಿಯಂತೆ ಈ ಬಾರಿಯೂ ಕೂಂಬಿಂಗ್ ಸ್ಪೆಷಲಿಸ್ಟ್ ಅಭಿಮನ್ಯು ಚಿನ್ನದ ಅಂಬಾರಿ ಹೊರಲಿದ್ದು, ಅದರೊಂದಿಗೆ ಮತ್ತಿಗೋಡು ಕ್ಯಾಂಪ್‌ನಿಂದ ಭೀಮ, ಶ್ರೀಕಂಠ, ಪಾರ್ಥ, ದುಬಾರೆ ಕ್ಯಾಂಪ್‌ನಿಂದ ಧನಂಜಯ, ಪ್ರಶಾಂತ, ಕಂಜನ್, ಸುಗ್ರೀವ, ಶ್ರೀರಾಮ, ಹರ್ಷ, ಅಯ್ಯಪ್ಪ, ಹೇಮಾವತಿ, ದೊಡ್ಡಹರವೆ ಕ್ಯಾಂಪ್‌ನಿಂದ ಏಕಲವ್ಯ, ಭೀಮನಕಟ್ಟೆ ಕ್ಯಾಂಪ್‌ನಿಂದ ಗಣೇಶ್, ಶ್ರೀರಂಗ, ರೂಪ, ಬಳ್ಳೆ ಕ್ಯಾಂಪ್‌ನಿಂದ ಮಹೇಂದ್ರ, ದೊಡ್ಡಹರವೆ ಲಕ್ಷ್ಮಿ, ಬಂಡೀಪುರ ಹಳೆ ಕ್ಯಾಂಪಸ್‌ನಿಂದ ಹಿರಣ್ಯ, ಲಕ್ಷ್ಮಿ, ರೋಹಿತ್, ಪಾರ್ಥಸಾರಥಿ, ಐರಾವತ(ಕೆಬ್ಬೆ) ಹಾಗೂ ಹಾರಂಗಿ ಕ್ಯಾಂಪ್‌ನಿಂದ ಲಕ್ಷ್ಮಣ ಮತ್ತು ಈಶ್ವರ ಆನೆಗಳ ಆರೋಗ್ಯ ಪರಿಶೀಲಿಸಿ, ದಾಖಲೆ ಸ್ವೀಕರಿಸಲಾಗಿದೆ.

ಎಲ್ಲವೂ ಆರೋಗ್ಯವಂತ ಆನೆಗಳೇ: ಏಳು ಕ್ಯಾಂಪ್‌ಗಳಿಂದ 25 ಆನೆಗಳನ್ನು ಪರಿಶೀಲಿಸಿರುವ ಅರಣ್ಯಾಧಿಕಾರಿಗಳ ತಂಡ 25 ಆನೆಗಳಲ್ಲಿ 14 ಅಥವಾ 15 ಆನೆಗಳನ್ನು ಅಂತಿಮಗೊಳಿಸಬೇಕಾದ ಸವಾಲು ಎದುರಿಸುತ್ತಿದೆ. ಒಂದೆಡೆ ಭವಿಷ್ಯದ ಅಂಬಾರಿ ಆನೆಗಳನ್ನು ಸಜ್ಜುಗೊಳಿಸುವ ಹೊಣೆ, ಮತ್ತೊಂದೆಡೆ ಹೊಸ ಆನೆಗಳಿಗೆ ತರಬೇತಿ ನೀಡಬೇಕಾದ ಅನಿವಾರ್ಯತೆಯಿಂದ ಆನೆಗಳ ಅಂತಿಮ ಪಟ್ಟಿ ತಯಾರಿಸಲು ಅರಣ್ಯ ಇಲಾಖೆ ಸೂಕ್ಷ್ಮವಾಗಿ ಹೆಜ್ಜೆ ಇಡುತ್ತಿದೆ. ಇನ್ನು 15 ದಿನದೊಳಗೆ ಗಜಪಡೆಯ ಅಂತಿಮ ಪಟ್ಟಿ ಸಿದ್ಧಪಡಿಸಬೇಕಾದ ಅನಿವಾರ್ಯತೆಯಲ್ಲಿ ಅರಣ್ಯ ಇಲಾಖೆ ಇರುವುದರಿಂದ ಗಜಪಡೆ ಆಯ್ಕೆ ಪ್ರಕ್ರಿಯೆ ತ್ವರಿತಗತಿಯಲ್ಲಿ ನಡೆಸುತ್ತಿದೆ. ಆ.4ರಂದು ಗಜಪಯಣದ ಮೂಲಕ ಮೊದಲ ತಂಡದಲ್ಲಿ 9 ಆನೆಗಳು ಮೈಸೂರು ಪ್ರವೇಶಿಸಲಿದ್ದು, ಅದಕ್ಕಾಗಿ ಮುಹೂರ್ತ ನಿಗದಿ ಮಾಡಲಾಗಿದೆ.

ಯುಎಸ್ ಓಪನ್‌ನಲ್ಲಿ ಚೊಚ್ಚಲ ಪ್ರಶಸ್ತಿ ಗೆದ್ದ ಕನ್ನಡಿಗ ಆಯುಷ್ ಶೆಟ್ಟಿ



ನ್ಯೂಯಾರ್ಕ್, ಜೂ.30– ಅಮೆರಿಕದ ಲೋವಾದಲ್ಲಿ ನಡೆದ ಯುಎಸ್ ಓಪನ್ ಸೂಪರ್ 300 ಟೂರ್ನಿಯ ಫೈನಲ್‌ನಲ್ಲಿ ಕೆನಡಾದ ಬ್ರಿಯಾನ್ ಯಾಂಗ್ ಅವರನ್ನು ನೇರ ಗೇಮ್‌ಗಳ ಅಂತರದಿಂದ ಮಣಿಸಿರುವ ಕನ್ನಡಿಗ ಆಯುಷ್ ಶೆಟ್ಟಿ ಬಿಡಬ್ಲ್ಯುಎಫ್ ವರ್ಲ್ಡ್ ಟೂರ್‌ನಲ್ಲಿ ತನ್ನ ಚೊಚ್ಚಲ ಪ್ರಶಸ್ತಿಯನ್ನು ಗೆದ್ದಿದ್ದಾರೆ.

20ರ ವಯಸ್ಸಿನ ಆಯುಷ್ ಶೆಟ್ಟಿ ಭಾನುವಾರ 47 ನಿಮಿಷಗಳಲ್ಲಿ ಕೊನೆಗೊಂಡ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ವಿಶ್ವದ ನಂ.33ನೇ ಆಟಗಾರ ಯಾಂಗ್ ಅವರನ್ನು 21–18, 21–13 ಗೇಮ್‌ಗಳ ಅಂತರದಿಂದ ಮಣಿಸಿದರು.

ಸದ್ಯ ವಿಶ್ವ ರ್‍ಯಾಂಕಿಂಗ್‌ನಲ್ಲಿ 34ನೇ ಸ್ಥಾನದಲ್ಲಿರುವ ಆಯುಷ್ ಈ ವರ್ಷ ಪ್ರಶಸ್ತಿ ಗೆದ್ದಿರುವ ಭಾರತದ ಮೊದಲ ಬ್ಯಾಡ್ಮಿಂಟನ್ ಆಟಗಾರ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ವಿದೇಶಿ ನೆಲದಲ್ಲಿ ಭಾರತ ತಂಡವು ಕೆಲ ಸಮಯದಿಂದ ಎದುರಿಸುತ್ತಿದ್ದ ಪುರುಷರ ಸಿಂಗಲ್ಸ್ ಪ್ರಶಸ್ತಿ ಬರವನ್ನು ಅವರು ನೀಗಿಸಿದ್ದಾರೆ. 2023ರಲ್ಲಿ ಲಕ್ಷ್ಯ ಸೇನ್ ಕೆನಡಾ ಓಪನ್‌ನಲ್ಲಿ ಪ್ರಶಸ್ತಿ ಗೆದ್ದ ನಂತರ ಭಾರತದ ಬ್ಯಾಡ್ಮಿಂಟನ್ ಆಟಗಾರರು ವಿದೇಶಿ ನೆಲದಲ್ಲಿ ಫೈನಲ್‌ನಲ್ಲಿ ಗೆಲುವು ದಾಖಲಿಸಿರಲಿಲ್ಲ.

2023ರ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಆಯುಷ್ ಈ ವಾರದ ತನ್ನ ಶ್ರೇಷ್ಠ ಪ್ರದರ್ಶನವನ್ನು ಪ್ರಶಸ್ತಿ ಎತ್ತುವುದರೊಂದಿಗೆ ಅಂತ್ಯಗೊಳಿಸಿದರು. ನಾಲ್ಕನೇ ಶ್ರೇಯಾಂಕದ ಭಾರತದ ಆಟಗಾರ ಡೆನ್ಮಾರ್ಕ್‌ನ ಮ್ಯಾಗ್ನಸ್ ಜೋಹಾನ್ ಸೆನ್ ಅವರನ್ನು 21–17, 21–19 ಗೇಮ್‌ಗಳ ಅಂತರದಿಂದ ಸೋಲಿಸುವ ಮೂಲಕ ಪಂದ್ಯಾವಳಿಯಲ್ಲಿ ತನ್ನ ಅಭಿಯಾನ ಆರಂಭಿಸಿದ್ದರು. ಅಂತಿಮ–16ರ ಸುತ್ತಿನಲ್ಲಿ ತಮ್ಮದೇ ದೇಶದ ತರುಣ್ ಮನ್ನೆಪಲ್ಲಿ ಅವರನ್ನು 21–12, 13–21, 21–15 ಗೇಮ್‌ಗಳ ಅಂತರದಿಂದ ಸೋಲಿಸಿದರು.

ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ ನಂ.70ನೇ ಆಟಗಾರ ಕುವೊ ಕುಯಾನ್ ಲಿನ್‌ರನ್ನು 22–20, 21–9 ಅಂತರದಿಂದ ಸೋಲಿಸಿದ್ದಾರೆ. ಸೆಮಿಫೈನಲ್‌ನಲ್ಲಿ ವಿಶ್ವದ ನಂ.6ನೇ ಆಟಗಾರ ಚೌಟಿಯೆನ್ ಚೆನ್‌ರಿಂದ ಕಠಿಣ ಸವಾಲು ಎದುರಾಗಿತ್ತು. ತೈಪೆ ಓಪನ್‌ನ ಸೆಮಿಫೈನಲ್‌ನಲ್ಲಿ ಆಯುಷ್ ಅವರು ಹಿರಿಯ ಆಟಗಾರ ಚೆನ್‌ಗೆ ಸೋತಿದ್ದರು.

67 ನಿಮಿಷಗಳ ಕಾಲ ನಡೆದಿದ್ದ ಸೆಮಿಫೈನಲ್ ಪಂದ್ಯದಲ್ಲಿ ಆಯುಷ್ ಅವರು ಚೆನ್ ವಿರುದ್ಧ ಆರಂಭಿಕ ಗೇಮ್ ಅನ್ನು 21–23 ಅಂತರದಿಂದ ಸೋತಿದ್ದರು. ಈ ಹಿನ್ನಡೆಯಿಂದ ಬೇಗನೆ ಚೇತರಿಸಿಕೊಂಡ ಆಯುಷ್ ಉಳಿದೆರಡು ಗೇಮ್‌ಗಳನ್ನು 21–15 ಹಾಗೂ 21–14 ಗೇಮ್‌ಗಳ ಅಂತರದಿಂದ ಗೆದ್ದುಕೊಂಡು ತಿರುಗೇಟು ನೀಡಿದರು.

ವಿದ್ಯಾರಣ್ಯಪುರಂ 4ನೇ ಮೇನ್ 3ನೇ ಕ್ರಾಸ್ 'ಸರಗಳ್ಳರಿಗೆ ಸುರಕ್ಷಿತ ಸ್ಥಳ'!

● 20 ದಿನದಲ್ಲಿ ಮೂವರು ಮಹಿಳೆಯರ ಸರಗಳವಿಗೆ ಯತ್ನ; ಒಂದರಲ್ಲಿ ಯಶಸ್ಸು ● ಇಷ್ಟಾದರೂ ಪೊಲೀಸರು ಇತ್ತ ಗಮನ ಹರಿಸಿಲ್ಲ

ಕ್ರೈಂ ಬಾಕ್ಸ್

ಮೈಸೂರು, ಜೂ.30– ಮೈಸೂರು ವಿದ್ಯಾರಣ್ಯಪುರಂನ 4ನೇ ಮೇನ್ ಮೂರನೇ ಕ್ರಾಸ್, ಸರಗಳ್ಳರಿಗೆ ಪ್ರಶಸ್ತ ಸ್ಥಳವಾದಂತಿದೆ. ಇದೇ ಸ್ಥಳದಲ್ಲಿ ಕಳೆದ 20 ದಿನಗಳಲ್ಲಿ ಮೂವರು ಮಹಿಳೆಯರು ಸರಗಳ್ಳರ ದಾಳಿಗೆ ಗುರಿಯಾಗಿರುವುದು ಆತಂಕ ಹೆಚ್ಚಿಸಿದೆ.

ಇಂದು ರಾತ್ರಿ ಸುಮಾರು 8 ಗಂಟೆ ವೇಳೆಯಲ್ಲಿ ಅಂಗಡಿಯಿಂದ ಮನೆಗೆ ನಡೆದುಕೊಂಡು ಹೋಗುತ್ತಿದ್ದ ನವವಿವಾಹಿತೆಯ ಮಾಂಗಲ್ಯ ಸರ ಕಿತ್ತುಕೊಳ್ಳಲು ಖದೀಮನೊಬ್ಬ ಯತ್ನಿಸಿದ್ದಾನೆ. ಆ ವೇಳೆ ನವವಿವಾಹಿತೆ ಸರವನ್ನು ಭದ್ರವಾಗಿ ಹಿಡಿದುಕೊಂಡು ಸಹಾಯಕ್ಕೆ ಕೂಗಿಕೊಂಡಿದ್ದಾರೆ. ಎಷ್ಟೇ ಪ್ರಯತ್ನಿಸಿದರೂ ಸರ ಕೀಳಲು ಸಾಧ್ಯವಾಗದೆ ಕೋಪಗೊಂಡ ಖದೀಮ, ಮಹಿಳೆಯ ತಲೆಗೆ ಹಲವು ಬಾರಿ ಕೈಗಳಿಂದ ಹೊಡೆದಿದ್ದಾನೆ. ಅಷ್ಟರಲ್ಲಿ ಏನೋ ಗಲಾಟೆ ಆಗುತ್ತಿರಬಹುದು ಎಂದು ಸಾರ್ವಜನಿಕರು ಹತ್ತಿರ ಹೋಗುವಷ್ಟರಲ್ಲಿ ಖದೀಮ ಪಲ್ಸರ್ ಬೈಕ್‌ನಲ್ಲಿ ಪರಾರಿಯಾಗಿದ್ದಾನೆ. ಫುಲ್ ಹೆಲ್ಮೆಟ್ ಧರಿಸಿದ್ದರಿಂದ ಆತನ ಮುಖ ಕಾಣಿಸಿಲ್ಲ. ಖದೀಮನ ಹಲ್ಲೆಯಿಂದ ಗಾಯಗೊಂಡಿರುವ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಿರುವುದಾಗಿ ತಿಳಿದುಬಂದಿದೆ.

ನಾಲ್ಕೈದು ದಿನಗಳ ಹಿಂದೆ ಇದೇ ಸ್ಥಳದಲ್ಲಿ ಸರಕಳವಿಗೆ ಯತ್ನಿಸಲಾಗಿತ್ತು. ಅತ್ತೆ–ಸೊಸೆ ಅಂಗಡಿಗೆ ಹೋಗಿ ಮನೆಗೆ ವಾಪಸ್ಸಾಗುವಾಗ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಬಂದ ಖದೀಮ ಅತ್ತೆಯ ಮಾಂಗಲ್ಯ ಸರ ಕಿತ್ತುಕೊಳ್ಳಲು ಯತ್ನಿಸಿದ್ದ. ಆದರೆ ಅವರು ಸರ ಹಾಗೂ ಬಟ್ಟೆ ಸೇರಿಸಿ ಪಿನ್ ಹಾಕಿದ್ದರಿಂದ ಸರ ಉಳಿದಿತ್ತು ಖದೀಮ ಸರ ಎಳೆದಾಗ ಎರಡು ತುಂಡಾಗಿ, ಒಂದು ಭಾಗ ನೆಲಕ್ಕೆ ಬಿದ್ದರೆ ಉಳಿದಿದ್ದು ಕೊರಳಿನಲ್ಲೇ ಉಳಿದಿತ್ತು. ಸರ ಎಳೆದಾಗ ಮಹಿಳೆಯ ಕೊರಳಿಗೆ ಸಣ್ಣ ಗಾಯವಾಗಿತ್ತು.

ಹದಿನೈದು ದಿನಗಳ ಹಿಂದೆಯೂ ಈ ಜಾಗದಲ್ಲೇ ಮಹಿಳೆಯೊಬ್ಬರ ಸರವನ್ನು ಖದೀಮನೊಬ್ಬ ಕಿತ್ತುಕೊಂಡು ಹೋಗಿದ್ದಾನೆ. ಏಕಾಏಕಿ ಖದೀಮರು ಸರ ಕಿತ್ತುಕೊಂಡು ಪರಾರಿಯಾದಾಗ ಮಹಿಳೆ ಆಘಾತಗೊಂಡು, ಕೂಗುವುದಕ್ಕೂ ಆಗದ ಸ್ಥಿತಿಯಲ್ಲಿದ್ದದ್ದರಿಂದ ಖದೀಮರು ಯಾವುದೇ ಭಯವಿಲ್ಲದೆ ಸ್ಥಳದಿಂದ ಕಾಲ್ಕಿತ್ತಿದ್ದರು. ಆ ಘಟನೆಯಲ್ಲೂ ಮಹಿಳೆಯ ಕೊರಳಿಗೆ ಗಾಯವಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಇಷ್ಟಾದರೂ ಗಸ್ತು ಇಲ್ಲ: ವಿದ್ಯಾರಣ್ಯಪುರಂ ನಾಲ್ಕನೇ ಮೇನ್, ಮೂರನೇ ಕ್ರಾಸ್ ಅತ್ಯಂತ ಅಪಾಯಕಾರಿ ಸ್ಥಳವಾಗಿ ಬದಲಾಗಿದೆ. ಈ ಸ್ಥಳದಲ್ಲಿ ಬೀದಿದೀಪಗಳು ಸಮರ್ಪಕವಾಗಿಲ್ಲ. ದುಷ್ಕೃತ್ಯದ ನಂತರ ತಪ್ಪಿಸಿಕೊಳ್ಳಲು ಮೂರ್ನಾಲ್ಕು ದಾರಿಗಳಿವೆ. ಆದ್ದರಿಂದ ಕತ್ತಲಾಗುತ್ತಿದ್ದಂತೆ ಖದೀಮರು ಕಾರ್ಯಾಚರಣೆಗೆ ಇಳಿಯುತ್ತಾರೆ. ಹೊಂಚು ಹಾಕಿ, ಈ ರಸ್ತೆಯಲ್ಲಿ ಒಂಟಿಯಾಗಿ ಬರುವ ಮಹಿಳೆಯರನ್ನೇ ಗುರಿಯಾಗಿಸುತ್ತಿದ್ದಾರೆ. ದ್ವಿಚಕ್ರ ವಾಹನದಲ್ಲಿ ಬಂದು ಏಕಾಏಕಿ ಸರ ಕಿತ್ತುಕೊಂಡು ಪರಾರಿಯಾಗುತ್ತಾರೆ. 20 ದಿನಗಳಲ್ಲಿ ನಡೆದಿರುವ ಮೂರು ಘಟನೆಗಳಲ್ಲೂ ಮಹಿಳೆಯರು ಗಾಯಗೊಂಡಿದ್ದಾರೆ. ಎಷ್ಟೋ ಮಹಿಳೆಯರು ಭಯದಿಂದ ದೂರು ನೀಡುವ ಪ್ರಯತ್ನವನ್ನೂ ಮಾಡಿಲ್ಲ. ಇಲ್ಲಿ ನಿರಂತರವಾಗಿ ಸರಗಳ್ಳತನ ಘಟನೆಗಳು ನಡೆಯುತ್ತಿರುವ ಬಗ್ಗೆ ಪೊಲೀಸರ ಗಮನಕ್ಕೆ ತಂದು ಗಸ್ತು ನಿಯೋಜನೆಗೆ ಮನವಿ ಮಾಡಿದರೂ ಯಾವುದೇ ಕ್ರಮ ವಹಿಸಿಲ್ಲ. ಈ ಭಾಗದಲ್ಲಿ ಪೊಲೀಸರು ಓಡಾಡಿರುವುದನ್ನು ನೋಡಿಯೇ ಇಲ್ಲ. ಈಗಲಾದರೂ ಗಸ್ತು ಜೊತೆಗೆ ಒಂದಿಬ್ಬರು ಸಿಬ್ಬಂದಿಯನ್ನು ಈ ಜಾಗಕ್ಕೆ ನಿಯೋಜಿಸಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ಲಾಂಗ್ ಝಳಪಿಸಿದ ಪ್ರಕರಣದಲ್ಲಿ ಒಬ್ಬನ ಬಂಧನ; ಮತ್ತೊಬ್ಬನ ಶೋಧ

ಮೈಸೂರು, ಜೂ.30– ಮೈಸೂರಲ್ಲಿ ಹಾಡಹಗಲೇ ಲಾಂಗ್ ಝಳಪಿಸಿರುವ ವಿಡಿಯೋ ಸಾಮಾಜಿಕ ಮಾಧ್ಯಮ ಜಾಲತಾಣದಲ್ಲಿ ವೈರಲ್ ಆಗಿರುವ ಬೆನ್ನಲ್ಲೇ ಕೃಷ್ಣರಾಜ ಠಾಣೆ ಪೊಲೀಸರು ಓರ್ವನನ್ನು ಬಂಧಿಸಿ, ಮತ್ತೋರ್ವನ ಪತ್ತೆಗೆ ಶೋಧ ನಡೆಸಿದ್ದಾರೆ.

ಅಗ್ರಹಾರದ ಉತ್ತರಾದಿಮಠದ ರಸ್ತೆಯಲ್ಲಿ ಕಳೆದ ಶನಿವಾರ ಈ ಘಟನೆ ನಡೆದಿದೆ ಎನ್ನಲಾಗಿದ್ದು, ಈ ಸಂಬಂಧ ಪೊಲೀಸರು ಸುಮೋಟೊ ಕೇಸ್ ದಾಖಲಿಸಿಕೊಂಡು ತ್ವರಿತ ಕ್ರಮಕೈಗೊಂಡಿದ್ದಾರೆ. ಸೆಕ್ಯೂರಿಟಿ ಏಜೆನ್ಸಿಯೊಂದರ ಮ್ಯಾನೇಜರ್ ದಿನೇಶ್‌ನನ್ನು ಇಂದು ಬಂಧಿಸಲಾಗಿದ್ದು, ಇವರೊಂದಿಗೆ ಜಗಳವಾಡಿದ್ದ ಭದ್ರತಾ ಸಿಬ್ಬಂದಿಯ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ.

ಎರಡು ತಿಂಗಳ ವೇತನ ನೀಡಿಲ್ಲ ಎಂಬ ವಿಚಾರಕ್ಕೆ ಭದ್ರತಾ ಸಿಬ್ಬಂದಿ ಹಾಗೂ ಮ್ಯಾನೇಜರ್ ನಡುವೆ ಜಗಳ ನಡೆದಿತ್ತು. ಆ ವೇಳೆ ರಸ್ತೆಯ ಮೂಲೆಯಲ್ಲಿ ಯಾರೋ ಇಟ್ಟಿದ್ದ ಕಳೆ ಕತ್ತರಿಸುವ ಉದ್ದವಾದ ಮಚ್ಚು ಭದ್ರತಾ ಸಿಬ್ಬಂದಿಯ ಕಣ್ಣಿಗೆ ಬಿದ್ದಿದೆ. ಆವೇಶದಲ್ಲಿ ಅದನ್ನು ತೆಗೆದುಕೊಂಡು ಮ್ಯಾನೇಜರ್ ಬಳಿ ಹೋಗಿದ್ದಾನೆ ಆದರೆ ಅದರಿಂದ ಹಲ್ಲೆ ನಡೆಸಲು ಯತ್ನಿಸಿಲ್ಲ. ಅಷ್ಟರಲ್ಲಿ ಅಲ್ಲಿದ್ದವರು ಮಚ್ಚನ್ನು ಕಿತ್ತುಕೊಂಡು ಪಕ್ಕದಲ್ಲಿಟ್ಟಿದ್ದಾರೆ. ಆಗ ಮ್ಯಾನೇಜರ್ ಕೂಡ ಅದನ್ನು ಎತ್ತಿಕೊಂಡಿದ್ದಾನೆ. ಯಾರೂ ಅದರಿಂದ ಹಲ್ಲೆ ನಡೆಸುವ ಪ್ರಯತ್ನ ಮಾಡಿದುತಿಲ್ಲ ಆದರೂ ಸಾರ್ವಜನಿಕವಾಗಿ ಈ ರೀತಿಯಲ್ಲಿ ವರ್ತಿಸಿ, ಭಯಭೀತ ಹಾಗೂ ಆತಂಕದ ವಾತಾವರಣ ಸೃಷ್ಟಿಸಿದ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೃದಯಾಘಾತಕ್ಕೆ ಒಂದೇ ದಿನ 3 ಬಲಿ


40 ದಿನಗಳಲ್ಲಿ 21 ಸಾವು

ಹಾಸನ, ಜೂನ್ 30– ಹಾಸನ ಜಿಲ್ಲೆಯಲ್ಲಿ ಹೃದಯಾಘಾತ ಸರಣಿ ಮುಂದುವರಿದಿದ್ದು, ಒಂದೇ ದಿನ ಮೂವರು ಮೃತಪಟ್ಟಿದ್ದಾರೆ. ಇದರೊಂದಿಗೆ, ಕಳೆದ 40 ದಿನಗಳಲ್ಲಿ ಹೃದಯಾಘಾತದಿಂದ ಮೃತಪಟ್ಟವರ ಸಂಖ್ಯೆ 21ಕ್ಕೆ ಏರಿಕೆಯಾಗಿದೆ. ಹಾಸನ ಜಿಲ್ಲೆಯ ಬೇಲೂರಿನ ಜೆ.ಪಿ. ಲೇಪಾಕ್ಷಿ (50), ಹೊಳೆನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕ ಮುತ್ತಯ್ಯ (58), ನುಗ್ಗೆಹಳ್ಳಿ ನಾಡಕಚೇರಿ ಡಿ ಗ್ರೂಪ್ ನೌಕರ ಕುಮಾರ್ (53) ಕೂಡ ಹೃದಯಾಘಾತದಿಂದ ಸಾವಿಗೀಡಾಗಿದ್ದಾರೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ನುಗ್ಗೆಹಳ್ಳಿ ಗ್ರಾಮದ ನಾಡ ಕಚೇರಿ ಡಿ ಗ್ರೂಪ್ ನೌಕರ ಕುಮಾರ್‌ಗೆ ಭಾನುವಾರ ರಾತ್ರಿ ಮನೆಯಲ್ಲಿ ಮಲಗಿದ್ದ ವೇಳೆ ಎದೆನೋವು ಕಾಣಿಸಿಕೊಂಡಿದೆ. ತಕ್ಷಣವೇ ಅವರನ್ನು ಚನ್ನರಾಯಪಟ್ಟಣ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ. ಇವರು ಚನ್ನರಾಯಪಟ್ಟಣ ತಾಲೂಕಿನ ನಲ್ಲೂರು ಗ್ರಾಮದ ನಿವಾಸಿಯಾಗಿದ್ದಾರೆ.

ನಿಯಂತ್ರಣಕ್ಕೆ ಸೂಕ್ತ ಕ್ರಮ: ಸಿಎಂ ಸಿದ್ದರಾಮಯ್ಯ: ಹಾಸನ ಜಿಲ್ಲೆಯಲ್ಲಿ ಹೃದಯಾಘಾತ ಹೆಚ್ಚಾದ ವಿಚಾರವಾಗಿ ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು, ಆ ಬಗ್ಗೆ ಪರಿಶೀಲನೆ ನಡೆಸುತ್ತೇನೆ. ಹೃದಯಘಾತ ಹೆಚ್ಚಾಗಲು ಕಾರಣ ಏನು ಎಂಬುದಕ್ಕೆ ತಜ್ಞರ ಮೂಲಕ ಮಾಹಿತಿ ತರಿಸಿಕೊಳ್ಳುತ್ತೇನೆ. ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ್ದಾರೆ.

ಎರಡು ದಿನ ಹಿಂದಷ್ಟೇ ಹೃದಯಾಘಾತದಿಂದ ಮೃತಪಟ್ಟಿದ್ದ ಆಟೋ ಚಾಲಕ: ಎರಡು ದಿನಗಳ ಹಿಂದಷ್ಟೇ ಹಾಸನದ ಸಿದ್ದೇಶ್ವರ್ ನಗರದ ನಿವಾಸಿ ಗೋವಿಂದ (37) ಎಂಬವರು ಹೃದಯಾಘಾತದಿಂದ ಮೃತಪಟ್ಟಿದ್ದರು. ಆಟೋ ಚಾಲಕರಾಗಿರುವ ಗೋವಿಂದ ಅವರಿಗೆ ಆಟೋ ಚಲಾಯಿಸುವಾಗ ಎದೆನೋವು ಕಾಣಿಸಿಕೊಂಡಿತ್ತು. ಕೂಡಲೆ ಅವರೇ ಆಟೋ ಚಲಾಯಿಸಿಕೊಂಡು ಜಿಲ್ಲಾಸ್ಪತ್ರೆಗೆ ತೆರಳಿದ್ದರು. ಆದಾಗ್ಯೂ, ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದರು.




ಏತನ್ಮಧ್ಯೆ, ಹಾಸನ ಜಿಲ್ಲೆಯಲ್ಲಿ ಮತ್ತು ಕರ್ನಾಟಕದ ಇತರ ಕಡೆಗಳಲ್ಲಿ ಯುವಕ ಯುವತಿಯರಲ್ಲೇ ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಜತೆ ಚರ್ಚಿಸಲು ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿಎನ್ ಮಂಜುನಾಥ್ ಮುಂದಾಗಿದ್ದಾರೆ. ಹೃದಯಾಘಾತ ನಿಯಂತ್ರಣಕ್ಕೆ ಸಂಬಂಧಿಸಿ ಸಿ.ಎನ್. ಮಂಜುನಾಥ್ ಈಗಾಗಲೇ ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾ ಮತ್ತು ಕರ್ನಾಟಕ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಜೊತೆಯೂ ಚರ್ಚೆ ಮಾಡಿದ್ದಾರೆ.

ಮತ್ತೊಂದೆಡೆ, ಎದೆ ನೋವಿನಿಂದ ಬಳಲಿ ಬರುವವರಿಗೆ ಜಯದೇವ ಆಸ್ಪತ್ರೆ ಸಹಯೋಗದೊಂದಿಗೆ ಚಿಕಿತ್ಸೆ ನೀಡುವುದಕ್ಕಾಗಿ ಹಾಸನ ಜಿಲ್ಲೆಯ ಬೇಲೂರು, ಸಕಲೇಶಪುರ, ಆಲೂರು, ಅರಕಲಗೂಡು ಹಾಗು ಚನ್ನರಾಯಪಟ್ಟಣ ತಾಲೂಕು ಆಸ್ಪತ್ರೆಗಳಲ್ಲಿ ಸ್ಟೆಮಿ ಯೋಜನೆ ಜಾರಿ ಮಾಡುವಂತೆ ಜಿಲ್ಲಾ ಅರೋಗ್ಯ ಅಧಿಕಾರಿ ಡಾ. ಅನಿಲ್ ಕುಮಾರ್ ಅವರು ಆರೋಗ್ಯ ಇಲಾಖೆಗೆ ಈಗಾಗಲೇ ಮನವಿ ಮಾಡಿದ್ದಾರೆ.

ನಿಮ್ಮ ಸಹಕಾರ, ಆಶೀರ್ವಾದ ನನ್ನ ಮೇಲಿರಲಿ: ಡಿಕೆಶಿ

ಮಂಡ್ಯ ಜನರಲ್ಲಿ ಮನವಿ

- ಎಲ್ಲರಿಗೂ ಅನುದಾನ ಸಿಗುತ್ತದೆ, ತಾಳ್ಮೆಯಿಂದಿರಿ
- ಕಾವೇರಿ ಜಲಾನಯನ ಪ್ರದೇಶದ ಅಭಿವೃದ್ಧಿಗೆ ಸಾವಿರ ಕೋಟಿ ಅನುದಾನ
- ಅಮ್ಯೂಸ್ಮೆಂಟ್ ಪಾರ್ಕ್ ನಿರ್ಮಾಣವಾದರೆ ಮಂಡ್ಯ, ಮೈಸೂರು ಜನಕ್ಕೆ ಉದ್ಯೋಗ
- ಕಾವೇರಿ ಆರತಿ, ಅಮ್ಯೂಸ್ಮೆಂಟ್ ಪಾರ್ಕ್‌ಗೆ ವಿರೋಧ ಮಾಡದಂತೆ ರೈತರಲ್ಲಿ ಮನವಿ



ಕೃಷ್ಣರಾಜಸಾಗರ, ಜೂ.30(ಮೋಹನ್‌ರಾಜ್)– ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಮಾತು ಸದ್ದು ಮಾಡುತ್ತಿದ್ದರೆ, ಇತ್ತ ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ನಿಮ್ಮ ಸಹಕಾರ, ಆಶೀರ್ವಾದ ನನ್ನ ಮೇಲಿರಲಿ. ನೇರವಾಗಿ ಹಲವು ವಿಚಾರ ಮಾತನಾಡಿದ್ದೇನೆ. ನನಗೆ ಸಹಕಾರ ನೀಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಂಡ್ಯ ಜನತೆಯಲ್ಲಿ ಕೋರಿದ್ದಾರೆ.

ಕೆಆರ್‌ಎಸ್‌ಗೆ ಬಾಗಿನ ಅರ್ಪಣೆ ಕಾರ್ಯಕ್ರಮದ ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಅವರು, ಈ ವೇದಿಕೆಯಲ್ಲಿ ದಿಟ್ಟತನದಿಂದ ನೇರವಾಗಿ ಹಲವು ವಿಚಾರ ಮಾತನಾಡಿದ್ದೇನೆ. ಅದನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿ, ನನಗೆ ಸಹಕಾರ ನೀಡಿ ಎಂದು ಮನವಿ ಮಾಡಿದರು.

ತಾಳ್ಮೆಯಿಂದ ಇರಿ: ಅನುದಾನ ಕೇಳುವವರು ತಾಳ್ಮೆಯಿಂದ ಇರಬೇಕು. ಕೊಟ್ಟ ಮಾತನ್ನು ರಾಜ್ಯ ಸರ್ಕಾರ ಉಳಿಸಿಕೊಳ್ಳುತ್ತದೆ. ಇದು ಕರ್ನಾಟಕ ಕಾಂಗ್ರೆಸ್ ಸರ್ಕಾರದ ಬದ್ಧತೆಯಾಗಿದ್ದು, ಅನುದಾನ ಸಿಗುವವರೆಗೂ ಯಾರೂ ಬಹಿರಂಗವಾಗಿ ಮಾತನಾಡದಂತೆ ಪರೋಕ್ಷವಾಗಿ ಪಕ್ಷದ ಶಾಸಕರಿಗೆ ಸೂಚನೆ ನೀಡಿದರು.

ಕಾವೇರಿ ಜಲಾನಯನ ಪ್ರದೇಶಕ್ಕೆ 2 ಸಾವಿರ ಕೋಟಿ: ಕಾವೇರಿ ಜಲಾನಯನ ಪ್ರದೇಶಕ್ಕೆ ಸುಮಾರು 2 ಸಾವಿರ ಕೋಟಿಗೂ ಅಧಿಕ ಅನುದಾನವನ್ನು ಈ ವರ್ಷ ನಾವು ಮಂಜೂರಾತಿ ಮಾಡಿದ್ದೇವೆ. ಕಾವೇರಿ ಜಲಾನಯನ ಪ್ರದೇಶದ ಸಮಗ್ರ ಅಭಿವೃದ್ಧಿಯೇ ನಮ್ಮ ಗುರಿಯಾಗಿದ್ದು, ಪ್ರತಿ ಕ್ಷೇತ್ರವನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಮಂಡ್ಯ ಜಿಲ್ಲೆಗೆ ಈಗಾಗಲೇ ಸಾವಿರ ಕೋಟಿಗೂ ಹೆಚ್ಚು ಅನುದಾನಕ್ಕೆ ಅನುಮೋದನೆ ನೀಡಿದ್ದೇವೆ. ಆರ್ಥಿಕ ಇಲಾಖೆಯವರು ಹಂತಹಂತವಾಗಿ ಹಣವನ್ನು ಬಿಡುಗಡೆ ಮಾಡುತ್ತಾರೆ ಎಂದು ಹೇಳಿದರು.

ನೀರಾವರಿಗೆ ಹೆಚ್ಚಿನ ಪ್ರೋತ್ಸಾಹ: ನಮ್ಮ ಸರ್ಕಾರ ನೀರಾವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದೆ. ಮಂಡ್ಯದಲ್ಲಿ ಕಾವೇರಿ ನಾಲಾ ಆಧುನೀಕರಣಕ್ಕೆ ಸಾವಿರ ಕೋಟಿ ಖರ್ಚು ಮಾಡಿದ್ದೇವೆ. ಗುತ್ತಿಗೆದಾರರ ಹಣ ಬಿಡುಗಡೆ ತಡವಾಗಿದೆ. ಶೀಘ್ರ ಹಣ ಸಿಗಲಿದ್ದು, ಈ ಹಿಂದೆ ಯಡಿಯೂರಪ್ಪ, ಕುಮಾರ ಸ್ವಾಮಿ ಅವರುಗಳು ಕೆಲ ಕಾಮಗಾರಿಗಳಿಗೆ ಬಜೆಟ್‌ಗಿಂತ ಹೆಚ್ಚು ಅನುಮೋದನೆ ನೀಡಿದ್ದಾರೆ. ಇವು ಸಮಸ್ಯೆಗಳಾಗಿವೆ ಎಂದು ತಿಳಿಸಿದರು.

ತಮಿಳುನಾಡಿಗೆ ಹೆಚ್ಚಿನ ನೀರು ಹೋಗಿದೆ: ಪ್ರಸ್ತುತ ತಮಿಳುನಾಡಿಗೆ 9 ಟಿಎಂಸಿ ನೀರು ಬಿಡಬೇಕಿತ್ತು. ಈಗಾಗಲೇ 30ಕ್ಕೂ ಹೆಚ್ಚು ಟಿಎಂಸಿ ನೀರು ಹೋಗಿದೆ. ಕಳೆದ ವರ್ಷ 177 ಟಿಎಂಸಿ ನೀರನ್ನು ನಾವು ಅವರಿಗೆ ಕೊಡಬೇಕಿತ್ತು. ಆದರೆ ಉತ್ತಮ ಮಳೆಯಿಂದಾಗಿ ಡ್ಯಾಂ ಭರ್ತಿಯಾಗಿ 305ಕ್ಕೂ ಹೆಚ್ಚು ಟಿಎಂಸಿ ನೀರು ಹೋಗಿದ್ದು, 178 ಟಿಎಂಸಿ ಹೆಚ್ಚಾಗಿ ಬಿಟ್ಟಿದ್ದೇವೆ ಎಂದು ವಿವರಿಸಿದರು.

ಡ್ಯಾಂಗಳ ರಕ್ಷಣೆಗೆ ಬದ್ಧ: ತುಂಗಭದ್ರ ನದಿ ಗೇಟ್ ಮುರಿದು ಬಿದ್ದಾಗ ವಿಪಕ್ಷಗಳು ನಮ್ಮನ್ನು ಟೀಕಿಸಿದ್ದವು. 15 ದಿನಗಳಲ್ಲಿ ಡ್ಯಾಂ ಒಡೆದು ಹೋಗಲಿದೆ ಅಂದಿದ್ದರು. ಒಂದೇ ದಿನಕ್ಕೆ ಗೇಟ್ ರಿಪೇರಿ ಮಾಡಿ, ರೈತರ ಬದುಕು ಹಸನಾಗಿ, ಎರಡು ಬೆಳೆಗೆ ನೀರು ಕೊಟ್ಟ ಇತಿಹಾಸ ನಮ್ಮ ಸರ್ಕಾರಕ್ಕಿದೆ. ಟೀಕಿಸುವವರು ಮಾತನಾಡುವವರು ಏನು ಸಾಕ್ಷಿ ಗುಡ್ಡೆ ಬಿಟ್ಟಿದ್ದಾರೆಂಬುದನ್ನು ಹೇಳಬೇಕು. ಎಲ್ಲಾ ಡ್ಯಾಂ ದುರಸ್ತಿ ಮಾಡಲು, ಗೇಟ್ ಸರಿಪಡಿಸಲು ಒಂದು ಟೆಕ್ನಿಕಲ್ ತಂಡವನ್ನು ನೇಮಿಸಿದ್ದೇವೆ. ಅವರಿಂದ ವರದಿ ತರಿಸಿಕೊಂಡು ಹಂತಹಂತವಾಗಿ ಕಾಮಗಾರಿ ಮಾಡಲು ಹೊರಟಿದ್ದೇವೆ ಎಂದರು.

ದಸರಾ ಮಾದರಿಯಲ್ಲಿ ವಿದ್ಯುತ್ ದೀಪ: ಹೆಚ್ಚು ಜನರನ್ನು ಆಕರ್ಷಿಸಲು ಬೃಂದಾವನಕ್ಕೆ ಮೈಸೂರು ದಸರಾ ದೀಪಾಲಂಕಾರ ಮಾದರಿಯಲ್ಲಿ ದೀಪಾಲಂಕಾರ ಮಾಡಲು ಚಿಂತಿಸಿದ್ದೇವೆ. ಫೌಂಟನ್, ವಿದೇಶಿ ಹೂಗಳು ತಂದು ಸುಸಜ್ಜಿತ ಗಾರ್ಡನ್ ಮಾಡಿ, ಆಕರ್ಷಣೆಯ ಪ್ರವಾಸಿ ತಾಣ ಮಾಡಲು ಸಂಕಲ್ಪ ಹೊಂದಿದ್ದೇವೆ. ಖಾಸಗಿಯವರಿಗೆ ಬಂಡವಾಳ ಹೂಡಲು ಆಹ್ವಾನಿಸಿದ್ದು, ಇದಕ್ಕೆ ಜನರ ಸಹಕಾರ ಅಗತ್ಯ ಎಂದು ತಿಳಿಸಿದರು.

ಕಾವೇರಿ ಆರತಿಗೆ ವಿರೋಧ ಬೇಡ: ಕಾವೇರಿ ಆರತಿ ಮೂಲಕ ಅರ್ಧ ಕಿಮೀ ದೂರದಲ್ಲಿ ದೇವರಿಗೆ ಪೂಜೆ ಸಲ್ಲಿಸಲು ಚಿಂತನೆ ನಡೆಸಿದ್ದೇವೆ. ನಮ್ಮ ಸರ್ಕಾರ ದೇವರ ಮೇಲೆ ನಂಬಿಕೆ ಇಟ್ಟಿದೆ. ಪ್ರಯತ್ನ ವಿಫಲವಾಗಬಹುದು. ಪ್ರಾರ್ಥನೆ ವಿಫಲವಾಗುವುದಿಲ್ಲ. ಪೂಜೆ ಸಲ್ಲಿಸಲು ಅರ್ಜಿ ಹಾಕಬೇಕೇ?, ಅನುಮತಿ ಬೇಕೆ ಎಂದು ಪ್ರಶ್ನಿಸಿದ ಅವರು, ಪ್ರವಾಸೋದ್ಯಮ ಅಭಿವೃದ್ಧಿ ಮಾಡಿ, ಪ್ರವಾಸಿಗರು ಕೂರಲು ಜಾಗ ಕಲ್ಪಿಸಿದರೆ ತಪ್ಪೇ? ಅಮ್ಯೂಸ್ಮೆಂಟ್ ಪಾರ್ಕ್, ಕಾವೇರಿ ಆರತಿಯಿಂದ ಮಂಡ್ಯ ಮತ್ತು ಮೈಸೂರಿನ 1500 ಮಂದಿಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಬೃಂದಾವನ ಉತ್ತೇಜಿಸಿದರೆ, 3000 ಮಂದಿ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ. ಅದಕ್ಕೆ ಕೆಲವರು ವಿರೋಧ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾವೇರಿ ಮಾತೆಯ ಸನ್ನಿಧಿಯಲ್ಲಿ ಕೈ ಮುಗಿದು ಕೇಳುತ್ತೇನೆ ಇದನ್ನು ವಿರೋಧಿಸಬೇಡಿ, ವಿರೋಧದಿಂದ ಲಾಭವೇನು. ವಿರೋಧಿಸುವವರು ಮನೆಯಲ್ಲಿ ಪೂಜೆ ಮಾಡುತ್ತಾರೆ, ದೇವಾಲಯಕ್ಕೆ ಹೋಗುತ್ತಾರೆ, ಮನೆಯಲ್ಲಿ ಶುಭ ಸಮಾರಂಭಕ್ಕೆ, ಮದುವೆಗೆ ಪೂಜಿಸುವವರು, ಸರ್ಕಾರಕ್ಕೆ ಒಳಿತಾಗಲಿ, ಡ್ಯಾಂಗೆ ಒಳಿತಾಗಲಿ ಎಂದು ಪೂಜೆ ಮಾಡಿದರೆ ವಿರೋಧಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾಡಿಗೆ ಒಳಿತಾಗಲಿ: ಇದೊಂದು ಐತಿಹಾಸಿಕ ದಿನವಾಗಿದೆ. ಹುಟ್ಟು ನಮ್ಮದಲ್ಲ ಸಾವು ನಮ್ಮದಲ್ಲ, ಭೂಮಿ, ಪ್ರಕೃತಿ ನಮ್ಮದಲ್ಲ, ಇವೆಲ್ಲವೂ ಭಗವಂತನ ಕೈಯಲ್ಲಿದೆ. ನಾವು ಸಂತೋಷಪಡುವುದಕ್ಕೂ ಮುನ್ನ ನಮ್ಮನ್ನ ನಂಬಿದ ಜನರಿಗೆ ಎಷ್ಟು ಸಂತೋಷ ಉಂಟು ಮಾಡುತ್ತೇವೆಂಬುದು ಮುಖ್ಯ. ಈ ನಿಟ್ಟಿನಲ್ಲಿ ನಾವೆಲ್ಲಾ ಸೇರಿ ಕೆಲಸ ಮಾಡುತ್ತಿದ್ದೇವೆ. ಕಳೆದ ವರ್ಷ ಇದೇ ವೇದಿಕೆಯಲ್ಲಿ ಕನ್ನಂಬಾಡಿ ಕಟ್ಟೆ ನಮ್ಮೆಲ್ಲರ ಅನ್ನದ ತಟ್ಟೆ ಎಂದು ಹೇಳಿದ್ದೆ. ಸಮಸ್ತ ಜೀವಿಗಳಿಗೆ ಮೊದಲು ನೀರು ಬೇಕು. ಕಾವೇರಿ ನಮ್ಮೆಲ್ಲರ ಜೀವಧಾರೆಯಾಗಿದೆ. ಕೃಷ್ಣರಾಜಸಾಗರ ನಮ್ಮೆಲ್ಲರ ಸಮೃದ್ಧಿಯ ಆಗರ. ಕನ್ನಂಬಾಡಿ ಭರ್ತಿಯಾದಾಗ ನಾವು ಸಂತೃಪ್ತಿಯಿಂದ ಬದುಕುತ್ತೇವೆ. ಇವತ್ತು ಕಾವೇರಿ ತಾಯಿಗೆ ನಾವು ಶ್ರದ್ಧಾಪೂರ್ವಕವಾಗಿ ಭಕ್ತಿಯನ್ನು ಅರ್ಪಿಸಿದ್ದೇವೆ.

ಭಾರತದಲ್ಲೇ ಅತ್ಯಂತ ಶ್ರೇಷ್ಠವಾದ ನದಿ ಕಾವೇರಿ. ನಮ್ಮ ರಾಜ್ಯದಲ್ಲಿ ಹುಟ್ಟಿ ತಮಿಳುನಾಡು, ಕೇರಳ, ಬೆಂಗಳೂರು ನಗರಕ್ಕೆ ಈ ನೀರು ತಲುಪುತ್ತದೆ. ದೊಡ್ಡ ಯೋಜನೆಯನ್ನು ರಾಜ್ಯದಲ್ಲಿ ಹಮ್ಮಿಕೊಂಡಿದ್ದೇವೆ ಎಂದು.

ಇಂದಿನಿಂದ ರೈಲು ಹೊರಡುವ 8 ಗಂಟೆಯ ಮೊದಲು ರಿಸರ್ವೇಷನ್ ಲಿಸ್ಟ್ ಔಟ್

ನವದೆಹಲಿ, ಜೂ.30– ಇನ್ನು ಮುಂದೆ ರೈಲು ಹೊರಡುವ 8 ಗಂಟೆಯ ಮೊದಲು ರಿಸರ್ವೇಷನ್ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಭಾರತೀಯ ರೈಲ್ವೇ ತಿಳಿಸಿದೆ.

ಪ್ರಸ್ತುತ 4 ಗಂಟೆಯ ಮೊದಲು ರಿಸರ್ವೇಷನ್ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತಿದೆ. ಆದರೆ ಜುಲೈ 1 ರಿಂದ ರೈಲು ಹೊರಡುವ 8 ಗಂಟೆಯ ಮೊದಲು ರಿಸರ್ವೇಷನ್ ಚಾರ್ಟ್ ಬಿಡುಗಡೆಯಾಗಲಿದೆ

ಈ ಬದಲಾವಣೆಯಿಂದ ಪ್ರಯಾಣಿಕರಿಗೆ ಹೆಚ್ಚಿನ ಸ್ಪಷ್ಟತೆ ಸಿಗಲಿದೆ. ಒಂದು ವೇಳೆ ವೇಟಿಂಗ್ ಲಿಸ್ಟ್‌ನಲ್ಲಿದ್ದ ಪ್ರಯಾಣಿಕರಿಗೆ ಟಿಕೆಟ್ ಸಿಗದೇ ಇದ್ದರೆ ಪರ್ಯಾಯ ಪ್ರಯಾಣ ವ್ಯವಸ್ಥೆಗಳನ್ನು ಮಾಡಲು ಸಮಯ ಸಿಗಲಿದೆ.

ಜುಲೈ 1 ರಿಂದ 2025 ರಿಂದ ಐಆರ್‌ಸಿಟಿಸಿ ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಶನ್ ಮೂಲಕ ಪರಿಶೀಲಿಸಿದ ಬಳಕೆದಾರರಿಗೆ ಮಾತ್ರ ತತ್ಕಾಲ್ ಟಿಕೆಟ್‌ಗಳನ್ನು ಬುಕ್ ಮಾಡಲು ಅನುಮತಿ ನೀಡಲಾಗುವುದು ಎಂದು ಭಾರತೀಯ ರೈಲ್ವೆ ಹೇಳಿದೆ.

ತತ್ಕಾಲ್ ಬುಕ್ಕಿಂಗ್‌ಗಳಿಗಾಗಿ ಒಟಿಪಿ ಆಧಾರಿತ ದೃಢೀಕರಣದ ಅನುಷ್ಠಾನವು ಜುಲೈ ಕೊನೆಯಿಂದ ಆರಂಭವಾಗಲಿದೆ. ಬಳಕೆದಾರರು ಆಧಾರ್ ಅಥವಾ ತಮ್ಮ ಡಿಜಿಲಾಕರ್ ಖಾತೆಗಳಲ್ಲಿ ಸಂಗ್ರಹವಾಗಿರುವ ಇತರ ಮಾನ್ಯ ಸರ್ಕಾರಿ ಗುರುತಿನ ದಾಖಲೆಗಳನ್ನು ಬಳಸಿಕೊಂಡು ತಮ್ಮ ಗುರುತನ್ನು ಪರಿಶೀಲಿಸಬೇಕಾಗುತ್ತದೆ.

ಈ ಹಿಂದೆ ಆಧಾರ್–ಪ್ರಮಾಣೀಕೃತ ಬಳಕೆದಾರು ಮಾತ್ರ ಜುಲೈ 1 ರಿಂದ ತತ್ಕಾಲ್ ಟಿಕೆಟ್‌ಗಳನ್ನು ಬುಕ್ ಮಾಡಬಹುದು ಎಂದು ಪ್ರಕಟಿಸಿತ್ತು ಸೆಪ್ಟೆಂಬರ್ ವೇಳೆ ಪ್ರಯಾಣಿಕರ ಹೊಸ ರಿಸರ್ವೇಷನ್ ವ್ಯವಸ್ಥೆ ಜಾರಿಗೆ ಬರಲಿದೆ. ಸದ್ಯ ಪ್ರತಿ ನಿಮಿಷಕ್ಕೆ 32 ಸಾವಿರ ಟಿಕೆಟ್ ಬುಕ್ಕಿಂಗ್ ಮಾಡಬಹುದು. ಆದರೆ ವೆಬ್‌ಸೈಟ್ ನವೀಕರಣಗೊಳಿಸಿದ ಬಳಿಕ ಪ್ರತಿ ನಿಮಿಷಕ್ಕೆ 1.50 ಲಕ್ಷ ಟಿಕೆಟ್ ಬುಕ್ ಮಾಡುವಂತೆ ಅಪ್‌ಗ್ರೇಡ್ ಹಾಗೂ ಬಹು ಭಾಷೆಗಳನ್ನು ಬೆಂಬಲಿಸುವ ಬಳಕೆದಾರ ಸ್ನೇಹಿ ಇಂಟರ್ಫೇಸ್ ಇರಲಿದೆ.

7ನೇ ವರ್ಷದ ಸವಿನೆನಪು



ಶ್ರೀ ಧರ್ಮಲಿಂಗಾಚಾರ್
ನಿಧನ: 1.7.2018
ಸದಾ ನಿಮ್ಮ ನೆನಪಿನಲ್ಲಿರುವ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

ಹುಟ್ಟುಹಬ್ಬದ ಸಂಭ್ರಮ



ಮೈಸೂರಿನ ಕೆ.ಜಿ.ಕೊಪ್ಪಲಿನ ಕಾರ್ತಿಕ್ ಗೌಡ (ಪಂಪ) ಅವರ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಮೈಸೂರು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್ ಗೌಡ, ಮೋಹನ್, ಕಿರಣ್, ವಿವೇಕ್, ದಾಸ, ಕನ್ನೇಗೌಡ ಟೈಗರ್ಸ್ ಹಾಗೂ ರಾಕೇಶ್ ಗೆಳೆಯರ ಬಳಗದವರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಅವ್ಯವಸ್ಥೆ ಖಂಡಿಸಿ ಇಂದು ಪ್ರತಿಭಟನೆ

ಮೈಸೂರು, ಜೂ.30– ಆಷಾಢ ಮಾಸದಲ್ಲಿ ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಭಕ್ತರಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸೇರಿದಂತೆ ಸಮರ್ಪಕ ಮೂಲ ಸೌಕರ್ಯ ಒದಗಿಸುವಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಹಾಗೂ ರಾಜ್ಯ ಸರ್ಕಾರ ವಿಫಲವಾಗಿರುವುದನ್ನು ಖಂಡಿಸಿ ನಾಳೆ(ಜು.1) ಬೆಳಗ್ಗೆ 11.30ಕ್ಕೆ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ, ಜಿಲ್ಲಾಡಳಿತದ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ 4 ದಿನ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್



ಬೆಂಗಳೂರು, ಜೂ.30– ರಾಜ್ಯದಲ್ಲಿ ಕೊಂಚ ಬಿಡುವು ನೀಡಿದ್ದ ಮಳೆರಾಯ ಇದೀಗ ಮತ್ತೆ ಅಬ್ಬರಿಸುವ ಸಾಧ್ಯತೆಯಿದ್ದು, ಜು.2ರಿಂದ 5ರವರೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಹವಾಮಾನ ಇಲಾಖೆ ಮಳೆ ಮುನ್ಸೂಚನೆ ನೀಡಿದ್ದು, ನಾಳೆ (ಜು.1) ಉಡುಪಿ, ದಕ್ಷಿಣ ಕನ್ನಡ ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ನೀಡಲಾಗಿದೆ. ಇನ್ನುಳಿದಂತೆ ಜು.2ರಿಂದ 5ರವರೆಗೆ ರಾಜ್ಯಾದ್ಯಂತ ಯೆಲ್ಲೋ ಅಲರ್ಟ್ ನೀಡಲಾಗಿದೆ.

AFFIDAVIT

I, Ananth, S/o. Chinnakaruppan age 34yrs R/o. 1/76, Mathukarampatti, Sattambadi, Dindigul, Tamilnadu-624 401 & employee of Star Knowledge, PF No.KN/MYS/1073014000 UAN 100565 960421, in my PF records my name mentioned as Ananda.K & my father's as Karupaiah. Hence, I request the concern to change my name as Ananth & my father's name as Chinnakaruppan in my PF recordes vide affidavit sworn in before notary C.Mangala dated 28.6.25.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಉಸ್ತುವಾರಿ ಸುರ್ಜೇವಾಲ ಶಾಸಕರಿಂದ ಅಭಿಪ್ರಾಯ ಸಂಗ್ರಹ

ಸಿದ್ದರಾಮಯ್ಯ ಸಂಪುಟದ ಕೆಲ ಸಚಿವರು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ!

- ಆಡಳಿತಾರೂಢ ಶಾಸಕರಿಂದ ದೂರು
- ಪಂಚ ಗ್ಯಾರಂಟಿ ಯೋಜನೆ ಒಳ್ಳೆಯದೆ; ಆದರೆ ಸಚಿವರು, ಅಧಿಕಾರಿಗಳ ಎಡವಟ್ಟಿನಿಂದ ಪಕ್ಷಕ್ಕೆ ಮುಂದಿನ ಚುನಾವಣೆಯಲ್ಲಿ ಮುಳ್ಳಾಗುತ್ತೆ



> ಮಾಧ್ಯಮದಲ್ಲಿ ಬರುತ್ತಿರುವ ನಾಯಕತ್ವ ಬದಲಾವಣೆ ಕೇವಲ ಊಹಾಪೋಹ. ಅದೆಲ್ಲವೂ ನಿಮ್ಮ ಕಲ್ಪನೆ ಮಾತ್ರ. ಪಕ್ಷದ ಶಾಸಕರ ಭೇಟಿ ನಿರಂತರ ಪ್ರಕ್ರಿಯೆ. ಇದು ಒಂದು ತಿಂಗಳು ಅಥವಾ ಒಂದೂವರೆ ತಿಂಗಳು ನಡೆಯಲಿದೆ. ಈ ಸಮಯದಲ್ಲಿ ಪಕ್ಷದ ಶಾಸಕರು, ಸಂಸದರು, ಪರಾಜಿತ ಅಭ್ಯರ್ಥಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ಮುಖ್ಯಸ್ಥರನ್ನು ಭೇಟಿ ಮಾಡುತ್ತೇನೆ. ಬಳಿಕ ಸಿಎಂ ಹಾಗೂ ಡಿಸಿಎಂ ಜೊತೆಗೂ ಅಭಿವೃದ್ಧಿ ವಿಚಾರವಾಗಿ ಮಾತನಾಡುತ್ತೇವೆ. ರಾಜ್ಯ ಸರ್ಕಾರ ಎರಡು ವರ್ಷಗಳನ್ನು ಪೂರೈಸಿರುವುದರಿಂದ ಆಯಾ ವಿಧಾನಸಭಾ ಕ್ಷೇತ್ರಗಳಲ್ಲಿ ಗ್ಯಾರಂಟಿ ಯೋಜನೆ ಬಗ್ಗೆ ಶಾಸಕರಿಂದ ಮಾಹಿತಿ ಪಡೆಯುತ್ತಿದ್ದೇವೆ. ಪಕ್ಷ ಸಂಘಟನೆ ಅವರವರ ಕ್ಷೇತ್ರದಲ್ಲಿ ಹೇಗಿದೆ. ಮುಂಚೂಣಿ ಘಟಕಗಳು ಹೇಗೆ ಕೆಲಸ ಮಾಡುತ್ತಿವೆ ಎಂಬ ರಿವ್ಯೂ ಮಾಡುತ್ತಿದ್ದೇವೆ. ಎಷ್ಟು ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳಾಗುತ್ತಿವೆ ಅನ್ನೋದರ ಬಗ್ಗೆ ಮಾಹಿತಿ ಪಡೆಯುತ್ತೇವೆ.
> - ರಣದೀಪ್ ಸಿಂಗ್ ಸುರ್ಜೇವಾಲ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ.

> ನಾಯಕತ್ವ ಬದಲಾವಣೆ ಬಗ್ಗೆ ಕೆಲ ಸಚಿವರು, ಶಾಸಕರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಸ್ವಲ್ಪ ಮಟ್ಟಿಗೆ ಅದು ತಪ್ಪು ಎಂದು ನಾನು ಭಾವಿಸುವುದಿಲ್ಲ. ಆದರೆ ಪಕ್ಷ ಹಾಕಿದ ಲಕ್ಷ್ಮಣ ರೇಖೆಯನ್ನು ಯಾರೂ ದಾಟಬಾರದು. ಆ ಬಗ್ಗೆ ಎಐಸಿಸಿ ಉಸ್ತುವಾರಿ ಪ್ರಧಾನ ಕಾರ್ಯದರ್ಶಿಗಳು ಪರಿಶೀಲಿಸುತ್ತಾರೆ. ಮಾತನಾಡದಂತೆ ಶಾಸಕರಿಗೆ ಸುರ್ಜೇವಾಲ ಕಟ್ಟುನಿಟ್ಟಾಗಿ ಹೇಳಬಹುದು. ರಾಜ್ಯಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸ ಆದಾಗ ಹೈಕಮಾಂಡ್ ಸರಿಪಡಿಸುತ್ತೆ. ಹಿಂದೆಯೂ ಇಲಾಖಾ ಪ್ರಗತಿ ಬಗ್ಗೆ ಹೈಕಮಾಂಡ್‌ನವರು ಬಂದು ಮಾಹಿತಿ ಪಡೆಯುತ್ತಿದ್ದರು. ನಮಗೆಲ್ಲ ಮಾರ್ಗದರ್ಶನ ಮಾಡುವವರೇ ಹೈಕಮಾಂಡ್. ಹಾಗಂತ ಸಿಎಂ ಅವರು ಹಿಡಿತ ಕಳೆದುಕೊಂಡಿದ್ದಾರೆ ಅಂದುಕೊಳ್ಳಬಾರದು. ಹೈಕಮಾಂಡ್‌ನವರು ಬಂದಾಗ ನಮ್ಮ ಆಡಳಿತ ಹೇಗಿದೆ ಎಂದು ಅರಿವಾಗುತ್ತದೆ.
> - ಡಾ. ಜಿ.ಪರಮೇಶ್ವರ್, ಗೃಹ ಸಚಿವರು.

ಬೆಂಗಳೂರು, ಜೂ. 30(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಕೆಲವು ಸಚಿವರು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದಕ್ಕಿಂತ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ ಎಂದು ಆಡಳಿತಾರೂಢ ಶಾಸಕರೇ ವರಿಷ್ಠರ ಮುಂದೆ ದೂರಿದ್ದಾರೆ.

ಪಂಚ ಯೋಜನೆಗಳನ್ನು ಲೋಪವಿಲ್ಲದೆ ಮುಂದುವರೆಸಿದರೆ ನಾವು ರಾಜ್ಯದಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಬಹುದು. ಆದರೆ, ಸಚಿವರುಗಳ ಎಡವಟ್ಟು ಮತ್ತು ಅಧಿಕಾರಿಗಳ ಬೇಜವಾಬ್ದಾರಿ ನಮಗೆ ಮುಳುವಾಗಬಹುದು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನೀವು ಮುಂದೆ ಯಾವ ಅಧಿಕಾರ ಕೊಡಬೇಕೆಂದಿದ್ದೀರೋ, ಅದನ್ನು ಆದಷ್ಟು ಬೇಗ ಕೊಡಿಸಿ ಎನ್ನುವ ಮೂಲಕ ಸೆಪ್ಟೆಂಬರ್–ಅಕ್ಟೋಬರ್ ಕ್ರಾಂತಿಗೆ ವೇದಿಕೆ ಸಿದ್ಧಪಡಿಸಿದಂತಿದೆ.

ಆಡಳಿತಶಾಹಿ ಹಾಗೂ ಸಚಿವರೇ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಂದು ಪಕ್ಷದ ಕೆಲವು ಶಾಸಕರು ಆರೋಪ ಮಾಡಿದ ಹಿನ್ನೆಲೆಯಲ್ಲಿ ಶಾಸಕರ ಧ್ವನಿಗೆ ಸ್ಪಂದಿಸಲು ವರಿಷ್ಠರು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಿದ್ದಾರೆ.

ವರಿಷ್ಠರ ಆದೇಶದಂತೆ ಸುರ್ಜೇವಾಲ ಕೆಪಿಸಿಸಿ ಕಚೇರಿಯಲ್ಲೇ ಶಾಸಕರ ಜೊತೆ ಮುಖಾಮುಖಿಯಾಗಿ, ಗೌಪ್ಯವಾಗಿ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ.

ತಮಗೆ ದೊರೆತ ಅವಕಾಶವನ್ನು ಶಾಸಕರು, ಕಷ್ಟ–ಸುಖ ಸೇರಿದಂತೆ ಮೇಲೆ ತಿಳಿಸಿದ ಅಂಶಗಳನ್ನು ಒಳಗೊಂಡಂತೆ ಅಳಲನ್ನು ತೋಡಿಕೊಂಡಿದ್ದಾರೆ.

ಅಭಿವೃದ್ಧಿಗೆ ಹಣ ಬಿಡುಗಡೆ ಆಗದೆ, ಕ್ಷೇತ್ರಗಳಲ್ಲಿ ಮೂಲಸೌಕರ್ಯ ಕಲ್ಪಿಸಲಾಗಿಲ್ಲ, ಪಕ್ಷದ ಕಾರ್ಯಕರ್ತರಿಗೂ ಕೆಲಸದ ಗುತ್ತಿಗೆ ಇಲ್ಲ, ನಾವು ಸಂಘಟನೆ ಮಾಡಬೇಕೆಂದರೆ, ಎಲ್ಲರ ವಿಶ್ವಾಸ, ಪಕ್ಷ ಮತ್ತು ಸರ್ಕಾರದ ನೆರವಿನ ಅಗತ್ಯವಿದೆ ಎಂದಿದ್ದಾರೆ.

ಸುರ್ಜೇವಾಲ ಮೂರು ದಿನಗಳ ಕಾಲ 40 ರಿಂದ 50 ಶಾಸಕರಿಂದ ಮೊದಲ ಹಂತದಲ್ಲಿ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ.

ಕೆಪಿಸಿಸಿ ಸಿದ್ಧಪಡಿಸಿದಂತೆ ಮೊದಲ ಹಂತದಲ್ಲಿ ಸುರ್ಜೇವಾಲ ಅವರನ್ನು ಭೇಟಿ ಮಾಡಿ ಅಭಿಪ್ರಾಯ ಹೇಳುತ್ತಿರುವವರಲ್ಲಿ ಡಿ.ಕೆ.ಶಿವಕುಮಾರ್ ಕಡೆಯವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಗ್ಯಾರಂಟಿ ಅನುಷ್ಠಾನದ ಬಗ್ಗೆ, ಶಾಸಕರ ಕ್ಷೇತ್ರಗಳಲ್ಲಿ ಆಗಬೇಕಿರುವ ಅಭಿವೃದ್ಧಿ ಕೆಲಸಗಳ ಕುರಿತು, ಸರ್ಕಾರ ಮತ್ತು ಪಕ್ಷ ಕ್ಷೇತ್ರದಲ್ಲಿ ಯಾವ ರೀತಿ ಹೊಂದಾಣಿಕೆ ಮಾಡಿಕೊಂಡು ಹೋಗುತ್ತಿದೆ.

ಬ್ಲಾಕ್ ಕಾಂಗ್ರೆಸ್ ಪರಿಪೂರ್ಣವಾಗಿ ಕೆಲಸ ಮಾಡುತ್ತಿದೆಯೇ, ಕಾರ್ಯಕರ್ತರು ಸಕ್ರಿಯವಾಗಿದ್ದಾರೆಯೇ, ನಿಗಮ–ಮಂಡಳಿಗಳಿಗೆ ನಿಮ್ಮ ಕ್ಷೇತ್ರದಿಂದ ನೇಮಕವಾಗುವ ಅರ್ಹತೆ ಇರುವವರು ಯಾರು ಎಂಬೆಲ್ಲಾ ಪ್ರಶ್ನೆಗಳಿಗೆ ವರದಿ ನೀಡುವಂತೆ ಸುರ್ಜೇವಾಲ ಕೇಳಿದ್ದಾರೆ.

ನೀವು ಮುಕ್ತವಾಗಿ ಪಕ್ಷ, ಸರ್ಕಾರ, ಸಚಿವರು ಹಾಗೂ ಮುಖಂಡರ ಬಗ್ಗೆ ಅಭಿಪ್ರಾಯಗಳನ್ನು ಹೇಳಿಕೊಳ್ಳಬಹುದು, ಅದನ್ನು ಗೌಪ್ಯವಾಗಿ ಎಐಸಿಸಿ ಅಧ್ಯಕ್ಷರ ಗಮನಕ್ಕೆ ತರಲಾಗುವುದು ಎಂದಿದ್ದಾರೆ.

ಸುರ್ಜೇವಾಲ ಅವರ ಕೊನೆ ಪ್ರಶ್ನೆಯೇ ಶಾಸಕರಲ್ಲಿ ಹುಮ್ಮಸ್ಸು ತಂದು, ತಮ್ಮ ರಾಜಕೀಯ ಅಭಿಪ್ರಾಯಗಳನ್ನು ಮುಕ್ತವಾಗಿ ತೆರೆದಿಟ್ಟಿದ್ದಾರೆ.

ಸುರ್ಜೇವಾಲ ಅವರನ್ನು ಭೇಟಿ ಮಾಡಿ ಮುಕ್ತವಾಗಿ ಚರ್ಚಿಸುವಂತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಶಿವಕುಮಾರ್, ತಮ್ಮ ಆಪ್ತ ಶಾಸಕರಿಗೆ ದೂರವಾಣಿ ಮೂಲಕ ಸಂದೇಶ ರವಾನಿಸಿದ್ದಾರೆ.

ಇಂದು ಸುರ್ಜೇವಾಲ ಭೇಟಿ ಮಾಡಿದ ಕೆಲವು ಶಾಸಕರಿಗೆ ಹಿಂದಿ ಮತ್ತು ಇಂಗ್ಲಿಷ್ ಗೊತ್ತಿರದ ಕಾರಣ ಭಾಷೆ ಗೊತ್ತಿರುವವರ ಮೂಲಕ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

ಶಾಸಕರ ಅಭಿಪ್ರಾಯ ಸಂಗ್ರಹಣೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಸುರ್ಜೇವಾಲ, ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆ, ಶಾಸಕರ ಕ್ಷೇತ್ರದಲ್ಲಿ ಪಕ್ಷ ಸಂಘಟನೆ, ಮುಂಚೂಣಿ ಘಟಕಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ, ಸರ್ಕಾರದ ಮಟ್ಟದಲ್ಲಿ ಆಗಬೇಕಿರುವ ಕೆಲಸ ಸೇರಿದಂತೆ ಇತರ ವಿಷಯಗಳ ಕುರಿತು ಮುಕ್ತವಾಗಿ ಮತ್ತು ಗೌಪ್ಯವಾಗಿ ಅಭಿಪ್ರಾಯಗಳನ್ನು ಆಲಿಸುತ್ತೇನೆ ಎಂದರು.

ಸಾರ್ವಜನಿಕವಾಗಿ ಚರ್ಚಿತವಾಗುತ್ತಿರುವ ನಾಯಕತ್ವ ಬದಲಾವಣೆ ವಿಚಾರ ಕೇವಲ ಊಹಾಪೋಹ ಮತ್ತು ಮಾಧ್ಯಮಗಳ ಕಲ್ಪನೆ ಎಂದರು.